ಗಳಲ್ಲಿಯೂ ಮೈಸೂರು ಸ್ವತಂತ್ರ ರಾಜ್ಯವಾಗಿ ಸ್ಥಾಪನೆಯಾದಂದಿನಿಂದ ಯದು ಕಾಲದ ಅರಸರ ಮುಖಂಡತ್ವದಲ್ಲಿ ಅಲ್ಲಿಂದ ಸಾಕಷ್ಟು ತನ್ನದೇ ಆದಂಥ ಸಾಹಿತ್ಯ, ಶಿಲ್ಪಕಲೆ, ಕರ್ಣಾಟಕ ರಾಜ್ಯವಾಗಿ ತನ್ನ ಕೀರ್ತಿಯನ್ನೂ, ಯಶಸ್ವಿಯನ್ನೂ ಗಳಿಸಿಕೊಂಡು ಬಂದಿದೆ. ಇವತ್ತು ಇದರ ಬಗ್ಗೆ ನಾನು ಹೆಚ್ಚು ಮಾತ ನಾಡುವುದಕ್ಕೆ ಹೋಗುವುದಿಲ್ಲ, ನಾನು ಒಂದು ನಿರ್ಣಯವನ್ನು ಸ್ವಾಗತ ಮಾಡುವ ಕಾಲದಲ್ಲಿ ಹೆಚ್ಚು ಕಂಟ್ರೋವರ್ಸಿ ಬೇಡವೆಂದು ಹೇಳಿದ್ದೇನೆ. ಇವತ್ತು ಮಾನ್ಯ ಶ್ರೀ ರಾಜಗೋಪಾಲಾಚಾರಿಯವರ ವಿಷಯವಾಗಿ ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ಈ ವಿಚಾರದಲ್ಲಿ ಕವಿಗಳು ಒಂದು ರೀತಿಯಲ್ಲಿ ವರ್ಣನೆ ಮಾಡಿದರೆ ಅದೇನೂ ತಪ್ಪಲ್ಲ. ಇದನ್ನು ಅರಿತುಕೊಂಡು ರಾಜಕಾರಿಣಿಗಳು ಇಂದಲ್ಲ, ನಾಳೆ ಕನ್ನಡದ ಹಲವಾರು ಭಾಗಗಳು ಒಂದುಗೂಡುತ್ತವೆಂಬ ದೃಷ್ಟಿಯಿಂದ ಇದನ್ನು ಉಪಯೋಗಮಾಡಿ ಈ ಒಂದು ಕಾರ್ಯಕ್ಕೆ ಪ್ರಯತ್ನ ಮಾಡಿದರು. ಇವತ್ತು ಅದರ ಫಲ ಸಿಕ್ಕಿದೆ. ಇದರಲ್ಲಿರುವ ಸತ್ಯಾಂಶ ಇಷ್ಟೇ ಇವತ್ತು ಹಲವಾರು ಜನರು ಇದಕ್ಕೆ ಪ್ರಯತ್ನ ಮಾಡಿರಬಹುದು. ಆದರೆ ದುರಾದೃಷ್ಟದಿಂದ ಅವರ ಕಾಲದಲ್ಲಿ ಕರ್ಣಾಟಕವೆಂಬ ಹೆಸರನ್ನು ಈ ರಾಜ್ಯಕ್ಕೆ ಪಡೆಯುವುದಕ್ಕಾಗಲಿಲ್ಲ. ಮಾನ್ಯ ಶ್ರೀ ನಿಜಲಿಂಗಪ್ಪ ನವರ ಮೇಲೆ ನನಗೆ ವಿಶಾಲವಾದ ಪ್ರೇಮವಿದೆ. ಆ ರೀತಿ ಪ್ರೇಮ ನನಗೆ ಇದೆಯೆಂದು ನಾನು ಈಗ ಹೇಳುತ್ತಾ ಇಲ್ಲ. ಇವತ್ತು ರಾಜಕೀಯದಲ್ಲಿ ಅವರ ಬಗ್ಗೆ ಮಾತನಾಡಲಿ, ಅದು ಒಂದು ಬೇರೆ ವಿಷಯ. ಕರ್ಣಾಟಕ ರಾಜ್ಯದ ಗುರಿಯನ್ನು ಸಾಧಿಸುವುದಕ್ಕೆ ಅವರು ಬೇಕಾದಷ್ಟು ಶ್ರಮಿಸಿದ್ದಾರೆಂದು ಹೇಳಿದರೆ ಖಂಡಿತವಾಗಿ ತಪ್ಪಾಗಲಾರದು. ಆದರೆ ರಾಜಕೀಯದಲ್ಲಿ ಅವರನ್ನು ಎಳೆಯುವುದು ಬೇರೆ. ಅವರ ಕಾಲದಲ್ಲಿ ಇದು ಆಗಲಿಲ್ಲ. ಅದು ಒಂದು ದುರ್ದೈವ. ಒಂದು ಸಂತೋಷವೇನೆಂದರೆ, ಇದಕ್ಕೆ ಯಾರು ವಿರೋಧವಾಗಿದ್ದರೋ ಅವರು ಇವತ್ತು ಈ ನಿರ್ಣಯವನ್ನು ಮಂಡಿಸುತ್ತಿದ್ದಾರೆ. ಇದರಿಂದ ಮಾನ್ಯ ಶ್ರೀ ಹನುಮಂತಯ್ಯನವರು ಅಧಿಕಾರವನ್ನು ಕಳೆದುಕೊಳ್ಳುವ ಪರಿಸ್ಥಿತಿ ಬಂತು. He is the first victim after Karnataka States Reorganisation. ಇನ್ನೊಂದು ಹೆಜ್ಜೆ ಮುಂದುವರಿದು ಹೇಳುವುದಾದರೆ, ವಿಧಾನಸೌಧ ಕಟ್ಟುವಾಗ ಅವರಿಗೆ ಒಂದು ಏಟು ಬಿತ್ತು. ವಿಧಾನಸೌಧ ಕಟ್ಟಡವೇನೋ ಆಯಿತು. ಅವರು ಮುಖ್ಯಮಂತ್ರಿಯಾಗುತ್ತಾರೆಂದು ಕಟ್ಟಡ ಕಟ್ಟುವಾಗಲೇ ಅನೇಕರು ಅವರನ್ನು ಹಿಯ್ಯಾಳಿಸಿ ಮಾತನಾಡಿದರು. ಪ್ರತಿಯೊಬ್ಬ ಮೇಸ್ತ್ರಿ ಎಷ್ಟರಮಟ್ಟಿಗೆ ಸೂಪರ್‌ವೈಜ್ ಮಾಡುತ್ತಾನೆಂದು ಪ್ರತಿನಿತ್ಯವೂ ತುಂಬಾ ನಿಷ್ಠೆಯಿಂದ ಕಟ್ಟಡದ ಕೆಲಸಕಾರ್ಯಗಳನ್ನು ಹೆಚ್ಚು ಹೆಚ್ಚಾಗಿ ಅವರೇ ಖುದ್ದಾಗಿ ಇನ್‌ಸ್ಪೆಕ್ಷನ್ ಮಾಡುತ್ತಿದ್ದರು ಈ ಕಟ್ಟಡದ ಕಲಾ ಕೌಶಲ್ಯ ಇಂತಹ ಒಂದು ವಿಧಾನಸಭಾ ಸಭಾಂಗಣ ಬೇರೆ ಎಲ್ಲಿಯೂ ಇಲ್ಲ. ಆ ಒಂದು ಮಟ್ಟದಲ್ಲಿ ತಮ್ಮ ಸ್ವಂತ ಜವಾಬ್ದಾರಿಯಿಂದ ಹಾಗೂ ತಮ್ಮ ಸ್ವಂತ ವಿಚಕ್ಷಣೆಯಿಂದ ಈ ಒಂದು ಕಟ್ಟಡವನ್ನು ಕಟ್ಟಲು ವ್ಯವಸ್ಥೆ ಮಾಡಿದರು. ಈಗ ಇದು ಕಾಕತಾಳನ್ಯಾಯದ ಹಾಗೆ ಆಗಿಹೋಗಿದೆ. ಕೇಂದ್ರಸರ್ಕಾರ ಅವರನ್ನು ಮಂತ್ರಿಮಂಡಲದಿಂದ ಕಿತ್ತು ಹಾಕಿತು. ಆಮೇಲೆ ಇಲ್ಲಿ ಈ ಒಂದು ನಿರ್ಣಯ ಬಂದು, ಇವತ್ತು ಕರ್ಣಾಟಕ ಫಾರ್ಮೇಷನ್ ಆಯಿತು. ಅವರು ಆ ಅಧಿಕಾರ ದಿಂದ ಮನೆಗೆ ಬಂದ ಮೇಲೆ ಈ ನಿರ್ಣಯವನ್ನು ಇಲ್ಲಿ ತಂದಿದ್ದಾರೆ. ಈ ವಿಚಾರದಲ್ಲಿ ಶ್ರೀ ಮಾನ್ ನಿಜಲಿಂಗಪ್ಪನವರೂ ಮತ್ತು ಶ್ರೀ ಮಾನ್ ಹನುಮಂತಯ್ಯನವರೂ ಬಹಳವಾಗಿ ಶ್ರಮಪಟ್ಟಿದ್ದಾರೆ. ಅದರ ಬಗ್ಗೆ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಇವತ್ತು ನೀವು ನಮ್ಮ ರಾಜ್ಯಕ್ಕೆ ಕರ್ಣಾಟಕವೆಂದು ನಾಮಕರಣ ಮಾಡುತ್ತಿದ್ದೀರಿ. ಇದು ಇನ್ನೂ ಪಾರ್ಲಿಮೆಂಟಿನಲ್ಲಿ ಒಪ್ಪಿಗೆಯಾಗಬೇಕು. ಇದೇ ಸಂದರ್ಭದಲ್ಲಿ ಒಂದು ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಇಲ್ಲಿ ಏನು ಹೇಳಿದರೂ ಕನ್ನಡ ಪ್ರದೇಶಗಳು ಇನ್ನೂ ಹೊರಗಡೆ ಉಳಿದಿವೆ. ಅವನ್ನೆಲ್ಲಾ ಇದುವರೆಗಾಗಲೇ ನಮ್ಮ ನಮ್ಮ ರಾಜ್ಯಕ್ಕೆ ಸೇರಿಸಿದ್ದಿದ್ದರೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ವೀರ ಅಭಿಮನ್ಯು ಎಂಬುದಾಗಿ ಕರೆಯುವುದನ್ನು ಖಂಡಿತವಾಗಿ ಸ್ವಾಗತ ಮಾಡುತ್ತಿದ್ದೆ. ಆದ್ದರಿಂದ ಈಗಲಾದರೂ ಸೋಲಾಪುರ, ಕಾಸರ ಗೋಡು ಅಕ್ಕಲಕೋಟೆ—ಇನ್ನೂ ಹಲವಾರು ಪ್ರದೇಶಗಳು ಹೊರಗೆ ಇರುವುದನ್ನು ಈ ಒಂದು ರಾಜ್ಯಕ್ಕೆ ಒಟ್ಟುಗೂಡಿಸುವ ಪ್ರಯತ್ನವನ್ನು ಮಾಡಬೇಕು. ಹೊಸ ಸರ್ಕಾರ ಪ್ರಾರಂಭವಾದಮೇಲೆ ನಮ್ಮ ಮತ್ತು ಕೇಂದ್ರ ಸರ್ಕಾರದ ಮಧುರ ಬಾಂಧವ್ಯ ಉದಯವಾಯಿತೆಂದು ಹೇಳಿದರು. ಈ ಒಂದು ಮಧುರ ಬಾಂಧವ್ಯದ ಪರಿಣಾಮ ಹೊರಗಡೆ ಇರತಕ್ಕ ಹಲವಾರು ಪ್ರದೇಶಗಳು ಏನು ಈ ರಾಜ್ಯಕ್ಕೆ ಸೇರಿಸ ಬೇಕಾಗಿತ್ತೋ ಅವುಗಳನ್ನು ಸೇರಿಸುವ ಬಗ್ಗೆ ನಿಮ್ಮ ನಾಯಕರು ಎಷ್ಟರಮಟ್ಟಿನ ಪ್ರಯತ್ನ ಮಾಡುತ್ತಾರೆ ಆ ಪ್ರಯತ್ನ ಮಾಡುವುದನ್ನು ಅವಲಂಬಿಸಿರುತ್ತದೆ. ಇಂದು ಅಂತಹ ಒಂದು ಪ್ರಯತ್ನವನ್ನು ಮಾಡ ದ್ದಿದ್ದರೆ ಈ ಸಭೆಯಲ್ಲಿ ಯೂನಾನಿಮಸ್ಸಾಗಿ ನಿಮ್ಮನ್ನು ಕರ್ಣಾಟಕದ ವೀರಾಭಿಮನ್ಯು ಎಂಬುದಾಗಿ ಒಂದು ನಿರ್ಣಯ ಮಾಡಿ ಕರೆಯಬಹುದಾಗಿತ್ತು. ಇದರ ಬಗ್ಗೆ ನಾನು ಇನ್ನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಏನು ಒಂದು ಇಂತಹ ನಿರ್ಣಯ ಇವತ್ತು ಆಗಿದೆಯೋ ಅದು ನಿಜಕ್ಕೂ ಸ್ವಾಗತಾರ್ಹ

ವಾದುದು ಎಂಬುದಾಗಿ ಹೇಳಿ ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

‡ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ದಾವಣಗೆರೆ).—ಮಾನ್ಯ ಅಧ್ಯಕ್ಷಿಣಿಯವರೇ, ಈ ದಿವಸ ಈ ಸಭೆಯ ಮುಂದೆ ಇಟ್ಟಿರುವ ಈ ನಿರ್ಣಯಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ಸೂಚಿಸಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾವ ದೇಶವಾದರೂ ಸರಿ, ಅಲ್ಲಿಯ ಭಾಷೆ, ಆ ದೇಶದ ಹೆಸರಿಗೆ ತುಂಬಾ ನಿಕಟಸಂಬಂಧ ಇದ್ದೇ ಇರುತ್ತದೆ. ನಾವು ಕೆಲವಾರು ದೇಶಗಳ ಹೆಸರನ್ನು ನೋಡಿದರೆ, ಜರ್ಮನಿಯಲ್ಲಿ ಜರ್ಮನ್ ಭಾಷೆ, ಫ್ರಾನ್ಸ್‌ನಲ್ಲಿ ಫ್ರೆಂಚ್ ಭಾಷೆ, ರಷ್ಯಾದಲ್ಲಿ ರಷ್ಯನ್ ಭಾಷೆ ಇದೆ. ಹಾಗೆಯೇ ಇಂಡಿಯಾ ದೇಶದಲ್ಲಿಯೂ ಕೂಡ ಬಂಗಾಳಿ ಭಾಷೆ ಮಾತನಾಡುವ ಪ್ರದೇಶವನ್ನು ಬಾಂಗ್ಲಾ ಎಂದು ಒಂದು ದೇಶದ ಭಾಷೆ, ದೇಶದ ಹೆಸರಿನಲ್ಲಿ ಒಂದು ಸಂಪರ್ಕವನ್ನು ನಾವು ಕಾಣುತ್ತಿದ್ದೇವೆ ಆದರೆ ಈ ದಿಕ್ಕಿನಲ್ಲಿ ನಮ್ಮ ನೆರೆಹೊರೆಯ ಸಂಸ್ಥಾನಗಳವರು ಈ ಬಗ್ಗೆ ಎಚ್ಚೆತ್ತರು. ಸ್ವಾತಂತ್ರ್ಯ ಬಂದು ೨೫ ವರ್ಷಗಳಾದರೂ, ಭಾಷಾವಾರು ಪ್ರಾಂತ ರಚನೆಯಾಗಿ ೧೬ ವರ್ಷಗಳಾದರೂ ನಾವು ಹಿಂದೆ ಮಾಡಿದಂಥ ಒಂದು ಸಾಧನೆಯನ್ನು ಈಗಲಾದರೂ ಕಾರ್ಯಗತ ಮಾಡುವುದಕ್ಕೆ ಅನುಕೂಲವಾದುದಕ್ಕಾಗಿ ಈ ದಿವಸ ಸಂತೋಷಪಡಬೇಕಾಗಿದೆ. ನಿಜವಾಗಿಯೂ ಈ ಹೆಸರಿನ ಬಗ್ಗೆ ತುಂಬಾ ಸಂತೋಷವಾಗಿದೆ. ೧೮೫೬ರಲ್ಲಿ ಕರ್ಣಾಟಕವೆಂಬ ಹೆಸರಿನ ಬಗ್ಗೆ ನಮ್ಮ ಚಳುವಳಿ ಶುರುವಾಯಿತು. ೧೮೯೦ರಲ್ಲಿ ಕನ್ನಡ ವಿದ್ಯಾವರ್ಧಕ ಸಂಘ ಪ್ರಾರಂಭವಾಯಿತು. ಚಳುವಳಿ ಪ್ರಾರಂಭವಾಗಿ ೧೧೬ ವರ್ಷಗಳಾದ ಮೇಲೆ ೧೯೭೨ರಲ್ಲಿ ನಾವು ನಮ್ಮ ರಾಜ್ಯಕ್ಕೆ ಕರ್ಣಾಟಕ ಎಂಬುದಾಗಿ ಹೆಸರನ್ನು ಇಡುವ ಒಂದು ಸಾಧನೆಯನ್ನು ಸಾಧಿಸಿದ್ದೇವೆ. ಕರ್ಣಾಟಕವೆಂಬ ಹೆಸರನ್ನು ನಮ್ಮ ಹಿಂದಿನ ಗ್ರಂಥಗಳಲ್ಲಿ ಪುರಾಣಗಳಲ್ಲಿ ನಾವು ಕಾಣುತ್ತಿದ್ದೇವೆ. ಮಹಾಭಾರತದಲ್ಲಿಯೂ ನಮ್ಮ ಕರ್ಣಾಟಕದ ಬಗ್ಗೆ ಒಂದು ಹಿರಿಮೆಯನ್ನು ನಾವು ಕಾಣುತ್ತಿದ್ದೇವೆ. ಶ್ರವಣಬೆಳಗೊಳದಲ್ಲಿ ಅನೇಕ ಶಾಸನಗಳಲ್ಲಿಯೂ ಈ ಪದ ಉಪಯೋಗ ಮಾಡಿರುವುದನ್ನು ನಾವು ಕಾಣುತ್ತಿದ್ದೇವೆ ಅಲ್ಲದೆ ಕರ್ಣಾಟಕದ ಕವಿಗಳು ಎಲ್ಲರೂ ಸಹ ಏಕಕಂಠದಿಂದ ಈ ಹೆಸರನ್ನು ತೀರ್ಮಾನಮಾಡಲು ಮುಂದೆ ಬಂದಿದ್ದಾರೆ.

ನಾವು ಚರಿತ್ರೆಯಲ್ಲಿ 'ಕರ್ನಾಟಕ ರತ್ನಸಿಂಹಾಸನಾಧೀಶ್ವರ' ಎಂದು ಬರೆದಿರುವುದನ್ನು ಕಾಣುತ್ತೇವೆ ಮತ್ತು ಓದುತ್ತೇವೆ. ಅಷ್ಟೇ ಅಲ್ಲದೆ ಕರ್ನಾಟಕ ಸಂಗೀತ, ಕರ್ನಾಟಕದ ಕಲೆ, ಕರ್ನಾಟಕದ ಸಂಸ್ಕೃತಿಗಳು ಜಗತ್ಪ್ರಸಿದ್ಧಿಯಾಗಿವೆ. ಇನ್ನು ನಮ್ಮಲ್ಲಿ ಚರ್ಚೆಗೆ ಅವಕಾಶ ಕೊಟ್ಟಿರತಕ್ಕ ಒಂದು ವಿಷಯ ಎಂದರೆ ಕರ್ನಾಟಕ ಎಂಬುದನ್ನು 'ಕರ್ಣಾಟಕ' ಎಂದು ಹೇಳಬೇಕೇ ಅಥವಾ 'ಕರ್ನಾಟಕ' ಎಂದು ಹೇಳಬೇಕೇ ಎಂಬುದು ಈ ವಿಷಯದಲ್ಲಿ ಅಂದರೆ 'ನ' ಮತ್ತು 'ಣ' ವಿಚಾರದಲ್ಲಿ ಸಾಕಷ್ಟು ಚರ್ಚೆ ನಡೆದು 'ನ' ಎಂದರೆ ಸುಲಲಿತವಾಗಿರುತ್ತೆಂದೂ ಮತ್ತು 'ಣ' ಎಂದರೆ ಕರ್ಕಶವೆಂದೂ ತೀರ್ಮಾನವಾಗಿ ಈಗ 'ನ' ಇರಬೇಕೆಂದು ತೀರ್ಮಾನವಾಗಿದೆ. ಇಂಥ ಒಂದು ನಿರ್ಣಯವನ್ನು ನಮ್ಮ ಮುಖ್ಯ ಮಂತ್ರಿಗಳು ಮಂಡಿಸಿದ್ದಕ್ಕೆ ನಾನು ಅವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇಂಥ ಒಂದು ಸಂತೋಷದ ಕಾಲದಲ್ಲಿ ಸಭೆಯ ಅಧ್ಯಕ್ಷರು ಒಬ್ಬ ಮಹಿಳೆಯರಿರುವುದಂತೂ ನಮಗೆಲ್ಲಾ ಬಹಳ ಸಂತೋಷವನ್ನುಂಟುಮಾಡಿದೆ. ಅಲ್ಲದೆ ಇವರ ಅಧ್ಯಕ್ಷತೆಯಲ್ಲಿ ಇಂಥ ಒಂದು ಮಹತ್ಕಾರ್ಯ ಸಾಧನೆಯಾದುದರಿಂದ ಅವರಿಗೂ ಕೂಡ ನಾನು ಮಹಿಳೆಯರ ಪರವಾಗಿ ನನ್ನ ಪರವಾಗಿ ಅಭಿನಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

‡ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಮಾನ್ಯ ಅಧ್ಯಕ್ಷರೇ, ಈ ಹೊತ್ತಿನ ದಿನ ನನಗೆ ಬಹಳ ಆನಂದವಾಗಿದೆ. ಈ ದಿವಸ ಏನಿದೆ ಇಂದು ಒಂದು ಮಹತ್ತರವಾದ ದಿನ, ಹಾಗೂ ಸಂತೋಷದ ದಿನ ಎಂದು ನಾನು ಭಾವಿಸುತ್ತೇನೆ. ಈ ರಾಜ್ಯದಲ್ಲಿ ಅನೇಕ ವರ್ಷಗಳಿಂದಲೂ ಈ ರಾಜ್ಯದ ಒಂದು ಹೆಸರು ಏನಿದೆ ಇದನ್ನು ಬದಲಾವಣೆ ಮಾಡಬೇಕೆಂದು ಅನೇಕ ವರ್ಗದ ಜನರು ಬಹಳ ಹೋರಾಟಗಳನ್ನು ನಡೆಸಿದರು. ಅದರ ಫಲವಾಗಿ ನಮಗೆ ಇದು ಈ ದಿವಸ ದೊರೆತಿದೆ ಎಂದು ಭಾವಿಸುತ್ತೇನೆ. ನಾನು ಈ ಸಂದರ್ಭದಲ್ಲಿ ಈ ಮಾನ್ಯ ಸಭೆಯ ಗಮನಕ್ಕೆ ತರಬಯಸಬೇಕು ಅನ್ನತಕ್ಕ ವಿಚಾರ ಏನೆಂದರೆ—ಯಾರು ಈ ರಾಜ್ಯದ ಹೆಸರು 'ಕರ್ನಾಟಕ' ಎಂದು ಆಗಬೇಕೆಂದು ಬಹಳವಾಗಿ ಹೋರಾಟ ಮಾಡಿದರೋ ಮತ್ತು ಇದು ಯಾರ ಕಾಲದಲ್ಲಿ ಆಗುತ್ತದೆಂದು ನಂಬಿದ್ದರೋ ಆ ಜನರ ಆ ಕಾಲಕ್ಕೆ ಇದಾಗಲಿಲ್ಲ. ಇದನ್ನು ನಾನು ಹೇಳದಿದ್ದರೆ ನನ್ನ ಕರ್ತವ್ಯದಲ್ಲಿ ಲೋಪವಮಾಡಿದಂತಾಗುತ್ತದೆ. ಹಿಂದೆ ಇದ್ದಂಥ ಸರ್ಕಾರಕ್ಕೂ ಈ ರಾಜ್ಯದ ಹೆಸರನ್ನು ಬದಲಾವಣೆ ಮಾಡಬೇಕೆಂಬ ಆಸೆ ಇತ್ತು. ಅವರಿಗೆ ಅವರ ಪಾರ್ಟಿಯ ಬಲವೂ ಇತ್ತು. ಸಭೆಯಲ್ಲಿ ಪಕ್ಷಕ್ಕೆ ಬಹುಮತವೂ ಇತ್ತು. ಆದರೂ ಅವರು ರಾಜಕೀಯದ ಒಂದು ಒತ್ತಡದಿಂದ ರಾಜ್ಯದ ಹೆಸರನ್ನು ಬದಲಾವಣೆ ಮಾಡುವುದರಲ್ಲಿ ವಿಫಲರಾದರು ಆದರೆ ಆಗೂ ಈಗ್ಗೂ ಕಾಲ ಬದಲಾವಣೆಯಾಗಿದೆ. ನಮ್ಮ ಮುಖ್ಯ ಮಂತ್ರಿಗಳೇ ಹೇಳಿದ ಒಂದು ಮಾತನ್ನು ನಾನು ಮತ್ತೇ ಇಲ್ಲಿ ಉದ್ಧರಿಸಬೇಕಾಗಿದೆ. 'ಅವರು ಹೇಳಿದರು ಯಾವ ಯಾವ ಕಾಲಕ್ಕೆ ಏನೇನು ಆಗಬೇಕೋ ಅದು ಆಗಲೇ

(ಶ್ರೀ ವಾಟಾಳ್ ನಾಗರಾಜ್)

ಬೇಕು' ಎಂದು ಅವರು ಹೇಳಿದ್ದು ಸತ್ಯವಾದ ವಾಣಿ. ಯಾರು ಒಂದು ಕಾಲದಲ್ಲಿ ಈ ರಾಜ್ಯಕ್ಕೆ ಕರ್ನಾಟಕ ಎನ್ನತಕ್ಕ ಹೆಸರನ್ನು ಇಡುವುದು ಬೇಡ ಎಂದು ವಾದಿಸಿದ್ದರೋ ಅಂಥವರೇ ಈ ದಿವಸ ಹೆಸರನ್ನು ಬದಲಾಯಿಸೋಣ ಎಂದು ಮುಂದೆ ಬಂದಿರತಕ್ಕದ್ದು ಕಾಲದ ಮಹಿಮೆಯೋ ಸರಿ. ಆದರೆ ಇವರು ಆ ದಿವಸ ಹಾಗೆ ಹೇಳಿದ್ದರಿಂದ ಇವರನ್ನು ಈ ಬದಲಾವಣೆಗೆ ವಿರೋಧಿಗಳೆಂದು ನಾನು ಹೇಳಲಾರೆ. ಒಂದು ಮನೆಯಲ್ಲಿ ಮಗುವಿಗೆ ಒಂದು ಹೆಸರನ್ನಿಡಬೇಕಾದರೆ ಒಬ್ಬೊಬ್ಬರು ಒಂದೊಂದು ಹೆಸರನ್ನು ಸೂಚಿಸುತ್ತಾರೆ. ಹಾಗೇ ಇಲ್ಲಿಯೂ ಒಬ್ಬರು ಮೈಸೂರು ಅನ್ನತಕ್ಕ ಹೆಸರೇ ಇರಲಿ ಎಂದಾಗ ಇನ್ನೊಬ್ಬರು ಬೇಡ ಕರ್ನಾಟಕ ಎಂದು ಕರೆಯೋಣ ಎಂದು ಹೇಳಿದ್ದಾರೆ. ಅಷ್ಟೇ ವಿನಾ ಇದರ ಬಗ್ಗೆ ಯಾರಲ್ಲೂ ಅಂಥ ಉಲ್ಬಣವಾದ ಶತೃತ್ವ ಅಥವಾ ವಿರೋಧ ಭಾವನೆಗಳು ಉಂಟಾಗಿರಲಿಲ್ಲ ಎಂದು ಹೇಳುತ್ತೇನೆ.

ಇಲ್ಲಿಗೆ ೧೬ ವರ್ಷಗಳ ಹಿಂದೆ ಇನ್ನೂ ಚಿಕ್ಕ ಮಗುವಾಗಿದ್ದಾಗ ಮುದ್ದಿಗಾಗಿ ಪ್ರೀತಿಗಾಗಿ ಜನರು ರಾಜ್ಯವನ್ನು ಮೈಸೂರು—ಕರ್ನಾಟಕ—ಕನ್ನಡ ನಾಡು ಎಂದು ಅನೇಕ ಹೆಸರುಗಳಿಂದ ಕರೆಯುತ್ತಿದ್ದರು. ಆದರೆ ಈಗ ರಾಜ್ಯಕ್ಕೆ ೧೬ ವರ್ಷ ತುಂಬಿತು. ಇನ್ನು ಇದಕ್ಕೆ ಒಂದು ನಿರ್ದಿಷ್ಟವಾದ ಹೆಸರನ್ನು ಇಡಲೇ ಬೇಕೆಂದೂ, ಈಗ ಈ ಒಂದು ಹೊಸ ಹೆಸರನ್ನು ಇಡುವುದಕ್ಕೆ ದಾರಿ ಸುಗಮವಾಗಿದೆಯೆಂದೂ ಮತ್ತು 'ಕರ್ನಾಟಕ' ಎಂಬ ಹೆಸರನ್ನು ಈ ಸಭೆಯಲ್ಲಿ ಬಹಳ ಜನರು ಅಷ್ಟೇಕೆ ಎಲ್ಲಾ ಮಾನ್ಯ ಸದಸ್ಯರುಗಳೂ ಒಕ್ಕೊರಲನಿಂದ ಒಪ್ಪಿಕೊಳ್ಳುತ್ತಾರೆಂದೂ, ಹಾಗೂ ಇದೊಂದು ಅಭಿಮಾನದ ಮತ್ತು ಒಳ್ಳೆಯ ಕಾರ್ಯವೆಂದೂ ಭಾವಿಸಿ ನಮ್ಮ ಮುಖ್ಯಮಂತ್ರಿಗಳೇ ನಿರ್ಣಯವನ್ನು ಮಂಡಿಸಿದ್ದಾರೆ. ಈ ಹೆಸರಿನಲ್ಲಿ ನಿಜವಾಗಿಯೂ ಏನೋ ಒಂದು ಶಕ್ತಿ ಅಡಗಿದೆ. ಮಾನ್ಯ ಅಧ್ಯಕ್ಷರೇ, ತಾವು ಈ ಹಿಂದೆ ಎಂದು ಈ ಸಭೆಗೆ ಅಧ್ಯಕ್ಷರಾಗಿ ಆ ಪೀಠ ಅಲಂಕರಿಸಿದಿರೋ ಅಂದೇ ನಾನು ಕರ್ನಾಟಕದ ಚರಿತ್ರೆಯಲ್ಲಿ ಎಂದೂ ಕಾಣದಿದ್ದಂಥ ಒಂದು ಶುಭ ಸೂಚನೆ ಇಂದು ಕಾಣುತ್ತಿದೆಯಲ್ಲಾ, ಇದರಿಂದ ಮುಂದಿನ್ನೂ ನಾವು ಕಾಣತಕ್ಕಂಥ ಏನೋ ವಿಶೇಷಗಳು ರಾಜ್ಯದಲ್ಲಿ ಕಾಣಿಸಿಕೊಳ್ಳಬಹುದೆಂದೂ ಅಂದೇ ಭಾವಿಸಿ ಆ ಸಂದರ್ಭದಲ್ಲಿ ಅಧ್ಯಕ್ಷರ ಬಗ್ಗೆ ನಾನೊಂದು ಮಾತನ್ನು ಹೇಳಿದ್ದೆ. ಅದೇನು ಮಾತು ಎಂದರೆ—'ತಾವು ಈ ಅಧ್ಯಕ್ಷ ಪೀಠದಲ್ಲಿ ಮಹಿಳಾಮಣಿಯಾಗಿ ಕುಡಾಗಲೂ ತಾವು ಹೆಣ್ಣಲ್ಲ—ಗಂಡು' ಎಂದು ಹೇಳಿದ್ದೆ. ಈ ದಿವಸ ಮತ್ತೆ ನಾನು ಅದೇ ಮಾತನ್ನು ಈ ಸಂದರ್ಭದಲ್ಲಿಯೂ ಉದ್ಧರಿಸಬೇಕಾಗುತ್ತದೆ. ತಾವು ಅಲ್ಲಿ ಅಧ್ಯಕ್ಷ ಪೀಠದಲ್ಲಿ ಕುಳಿತಿರುವುದರಿಂದ ಈ ಸಭೆಯಲ್ಲಿ ಒಂದು ಶಕ್ತಿಯ ಪ್ರಭಾವ ಬೆಳೆಯುತ್ತಿದೆ ಎಂದು ನಾನು ಸ್ಪಷ್ಟವಾಗಿ ಮತ್ತು ಸತ್ಯವಾಗಿ ಹೇಳಬೇಕಾಗಿದೆ. ತಾವು ಆ ಪೀಠದಲ್ಲಿ ಕುಳಿತಿರುವುದು ಒಂದು ಚರಿತ್ರಾರ್ಹವಾದ ವಿಷಯ. ತಾವು ಆ ಅಧ್ಯಕ್ಷ ಪೀಠದಲ್ಲಿ ಒಂದು ಆದಿಶಕ್ತಿಯಂತೆ ಕುಳಿತಿರುವಾಗಲೇ ಈ ರಾಜ್ಯದ ಹೆಸರನ್ನು 'ಕರ್ನಾಟಕ' ಎಂದು ನಾಮಕರಣ ಮಾಡತಕ್ಕ ಒಂದು ಸುಸಂದರ್ಭ ಉಂಟಾಗಿದೆ. ಇದಕ್ಕೆ ಕಾರಣ ತಾವೋ ಅಥವಾ ಆ ಪೀಠದಲ್ಲಿ ಅಡಗಿರತಕ್ಕ ಮಹಾ ಆದಿಶಕ್ತಿಯ ಪ್ರಭಾವವೋ ಅದನ್ನು ತಾವೇ ಹೇಳಬೇಕು. ತಾವು ಈ ದಿವಸ ಇಲ್ಲಿ ಆದಿಶಕ್ತಿಯಾಗಿ ಪೀಠ ಅಲಂಕರಿಸಿದ್ದೀರಿ ಎಂದು ನಾನು ಕರೆದರೆ ಇದರಲ್ಲಿ ಏನೂ ಅತಿಶಯೋಕ್ತಿ ಇಲ್ಲ. ತಾವು ಹಿಂದೆ ಈ ಪೀಠವನ್ನು ಅಲಂಕರಿಸುವುದಕ್ಕೆ ಎದ್ದಾಗಲೇ ನನಗೆ ಮುಂದೇನೋ ಇಲ್ಲಿ ಇನ್ನೂ ಶುಭಕಾರ್ಯಗಳು ನಡೆಯತಕ್ಕ ಶುಭ ಸೂಚನೆಗಳೇ ಕಾಣುತ್ತಿವೆಯಲ್ಲಾ ಎಂದು ಮನಸ್ಸಿನಲ್ಲಿ ಅಂದುಕೊಂಡಿದ್ದೆ. ಈ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರನ್ನು ಇಡಬೇಕೆಂದು ಆಸೆ ಆಕಾಂಕ್ಷೆ ಹಿಂದೆ ಇದೇ ಸಭೆಯಲ್ಲಿ ಅಧ್ಯಕ್ಷರಾಗಿದ್ದ ಶ್ರೀ ಮಾನ್ಯ ಎಚ್. ಸಿದ್ದಯ್ಯನವರಿಗೂ ಮತ್ತು ಶ್ರೀಮಾನ್ ಕೋಠಾವಳೆ ಅವರಿಗೂ ಇತ್ತು. ಆದರೆ ಅವರ ಕಾಲದಲ್ಲಿ ಏಕೆ ಆಗಲಿಲ್ಲಾ? ಅಧ್ಯಕ್ಷರ ಪೀಠದಲ್ಲಿ ಅಂಥ ಒಂದು ಮಹತ್ತು ಅಥವಾ ಪ್ರಭಾವವಿದ್ದರೆ ಅಂದೇಕೆ ಆಗಲಿಲ್ಲಾ? ಆದರೆ ತಾವು ಈ ದಿವಸ ಆ ಪೀಠವನ್ನು ಅಲಂಕರಿಸಿರತಕ್ಕ ಕಾಲದಲ್ಲೇ ಇಂಥ ಒಂದು ವಿಶೇಷ ಕಾರ್ಯ ಆಗಬೇಕಾಗಿದ್ದರೆ ಅದು ತಮ್ಮ ಪುಣ್ಯದ ಪ್ರಭಾವವೇ ಎಂದರೆ ಅತಿಶಯೋಕ್ತಿ ಆಗಲಾರದು. ನಾನು ಇಷ್ಟೆಲ್ಲವನ್ನೂ ತಮ್ಮನ್ನು ಹೊಗಳಬೇಕೆಂದು ಹೇಳುತ್ತಿಲ್ಲ. ತಾವು ಈ ದಿವಸ ಆ ಅಧ್ಯಕ್ಷ ಪೀಠದಲ್ಲಿ ರಾರಾಜಿಸುತ್ತ ಕುಳಿತಿರುವುದು ಕರ್ನಾಟಕದಲ್ಲಿ ಒಂದು ಹೊಸ ಇತಿಹಾಸವನ್ನು ಬರೆಯುತಕ್ಕ ಸಂದರ್ಭ ಒದಗುತ್ತದೆಂದು ಭಾವಿಸಿದ್ದು ಇಂದು ನನ್ನ ಕಣ್ಣು ಮುಂದೆ ಎದ್ದು ಕಾಣುತ್ತಿದೆ. ಈ ನಿರ್ಣಯವನ್ನು ಮಂಡಿಸಿದ ಮಾನ್ಯ ಮುಖ್ಯಮಂತ್ರಿಗಳೇ ತಾವು ಇದಕ್ಕೆ ವಿರೋಧಿಯಾಗಿದ್ದುದಾಗಿ ಹೇಳಿದ್ದಾರೆ. ಆದಾಗ್ಯೂ ಅವರೇ ಇದನ್ನು ಮಂಡಿಸಿದುದಕ್ಕಾಗಿ ಅವರಿಗೆ ನನ್ನ ಹೃತ್ಪೂರ್ವಕವಾದ ವಂದನೆಗಳನ್ನರ್ಪಿಸುತ್ತೇನೆ. ಆದರೆ ನಾನು ಸರ್ಕಾರದ ಆಡಳಿತದ ಬಗ್ಗೆ ಜನರಿಗೆ ಅನ್ಯಾಯಗಳಾಗತಕ್ಕ ಬಗ್ಗೆ ನಾನು ಸರ್ಕಾರವನ್ನು ಟೀಕೆ ಮಾಡದೆ ಇರಲಾರೆ. ಅದನ್ನೂ ಮಾಡಲೇಬೇಕು. ಸರ್ಕಾರದಲ್ಲಿರತಕ್ಕ ಭ್ರಷ್ಟಾಚಾರವನ್ನು ನಿರ್ಮೂಲ ಮಾಡುವುದಕ್ಕೆ ಸರ್ಕಾರವನ್ನೇ ಟೀಕೆ ಮಾಡಬೇಕಾಗುತ್ತದೆ. ಆದರೆ ನನಗೇನೋ ಈ ದಿವಸ ಈ ನಿರ್ಣಯಕ್ಕೆ ಬೆಂಬಲ ಕೊಡಬೇಕು ಅಂದರೆ ಒಂದು ಹಂಡೆ ಹಾಲು ಕುಡಿದಷ್ಟು ಸಂತೋಷವುಂಟಾಗಿದೆ. ಇಂದು ರಾಜ್ಯದಲ್ಲಿ ಮೂರೂವರೆ ಕೋಟಿ ಕನ್ನಡಿಗರಿಗೆ

ಒಂದು ಸಂತೋಷದ ದಿನ ಇದು. ಮಹಾಜನರೂ, ಸಾಹಿತಿಗಳೂ, ತಜ್ಞರೂ, ವಿದ್ಯಾರ್ಥಿಗಳೂ, ಪತ್ರಿಕಾಪ್ರತಿನಿಧಿಗಳೂ ಹೀಗೆ ಎಲ್ಲಾ ವರ್ಗದವರೂ ಜನರಲ್ಲಿ ಒಂದು ಹೊಸ ಕಳೆ, ಚೈತನ್ಯ, ಏಕೀಭಾವನೆ, ಒಗ್ಗಟ್ಟು ಮೂಡುವಂತೆ ಶ್ರಮಿಸಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ದೇವರಾಜ ಅರಸುರವರು.—ಕರ್ನಾಟಕವೆಂದು ಈ ರಾಜ್ಯಕ್ಕೆ ಹೆಸರಿಡಲು ನಿರ್ಣಯಂ ಬರುವುದು, ಎಂದು ಈ ಸರಕಾರದಲ್ಲಿ ಅವರು ಮಂತ್ರಿಯಾದಾಗಿನಿಂದ ಎಲ್ಲಿ ಹೋದರೂ ಹೇಳಿದ್ದಾರೆ, ಕರ್ನಾಟಕ ಎಂದು ನಮ್ಮ ರಾಜ್ಯಕ್ಕೆ ನಾಮಕರಣ ಮಾಡುತ್ತೇವೆ ಎಂಬ ದಿಟ್ಟ ನಿಲುವನ್ನು ಅವರು ಪ್ರತಿಪಾದಿಸಿದ್ದಾರೆ. ಹೀಗಿರುವಾಗ ನಮ್ಮ ಮುಖ್ಯ ಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಲೇಬೇಕಾಗುತ್ತದೆ. ಇದರ ಜೊತೆಯಲ್ಲಿ ೧೯೫೬ ರಿಂದ ಇಲ್ಲಿಯವರೆಗೆ ನಡೆದು ಬಂದ ಹಾದಿಯನ್ನು ನೋಡಬೇಕು. ಹೈದರಾಬಾದು, ಕೊಡಗು ಮುಂತಾದ ಎಲ್ಲಾ ಕಡೆಗಳಿಂದ ಬಂದವರೆಲ್ಲಾ ಸೇರಿ ೧೯೫೬ರಲ್ಲಿ ಒಂದು ಏಕೀಕರಣ ವಾಯಿತು. ಎಲ್ಲರೂ ಸೇರಿ ಕರ್ನಾಟಕ ಎಂದು ಹೆಸರಿಡಬೇಕು, ಎಸ್‌ಆರ್‌ಸಿ ಕಮಿಷನ್ ಅದನ್ನು ಒಪ್ಪಿಕೊಳ್ಳಬೇಕು ಎಂದು ತಿಳಿಸಿದರು. ಅಂದು ಇದ್ದವರು ಶ್ರೀಮಾನ್ ಹನುಮಂತಯ್ಯನವರು. ಇದನ್ನು ನಾನು ಹೇಳದಿದ್ದರೂ ಕೂಡ ಚರಿತ್ರೆಯಲ್ಲಿ ಇದು ಬರುವುದು. ಚರಿತ್ರಕಾರರು ಇದನ್ನು ಬರೆಯುವರು. ೧೯೫೬ರಲ್ಲಿ ಕರ್ನಾಟಕ ಎಂದು ನಮ್ಮ ರಾಜ್ಯಕ್ಕೆ ಹೆಸರಿಡಬೇಕೆಂಬ ನಿರ್ಣಯ ಬಂದಾಗ, ಎಲ್ಲಾ ೧೯ ಜಿಲ್ಲೆಗಳವರೂ ಒಟ್ಟಿಗೆ ಸೇರಿ ನಿರ್ಣಯ ತಂದಾಗ ಆಗ ಶ್ರೀಮಾನ್ ಹನುಮಂತಯ್ಯನವರು ಕುಮಾರ ಕೃಪಾದಲ್ಲಿದ್ದರು. ಆಗ ಶ್ರೀ ಶಿವಮೂರ್ತಿ ಶಾಸ್ತ್ರಿಗಳು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಅವರು ಶ್ರೀ ಎಚ್. ಸಿದ್ದವೀರಪ್ಪನವರನ್ನು ಕಂಡರು. ಸಿದ್ದವೀರಪ್ಪನವರು "ಶಾಸ್ತ್ರಿಗಳೇ ಹೋಗಿ ಮುಖ್ಯ ಮಂತ್ರಿಗಳೊಡನೆ ಮಾತನಾಡಿ'' ಎಂದು ಹೇಳಿದರು. ಶಾಸ್ತ್ರಿಗಳು ಹೋಗಿ ನಾಳೆ ಕರ್ನಾಟಕ ಎಂದು ನಮ್ಮ ರಾಜ್ಯಕ್ಕೆ ಹೆಸರಿಡುವ ನಿರ್ಣಯ ಮಂಡನೆಯಾಗಬೇಕು ಎಂದು ತಿಳಿಸಿದರು. 'ಈ ನಿರ್ಣಯ ಮಂಡಿಸಿದರೆ ಮುಂದಾಗುವ ಪರಿಣಾಮ ಗೊತ್ತೇ ? ಎಂದು ಹನುಮಂತಯ್ಯನವರು ಕೇಳಿದರು. 'ನಿಮ್ಮ ಅಧಿಕಾರ ಹೋಗುತ್ತದೆ. ಎಂದು ಗೊತ್ತಿದೆ ' ಎಂದು ಶಿವಮೂರ್ತಿ ಶಾಸ್ತ್ರಿಗಳು ಹೇಳಿದರು. ನಂತರ ನನ್ನ ಅಧಿಕಾರ ಹೋದರೂ ನಾನು ಬೆಂಬಲ ಕೊಡುತ್ತೇನೆ' ಎಂದು ನಗುತ್ತಾ ಹನುಮಂತಯ್ಯನವರು ಹೇಳಿದರು. 'ನಾನು ಹೋದರೂ ಚಿಂತೆಯಿಲ್ಲ, ಕನ್ನಡ ಜನರು ಒಂದಾಗುವ ಪುಣ್ಯದಲ್ಲಿ ನಾನು ಭಾಗಿಯಾಗಬೇಕು' ಎಂದು ಹೇಳಿದರು. ಅದನ್ನು ನಂಬಿಕೊಂಡು ಬೆಳಿಗ್ಗೆ ಬಂದು ಎಲ್ಲ ಪಕ್ಷದ ಸದಸ್ಯರೂ ಈ ನಿರ್ಣಯಕ್ಕೆ ವಿರುದ್ಧವಾಗಿ ಓಟು ಮಾಡಬಾರದು ಎಂದು ಒಮ್ಮತದಿಂದ ಬೆಂಬಲ ಕೊಡಬೇಕೆಂದು ತಿಳಿಸಿದರು. ಅವರು ಸುಮಾರು ಮೂರು ಗಂಟೆಯ ಕಾಲ ಕರ್ನಾಟಕದ ಬಗ್ಗೆ ಭಾಷಣ ಮಾಡಿದರು. ಇಂಥ ಶ್ರೀಮಾನ್ ಹನುಮಂತಯ್ಯನವರನ್ನು ನಾವು ಇಂದು ನೆನೆಯಲೇಬೇಕು. ಅದಾದನಂತರ ೧೯೫೬ರಲ್ಲಿ ಶ್ರೀ ನಿಜಲಿಂಗಪ್ಪನವರಿದ್ದಾಗ ಈ ರಾಜ್ಯದಲ್ಲಿ ಯಾರೂ ನಡೆಸದಿರುವ ಕದನವನ್ನು ನಾವು ನಡೆಸಿದೇವೆ. ೧೯೫೬ಕ್ಕೆ ಹಿಂದೆ ನಿಜಲಿಂಗಪ್ಪನವರು ಈ ಕರ್ನಾಟಕಕ್ಕಾಗಿ ಎಲ್ಲ ರೀತಿಯಿಂದ ಹೋರಾಟ ನಡೆಸಿದ್ದಾರೆ. ಅವರ ರಾಜಕೀಯದ ಬಗ್ಗೆ, ಅವರ ಭ್ರಷ್ಟಾಚಾರದ ಬಗ್ಗೆ ಹೇಳುವುದಿಲ್ಲ. ಕರ್ನಾಟಕದ ಇತಿಹಾಸ ನೋಡಿದರೆ ೧೯೫೬ಕ್ಕೆ ಹಿಂದೆ ಈ ರಾಜ್ಯದಲ್ಲಿ ಅವರು ಹೆಚ್ಚು ಕೆಲಸ ಮಾಡಿದ್ದಾರೆ. ಅದಾದ ನಂತರ ಅವರು ಅಷ್ಟಾಗಿ ಆಸಕ್ತಿ ವಹಿಸದಂತೆ ಕಾಣಲಿಲ್ಲ.

ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಈ ಕನ್ನಡ ನಾಡಿನಲ್ಲಿ ದುಡಿದ ಕೆಲವು ವ್ಯಕ್ತಿಗಳ ಹೆಸರನ್ನು ಸಭೆಯ ಗಮನಕ್ಕೆ ತರುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—೧೯೫೬ಕ್ಕೆ ಮೊದಲು ಕರ್ನಾಟಕದ ಭಾಗಗಳು ಒಂದಾಗುವುದಕ್ಕೆ ಮೊದಲು ಕಲ್ಬುರ್ಗಿಯಲ್ಲಿ ಕುರುಬರ ಮಹಾ ಸಮ್ಮೇಳನವಾದ ಮೇಲೆ ಮೈಸೂರಿನಲ್ಲಿ ಆದಿ ಕರ್ನಾಟಕರ ಮಹಾ ಸಮ್ಮೇಳನವಾದಾಗ ಕರ್ನಾಟಕ ಆಗಲೇಬೇಕು ಎಂದು ನಿರ್ಣಯವನ್ನು ಸ್ಪಾನರ್ ಮಾಡಿದವನು ನಾನೇ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಅದನ್ನು ಕೇಳಿ ನನಗೆ ಬಹಳ ಆನಂದವಾಗಿದೆ. ಅಧ್ಯಕ್ಷರೇ, ಈ ದಿವಸ ಯಾವ ಕರ್ನಾಟಕವನ್ನು ಕಟ್ಟಿ ಬೆಳೆಸಿದವರಿದ್ದಾರೆ, ಅವರನ್ನು ಸ್ಮರಿಸಬೇಕು. ಹಿಂದೆ ಗಾಳಿಗೆ ಸಿಕ್ಕಿ ರಾಜ್ಯವೇನಾಗಬಹುದೋ ಎಂಬ ಹೆದರಿಕೆಯಿತ್ತು. ಅಧಿಕಾರ ದರ್ಪದಿಂದ ಕೆಲವರು ಒಂದು ರೀತಿಯಲ್ಲಿ ವರ್ತಿಸಿದರು. ಶ್ರೀ ಜತ್ತಿಯವರು ಮೈಸೂರು ಯಾನೆ ಕರ್ನಾಟಕ ಎಂದಿರಲಿ ಎಂಬ ಅಭಿಪ್ರಾಯ ಸೂಚಿಸಿದರು. ಇದಕ್ಕೆ ಅರ್ಥವಿಲ್ಲ. ನಾನು ಯಾರನ್ನು ತೆಗಳುವುದಿಲ್ಲ. ಕನ್ನಡಿಗರ ಕರ್ನಾಟಕ ರಾಜ್ಯ ನಿರ್ಮಾಣವಾಗಿರುವಾಗ ನಮ್ಮ ಅರಸುಮನೆತನದ ಶ್ರೀ ದೇವರಾಜ ಅರಸಿನವರ ಕಾಲದಲ್ಲಿ ಈ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರನ್ನಿಟ್ಟಿರುವುದು ನನಗೆ ಸಂತೋಷವನ್ನುಂಟುಮಾಡಿದೆ. ಈ ಪುಣ್ಯದ ಕೆಲಸವನ್ನು ಅವರು ಮಾಡಿದ್ದಾರೆ, ಮೈಸೂರು ಮೈಸೂರಿಗೇ ಉಳಿಯಲಿ ಎಂದು ಮೈಸೂರಿನ ಜಿಲ್ಲೆ ಯವರಾದ

(ಶ್ರೀ ವಾಟಾಳ್ ನಾಗರಾಜ್)

ಶ್ರೀ ಅರಸುರವರು ಮಾಡಿರುವ ಕೆಲಸ ಸ್ತುತ್ಯವಾದುದು. ಇಡೀ ರಾಜ್ಯಕ್ಕೆ ಒಂದು ಹೆಮ್ಮೆ ಪಡುವ ಕೆಲಸವನ್ನು, ಸಾಹಸವನ್ನು ನಮ್ಮ ಮುಖ್ಯ ಮಂತ್ರಿಗಳು ಮಾಡಿರುವರೆಂದು ನಾನು ಎದೆ ತಟ್ಟಿ ಹೇಳುತ್ತೇನೆ. ಈ ಸಂದರ್ಭದಲ್ಲಿ ಕರ್ನಾಟಕಕ್ಕಾಗಿ ದುಡಿದ ಕೆಲವು ಹಿರಿಯರನ್ನು ನೆನೆಯಬೇಕಾಗಿದೆ. ಅವರ ನೆನಪಿಗಾಗಿ ಗಂಧದ ಹಾರವನ್ನು ಅಧ್ಯಕ್ಷರ ಎದುರಿನಲ್ಲಿ ಹಾಕಿದ್ದೇನೆ. ಶ್ರೀಯುತರುಗಳಾದ ಕಡಪ ರಾಘವೇಂದ್ರ ರಾಯರು, ಆಲೂರು ವೆಂಕಟರಾಯರು, ಮುದವೀಡು ಕೃಷ್ಣರಾಯರು, ಡಾಪಗು ಹಳಕಟ್ಟಿ, ಪ್ರೊ ಬಸವನಾಳ್, ರಾವ್‌ಬಹದ್ದೂರ್ ಶ್ರೀನಿವಾಸರಾವ್ ಕೊಪ್ಪ, ರಾಷ್ಟ್ರಕವಿ ಗೋವಿಂದಪೈ, ಬಿ. ಎಂ ಶ್ರೀಕಂಠಯ್ಯ, ದೇವಡು ನರಸಿಂಹಶಾಸ್ತ್ರಿಗಳು, ಹುಯಿಲುಗೋಳ ನಾರಾಯಣರಾಯರು, ದಿವಂಗತ ಎಚ್. ಎನ್. ನಂಜುಂಡಯ್ಯನವರು ಬ್ಯಾರಿಸ್ಟರ್ ಸರ್ದಾರ್, ಟಿ. ಎಸ್. ದಾತಾರ್, ಅ. ನ. ಕೃಷ್ಣರಾಯರು, ಡಾ॥ ನಾಗನಗೌಡರು, ಎಂ. ಆರ್. ಶ್ರೀನಿವಾಸಮೂರ್ತಿಯವರು, ಇವರುಗಳು ಆದರ್ಶ ಪುರುಷರು. ಕರ್ನಾಟಕಕ್ಕಾಗಿ ಸೇವೆಮಾಡಿ ಬದುಕಿರುವವರು : ಶ್ರೀಯುತರುಗಳಾದ ರಾಷ್ಟ್ರಕವಿ ಕೆ. ವಿ. ಪುಟ್ಟಪ್ಪನವರು (ಕುವೆಂಪು), ಡಾ॥ ಮಾಸ್ತಿ ವೆಂಕಟೇಶಯ್ಯಂಗಾರ್‌ರವರು, ಮಂಗಳವೇಡೆ ಶ್ರೀನಿವಾಸರಾಯರು, ಕಾರಂತರು ಡಾ॥ ದಾ· ರಾ. ಬೇಂದ್ರೆ, ಶ್ರೀಮತಿ. ಜಯದೇವಿ ತಾಯಿ ಲಿಗಾಡೆ, ನಿಧನರಾದ ರಾಜಕಾರಿಣಿಗಳು : ಶ್ರೀಯುತರುಗಳಾದ ಎಸ್. ಗೋಪಾಲಗೌಡರು, ಅಂದಾನಪ್ಪ ದೊಡ್ಡಮೇಟಿಯವರು, ಹಳ್ಳಿಕೇರಿಯವರು, ಟಿ. ಸುಬ್ರಹ್ಮಣ್ಯರವರು. ಬದುಕಿ ಸೇವೆ ಮಾಡುತ್ತಿರುವವರು : ಶ್ರೀಯುತರುಗಳಾದ ಕೊಡಗಿನ ಕುಶಾಲಪ್ಪನವರು, ಆರ್. ಆರ್. ದಿವಾಕರ್, ಆರ್. ಅನಂತರಾಮಯ್ಯ, ಕೈಯಾರ ಕಿಂಕಣ ರೈ. ಇನ್ನೂ ಅನೇಕರು ಈ ನಾಡಿಗಾಗಿ ತ್ಯಾಗಮಾಡಿ ಬಲಿದಾನ ಮಾಡಿರುವ ನಿದರ್ಶನಗಳಿವೆ. ಅಧ್ಯಕ್ಷರೇ, ಒಂದು ಸಂತೋಷಕರವಾದ ಈ ಶುಭದಿನ ರಾಷ್ಟ್ರಕವಿ ಡಾ॥ ಕೆ. ವಿ. ಪುಟ್ಟಪ್ಪನವರು ಕುವೆಂಪುರವರು ರಚಿಸಿರುವ ಒಂದು ಕವಿತೆಯನ್ನು ಹೇಳುತ್ತೇನೆ ಅದು ಈ ರೀತಿ ಇದೆ :—

" ಬಾರಿಸು ಕನ್ನಡ ಡಿಂಡಿಮವ,
ಓ ಕರ್ನಾಟಕ ಹೃದಯಶಿವ
ಸತ್ತಂತಿಹರನು ಬಡಿದೆಚ್ಚರಿಸು;
ಕಚ್ಚಾಡುವವರನು ಕೂಡಿಸಿ ಒಲಿಸು.
ಹೊಟ್ಟೆಯ ಕಿಚ್ಚಿಗೆ ಕಣ್ಣೀರ ಸುರಿಸು ;
ಒಟ್ಟಿಗೆ ಬಾಳುವ ತೆರದಲಿ ಹರಸು,
ಬಾರಿಸು ಕನ್ನಡ ಡಿಂಡಿಮವ
ಓ ಕರ್ನಾಟಕ ಹೃದಯಶಿವ.
ಕ್ಷಯಿಸಿ ಶಿವೇತರ ಕೃತಿಕೃತಿಯಲ್ಲಿ
ಮೂಡಲಿ ಮಂಗಳ ಮತಿಮತಿಯಲ್ಲಿ ;
ಕವಿ ಋಷಿ ಸಂತರ ಆದರ್ಶದಲಿ
ಸರ್ವೋದಯವಾಗಲಿ ಸರ್ವರಲಿ
ಬಾರಿಸು ಕನ್ನಡ ಡಿಂಡಿಮವ
ಓ ಕರ್ನಾಟಕ ಹೃದಯಶಿವ. "

ಒಳ್ಳೆಯ ಆದರ್ಶವನ್ನು ಶ್ರೀಮಾನ್ ಪುಟ್ಟಪ್ಪನವರು ನಮ್ಮ ಮುಂದಿಟ್ಟು "ಸರ್ವೋದಯವಾಗಲಿ ಸರ್ವರಲಿ" ಎಂದು ತಿಳಿಸಿದ್ದಾರೆ. ಇದನ್ನು ಗಮನಕ್ಕೆ ತರುತ್ತೇನೆ. ಬೆನಗಲ್ ರಾಮರಾಯರು..........

ಅಧ್ಯಕ್ಷರು .—ಇದನ್ನೆಲ್ಲಾ ಹೇಳುತ್ತಾ ಹೋದರೆ ಹೊತ್ತಾಗುವುದು, ಇನ್ನು ಮಾತನಾಡುವವರಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ .— ಕೈ ಜೋಡಿಸಿ ಕೈಮುಗಿಯುತ್ತೇನೆ, ನಾಳೆಯಿಂದ ಒಳಗೆ ಬರುವುದಿಲ್ಲ, ಇದು ನನ್ನ ಅಚ್ಚುಮೆಚ್ಚಿನ ವಿಚಾರ. ಆದುದರಿಂದ ನನಗೆ ಸ್ವಲ್ಪ ಮಾತನಾಡಲು ಅವಕಾಶ ಕೊಡಬೇಕು. ಬೇಗ ಮುಗಿಸುತ್ತೇನೆ. ಕರ್ನಾಟಕ ಎಂಬ ಹೆಸರಿಡಲು ಒಪ್ಪಿದ ದಿವಸ ನಾನು ಮೈ ಮರೆತೆ ನನಗೆ ಆವೇಶ ಬಂತು, ಸಂತೋಷ ಆಯಿತು.

SRI M. MALLIKARJUNASWAMY .—I am happy you are speaking.

3-30 P.M.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ತಾವು ಕೇಳಬೇಕು. ಹುಯಿಲ್‌ಗೋಳ ನಾರಾಯಣ ರಾಯರು ಮುಂದಿನ ಕನಸನ್ನು ಕಂಡು ಕನ್ನಡನಾಡನ್ನು ಚಿತ್ರಿಸಿ ಎಷ್ಟು ಸುಂದರವಾದಿ ಬರೆದಿದ್ದಾರೆ ನೋಡಿ.—

"ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು
ಬದುಕು ಬಲುಹಿನ ನಿಧಿಯು ಸದಭಿಮಾನದ ಗೂಡು
ರಾಜನ್ಯರಿಪು ಪರಶುರಾಮುನಮ್ಮನ ನಾಡು
ಆ ಜಲಧಿಯನೆ ಜಿಗಿದ ಹನುಮನುದಿಸಿದ ನಾಡು
ಓಜೆಯಿಂ ಮೆರೆದರಸುಗಳ ಸಾಹಸದ ಸೂಡು
ತೇಜವನು ನಮಗೀವ ವೀರವೃಂದದ ಬೀಡು
ಲೆಕ್ಕಿಗೆ ಮಿತಾಕ್ಷರರು ಬೆಳೆದು ಮೆರೆದಿಹ ನಾಡು
ಜಕ್ಕಣನ ಶಿಲ್ಪಕಲೆಯಚ್ಚರಿಯಿಂ ಕರುಗೋಡು
ಚೊಕ್ಕ ಮತಗಳ ಸಾರಿದವರಿಗಿದು ನೆಲವೀಡು"

ಈ ರೀತಿಯಾದ ಕವಿತೆಯನ್ನು ಹುಯಿಲುಗೋಳ ನಾರಾಯಣರಾಯರು ಬರೆದಿದ್ದಾರೆ ಅವರು ಕರ್ನಾಟಕಕ್ಕೆ ತ್ಯಾಗ ಮಾಡಿ ದುಡಿದಂಥಾ ವ್ಯಕ್ತಿಗಳು. ಅವರಿಗೆ ಎಷ್ಟು ಆನಂದವಾಗಿದೆ ಅದೇ ಆನಂದ ನಮಗೂ ಆಗಿದೆ ಎಂದು ತಮಗೆ ಹೇಳುತ್ತಿದ್ದೇನೆ. ನಮ್ಮ ಚಳುವಳಿಯಲ್ಲಿ ಕರ್ನಾಟಕದ ಬಗ್ಗೆ ೧೦ ಬೇಡಿಕೆ ಇತ್ತು. ಅದರಲ್ಲಿ ತಮ್ಮ ಎದುರಿಗೆ ಈ ರಾಜ್ಯದ ಹೆಸರು ಕರ್ನಾಟಕ ಆಗಬೇಕು ಎನ್ನುವ ಒಂದು ಬೇಡಿಕೆ ಯನ್ನು ಹೊಡೆದು ಹಾಕುತ್ತೇನೆ. ಇನ್ನು ೯ ಬೇಡಿಕೆಗಳು ಇವೆ. ಈ ೯ ಬೇಡಿಕೆಗಳನ್ನು ಈಡೇರಿಸುವು ದಾದರೆ ನಾವು ತಮ್ಮನ್ನು ಅಭಿನಂದಿಸುತ್ತೇವೆ. ಇಡೀ ರಾಜ್ಯದಲ್ಲಿ ಎಲ್ಲಾ ಜನ ಅಹರ್ನಿಶಿ ದುಡಿದು ತ್ಯಾಗ ಮಾಡಿ ಅದರ ಪ್ರತೀಕವಾಗಿ ರಾಜ್ಯದ ಹೆಸರು ಇಂದು ಕರ್ನಾಟಕವಾಯಿತು. ಇದು ತಮ್ಮೆಲ್ಲರಿಗೂ ಅಭಿಮಾನ ಮತ್ತು ಆನಂದವನ್ನು ತರತಕ್ಕಂಥ ಸಂದರ್ಭ. ಈ ಒಂದು ದೊಡ್ಡ ಕೆಲಸ ತಮ್ಮ ಕಾಲದಲ್ಲಿ ಆಗಿದೆ. ಇದನ್ನು ನಾವು ಒಪ್ಪದೇ ಇದರೆ ತಪ್ಪಾಗುತ್ತದೆ ಕರ್ನಾಟಕ ಚರಿತ್ರೆಯಲ್ಲಿ ತಮ್ಮ ಹೆಸರನ್ನು ಚಿರಸ್ಥಾಯಿ ಯಾಗಿ ಬರೆಯುತ್ತಾರೆ. ಅದರಲ್ಲಿ ಅನುಮಾನ ಪಡಬೇಡಿ. ನಿಮ್ಮನ್ನು ಹೊಗಳಬೇಕು ಎನ್ನುವುದೇ ನನ್ನ ಉದ್ದೇಶವಲ್ಲ. ಕರ್ನಾಟಕದ ಚರಿತ್ರೆ ಬರೆಯುವಾಗ ಖಂಡಿತವಾಗಿ ನಿಮ್ಮ ಹೆಸರು ಬರದೇ ಬರೆಯ ಬೇಕಾಗುತ್ತದೆ. ಕಾರ್ಯದರ್ಶಿ ತೆ. ಹನುಮಂತಪ್ಪನವರು ಮದ್ರಾಸ್ ರಾಜ್ಯದಲ್ಲಿದ್ದವರು. ಅವರು ಇಲ್ಲಿಗೆ ಕಾರ್ಯದರ್ಶಿಯಾಗಿ ಬಂದಮೇಲೆ ಅವರ ಮನೆತನದ 'ತೆ' ಅಕ್ಷರವನ್ನು ಅವರ ನಾಮಫಲಕದಲ್ಲಿ ಹಾಕಿಕೊಂಡಿರುವುದನ್ನು ನೋಡಿದ್ದೇನೆ. ತಾವು ಅಧ್ಯಕ್ಷರಾಗಿದ್ದಾಗ ಮತ್ತು ತೆ. ಹನುಮಂತಪ್ಪನವರು ಕಾರ್ಯದರ್ಶಿಗಳಾಗಿದ್ದಾಗ ನಮ್ಮ ರಾಜ್ಯದ ಹೆಸರು ಕರ್ನಾಟಕ ಆಗಿರುವುದು ನಮಗೆ ಬಹಳ ಆನಂದವಾಗಿದೆ ಒಬ್ಬರು ಶಾಂತಕವಿ ಎನ್ನುವವರು ಈ ರೀತಿ ಒಂದು ಮಾತನ್ನು ಹೇಳಿದ್ದಾರೆ.—

"ರಕ್ಷಿಸು ಕರ್ನಾಟಕ ದೇವಿ, ಸಂ
ರಕ್ಷಿಸು ಕರ್ನಾಟಕ ದೇವಿ.
ಕದಂಬಾದಿ ಸಂಪೂಜಿತ ಚರಣ
ಗಂಗಾರಾಧಿತ ಪದನಖ ಸರಣಿ
ಚಲುಕ್ಯರುತ್ತಮ ಕಾಂಚೀ ಕಿರಣಿ
ರಾಷ್ಟ್ರಕೂಟ ಮಣಿಕಂಠಾಭರಣಿ
ಚಾಲುಕ್ಯಾಂಶಕ ಶೋಭಾವರಣೆ.
ಯಾದವಮಣಿ ಕಂಕಣಾಂಶು ಸುಂದರಿ
ಬಲ್ಲಾಳರ ಭುಜಭೂಷಣ ಬಂಧುರೆ
ವಿಜಯನಗರ ಮಂಗಲಮಣಿ ಕಂಧರೆ
ಮೈಸೂರೊಡೆಯರ ಸುಕೀರ್ತಿಮಂದಿರೆ
ಮಾಂಡಲಿಕಾವನ ಭಾರಧುರಂಧರೆ.
ಮತ ಸುಸ್ಥಾಪಕ ಸ್ಥಾಪಿತಪ್ರಾಣಿ
ಶಿಲ್ಪಕಲಾಮಂಟಪ ಸುಸ್ಥಾನೆ
ಕವಿಜನ ಕೀರ್ತಿತ ಸುಯಶಸ್ಸ್ಥಾಣಿ
ಸಾಧು ಸತ್ಕಥಾ ಭೇಡೀಧ್ಯಾನೆ
ಸ್ವೇತಿಹಾಸನೀರಾಜನ ರಾಣಿ.

(ಶ್ರೀ ವಾಟಾಳ್ ನಾಗರಾಜ್)

ಕೊನೆಯದಾಗಿ ಇನ್ನೊಂದು ಮಾತು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈವೊತ್ತು ಬೆಳಗ್ಗೆ ಪೂಜ್ಯ ರಾಜಾಜಿಯವರು ಒಂದು ಮಾತನ್ನು ಹೇಳಿದ್ದಾರೆ. ಅವನ್ನು ನೋಡಿ ನನಗೆ ಬಹಳ ದುಖಃವಾಯಿತು ರಾಜಾಜಿಯವರದು ಸಾಮಾನ್ಯವಾಗಿ ಕೀಟಲೆ ಮಾಡತಕ್ಕ ಸ್ವಭಾವ. ೧೨ನೆಯ ಶತಮಾನದಲ್ಲಿ ನಾಗವರ್ಮ ಎಂಬ ಕವಿ ಸಂಸ್ಕೃತದಲ್ಲಿ ಕರ್ನಾಟದ ಬಗ್ಗೆ ಭಾಷಾಭೂಷಣದಲ್ಲಿ ಬರೆದಿದ್ದಾನೆ. ೧೭ನೆಯ ಶತಮಾನದಲ್ಲಿ ಶಬ್ದಾನುಸಾರದಲ್ಲಿ ಕಾಳಿಂಗಕವಿ ಬರೆದಿದ್ದಾನೆ. ೧೬ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯ ಕರ್ನಾಟಕ ರತ್ನ ಸಿಂಹಾಸನಾಧೀಶ್ವರ ಎಂದು ವಿಜಯನಗರದ ಅರಸರಿಗೆ ಬಿರುದಿತ್ತು. ರಾಜಗೋಪಾಲಾಚಾರಿಯವರು ಅಚ್ಚ ಕನ್ನಡಿಗರು. ತೇರುಹಳ್ಳಿಯಲ್ಲಿ ಜನಿಸಿದವರು. ಸೆಂಟ್ರಲ್ ಕಾಲೇಜಿನಲ್ಲಿ ಇದ್ದಂಥ ಮಹಾ ವ್ಯಕ್ತಿಗಳು. ಅವರು ಮನಃಪೂರ್ವಕವಾಗಿ ಈ ಮಾತನ್ನು ಹೇಳಿದ್ದಾರೆಯೋ ಇಲ್ಲವೇ ಎಂದು ಆರೋಪಣೆ ಮಾಡುವುದಕ್ಕೆ ಹೋಗುವುದಿಲ್ಲ. ಅವರು ವಯೋವೃದ್ಧರು ಮತ್ತು ದೇಶದಲ್ಲಿ ಹೆಚ್ಚಿನ ರೀತಿಯಲ್ಲಿ ಸೇವೆಯನ್ನು ಮಾಡಿರತಕ್ಕವರು. ನಮ್ಮ ನವೋದಯ ಕರ್ನಾಟಕ ಉದಯವಾಗತಕ್ಕಂಥ ಸಂದರ್ಭದಲ್ಲಿ ಎಲ್ಲರೂ ಸಂತೋಷಪಡತಕ್ಕಂಥ ಸಂದರ್ಭದಲ್ಲಿ ಅವರು ಹೇಳಿದನ್ನು ಈ ದಿನದ ಬೆಳಗ್ಗೆ ಪತ್ರಿಕೆಯಲ್ಲಿ ನೋಡಿದಾಗ ನಮ್ಮ ಮನಸ್ಸಿಗೆ ಸ್ವಲ್ಪ ನೋವಾಯಿತು. ರಾಜ್ಯದಲ್ಲಿ ಎಲ್ಲರೂ ಸಂತೋಷಪಡುತ್ತಿರುವಾಗ ಇಡೀ ಶಾಸನ ಸಭೆಯಲ್ಲಿ ಒಕ್ಕೊರಳಿನಿಂದ ಎಲ್ಲ ಪಾರ್ಟಿ ಪಕ್ಷದವರು ಕರ್ನಾಟಕ ಎಂಬ ಹೆಸರನ್ನು ಸ್ವಾಗತ ಮಾಡುವಾಗ ಅವರು ಆ ರೀತಿ ಮಾತನಾಡಿದುದನ್ನು ನೋಡಿ ಮನಸ್ಸಿಗೆ ಸ್ವಲ್ಪ ನೋವಾಯಿತು.

ಕೊನೆಯದಾಗಿ ಗೋಪಾಲಗೌಡರು ಒಂದು ಮಾತನ್ನು ಹೇಳಿದ್ದಾರೆ. ಅದು ಹೇಳದಿದ್ದರೆ ತಪ್ಪಾಗುತ್ತದೆ. ಅವರು ಈ ಸಭೆಯಲ್ಲಿ ಇದ್ದಿದ್ದರೆ ಬಹುಶಃ ಗಂಟೆಗಟ್ಟಲೆ ಮಾತನಾಡುತ್ತಿದ್ದರು. ಅವರು ಇಲ್ಲದೇ ಇರುವುದು ನಾವು ದುರ್ದೈವಿಗಳು ಎಂದು ಹೇಳಬೇಕಾಗಿದೆ. ಕರ್ನಾಟಕಕ್ಕೋಸ್ಕರವಾಗಿ ತನ್ನ ಇಡೀ ಜೀವನವನ್ನೇ ಮುಡುಪಾಗಿಟ್ಟು ಕೊನೇ ಕಾಲದಲ್ಲಿ ಸಂಸಾರವನ್ನೂ ಲೆಕ್ಕಿಸದೇ, ಮಕ್ಕಳನ್ನೂ ಲೆಕ್ಕಿಸದೇ, ತನ್ನ ಸರ್ವಸ್ವವನ್ನೂ ಲೆಕ್ಕಿಸದೇ, ಕರ್ನಾಟಕಕ್ಕೋಸ್ಕರ ಒಂದು ತೊಟ್ಟು ರಕ್ತ ಇರುವವರೆಗೂ ಕನ್ನಡದ ನೆಲಕ್ಕೋಸ್ಕರ ದುಡಿದ ಧೀಮಂತ ವೀರ ಕಡುಗಲಿ ಅಚ್ಚ ಕನ್ನಡಿಗ ದಿವಂಗತ ಗೋಪಾಲಗೌಡರು ಈ ಸಭೆಯಲ್ಲಿ ಇಲ್ಲ ಎಂದು ನಮ್ಮಗೆ ದುಃಖವಾಗಿದೆ. ಆದರೂ ಅವರ ಬಾಯಲ್ಲಿ ಹೇಳಿದಂಥ ಕೆಲವು ವಾಕ್ಯಗಳನ್ನು ಈ ಸಭೆಯಲ್ಲಿ ಓದುತ್ತೇನೆ. ನನಗೆ ದುಃಖ ಅಪಾರವಾಗಿದೆ. ದಟ್ಟಿ ಪಂಚೆಯನ್ನು ಕಟ್ಟಿ ಶುಭ್ರವಾದ ಜುಬ್ಬವನ್ನು ಹಾಕಿಕೊಂಡು ಬೆತ್ತವನ್ನು ಹಿಡದು ಈ ಕರ್ನಾಟಕ ಆಗುವ ಸಂದರ್ಭದಲ್ಲಿ ಗೋಪಾಲಗೌಡರು ಈ ಸಭೆಯಲ್ಲಿ ಬರುತ್ತಲೇ ಕನ್ನಡದ ರಾಜ್ಯಲಕ್ಷ್ಮಿ ನೋಡಿ ನೋಡಿ ನಕ್ಕು ನಕ್ಕು ಸಂತೋಷವನ್ನು ಪಡುತ್ತಿದ್ದಳು. ದುಃಖದ ವಾತಾವರಣ, ಗೋಪಾಲಗೌಡರಿಲ್ಲದ ಒಂದು ಸಭೆ, ಅವರು ಇಲ್ಲದಾಗ ಕರ್ನಾಟಕ ನಾಮಕರಣ! ಗೋಪಾಲಗೌಡರು ಕೊನೆಯುಸಿರು ಇರುವವರೆಗೆ ಕರ್ನಾಟಕಕ್ಕಾಗಿ, ಕನ್ನಡಕ್ಕಾಗಿ, ಕನ್ನಡ ನಾಡಿಗಾಗಿ ಸ್ವಂತ ಶರೀರವನ್ನೇ ಲೆಕ್ಕಿಸದೆ ಬದುಕಿ ಬಾಳಿದ ಕನ್ನಡ ನಾಡಿನಲ್ಲಿ ದಿವಂಗತರಾಗಿದ್ದಾರೆ. ಇಂದು ಅವರ ಸ್ಮರಣೆ ಅತ್ಯವಶ್ಯ. ಕನ್ನಡ ಎಂದಾಗ ಕೈ ಎತ್ತಿ ನಿಲ್ಲುತ್ತಿದ್ದರು, ಸೆಟೆದು ನಿಲ್ಲುತ್ತಿದ್ದರು, ಸೊಕ್ಕಿನಿಂದ ಎದೆ ಸೆಟೆದು ನಿಲ್ಲುತ್ತಿದ್ದರು. ಅಂಥ ವ್ಯಕ್ತಿ ಗೋಪಾಲಗೌಡರು. ನಮ್ಮೆಲ್ಲರಿಗೂ ಭುಜ ತಟ್ಟಿ ಪ್ರೋತ್ಸಾಹ ಕೊಡುತ್ತಿದ್ದಂತ ಗೋಪಾಲಗೌಡರು ಹೇಳಿರತಕ್ಕ ಮಾತನ್ನು ನಾನು ಇಲ್ಲಿ ಹೇಳುತ್ತೇನೆ.

> "..... ಆದರೆ ಯಾವ ಅಭಿಪ್ರಾಯವೇನೇ ಇರಲಿ ಮುಂದೆ ರಚಿತವಾಗಲಿರುವ ನೂತನ ಕನ್ನಡ ಪ್ರಾಂತ್ಯಕ್ಕೆ 'ಕರ್ನಾಟಕ' ಎಂದು ಹೆಸರಿಡತಕ್ಕದ್ದೇ ಸರಿಯೆಂದು ಎನ್ನುವುದು ನನ್ನ ಖಚಿತವಾದ ಅಭಿಪ್ರಾಯವಾಗಿದೆ".

ಶ್ರೀ ಗೋಪಾಲಗೌಡರು ಹೇಳಿದಂಥ ಮಾತನ್ನು ಇಂಥ ಸಂದರ್ಭದಲ್ಲಿ ನಾವು ಸ್ಮರಣೆಗೆ ತೆಗೆದುಕೊಳ್ಳಬೇಕಾಗಿದೆ.

ಕೊನೆಯದಾಗಿ ಮಾನ್ಯ ಅಂದಾನಪ್ಪ ದೊಡ್ಡಮೇಟಿ ಅವರು ಹೇಳಿರುವ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಅವರು ಈಗ ಇಲ್ಲ. ಅವರು ಇದ್ದಿದ್ದರೆ, ನಾವು ಇದನ್ನೆಲ್ಲ ಹೇಳತಕ್ಕ ಅವಶ್ಯವೇ ಇರುತ್ತಿರಲಿಲ್ಲ. ಅವರು ಇದ್ದಿದ್ದರೆ ನಮಗಿಂತ ಹೆಚ್ಚು ಗಂಟೆಗಟ್ಟಲೆ ಮಾತನಾಡುತ್ತಿದ್ದರು ಅವರು ಹೇಳಿರುವ ಮಾತುಗಳು ಈ ರೀತಿ ಇವೆ.—

‘‘ಸ್ವಾಮಿ, ಕೆಲವು ಸ್ನೇಹಿತರು ಹೇಳುತ್ತಿದ್ದಾರೆ, ಹೆಸರಿನಲ್ಲಿ ಏನಿದೆ ? ಮೈಸೂರು ಎಂದು ಇದ್ದರೆ ದೋಷವೇನು? ಕರ್ನಾಟಕ ಆದರೆ ಲಾಭ ಆಗುವುದೇನು? ಹೆಸರಿಗೆ ಯಾವ ಮಹತ್ವವಿದೆ? ಅದಕ್ಕಾಗಿ ನಾವು ಏಕೆ ಪ್ರಯತ್ನ ಮಾಡಬೇಕು ಎಂದು. ಆ ಒಂದು ವಾದ ಉಂಟು. ಆ ವಾದದ ಬಗ್ಗೆ ಹೇಳುವುದೇನೆಂದರೆ—ಹೆಸರಿಗೆ ನಿಜವಾಗಿ ಒಂದು ಮಹತ್ವವಿದೆ ಎನ್ನುವುದರಲ್ಲಿ ನಾನು ಒಬ್ಬನಾಗಿದ್ದೇನೆ. ಹೆಸರಿಗೆ ಮಹತ್ವವಿರುವುದರಿಂದಲೇ ನಾವು ಎಷ್ಟೋ ಜನರು ನಮ್ಮ ಮನೆಗಳಿಗೆ ಹೆಸರನ್ನು ಇಡುವಾಗ ಮಕ್ಕಳಿಗೆ ಹೆಸರನ್ನಿಡುವಾಗ ಒಳ್ಳೆಯ ಹೆಸರನ್ನು, ಸುಂದರವಾದ ಹಾಗೂ ಅರ್ಥಗರ್ಭಿತವಾದ ಹೆಸರನ್ನು ಯಾವ ಹೆಸರನ್ನಿಟ್ಟರೆ ನಮ್ಮ ಮನೆತದ ಗೌರವ, ಪ್ರತಿಷ್ಠೆ ಇವುಗಳೆಲ್ಲಕ್ಕೂ ಸರಿಹೋಗುತ್ತದೆ ಎಂದು ಯೋಚಿಸಿ ಹೆಸರನ್ನು ಇಡುತ್ತಿದ್ದೇವೆ”.

ಮಾನ್ಯ ಅಧ್ಯಕ್ಷರೇ, ಕರ್ನಾಟಕ ಎನ್ನು ಹೆಸರನ್ನು ಇಟ್ಟಂಥ ಯಾವುದೇ ಸರ್ಕಾರವಾಗಲೀ ಇದರ ಬಗ್ಗೆ ಯಾವ ಪಕ್ಷದವರೂ ಮಾಡಲಿಲ್ಲ, ಇದನ್ನು ನಮ್ಮ ಪಕ್ಷ ಒಂದೇ ಮಾಡಿದ್ದು ಎನ್ನುವ ಅಭಿಪ್ರಾಯ ಯಾರಿಗೂ ಇರಬಾರದು. ಕರ್ನಾಟಕಕ್ಕೋಸ್ಕರವಾಗಿ ಎಲ್ಲಾ ಒಂದೇ ಪಕ್ಷ ಎಂದು ಒಂದೇ ಲೇಬಲ್ ಎಂದು ದುಡಿದಿದ್ದಾರೆ. ಅದರಲ್ಲಿ ಪಕ್ಷ ಭೇಧವಿಲ್ಲ. ಮೈಸೂರು ಕಾಂಗ್ರೆಸ್ ಎಂದು ಇದ್ದಾಗ, ಕರ್ನಾಟಕ ಸೋಷಿಯಲಿಸ್ಟ್ ಪಕ್ಷ, ಪ್ರಜಾ ಕರ್ನಾಟಕ ಸೋಷಿಯಲಿಸ್ಟ್ ಪಕ್ಷ, ಕರ್ನಾಟಕ ಕಮ್ಯೂನಿಸ್ಟ್ ಪಕ್ಷ ಎಂದು ಎಲ್ಲ ಪಕ್ಷಗಳವರೂ ಕರ್ನಾಟಕ ಎನ್ನುವ ಹೆಸರನ್ನು ಇಟ್ಟುಕೊಂಡಿದ್ದರು. ಆದರೆ ಕಾಂಗ್ರೆಸ್ಸಿನವರು ಮಾತ್ರ ಮೈಸೂರು ಕಾಂಗ್ರೆಸ್ ಎಂದೇ ಇಟ್ಟುಕೊಂಡಿದ್ದರು. ನಾಳೆ ಮೈಸೂರು ಕಾಂಗ್ರೆಸ್ ಎನ್ನುವುದನ್ನು ಕಾಂಗ್ರೆಸ್ ಮಾಡಿಕೊಳ್ಳಬೇಕೆಂದು ಹೇಳಿ ಈ ನಿರ್ಣಯದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದನೆ ಸಲ್ಲಿಸಿ ಕರ್ನಾಟಕಕ್ಕೋಸ್ಕರ ದುಡಿದ ಎಲ್ಲರಿಗೂ ಕೃತಜ್ಞತೆಗಳನ್ನರ್ಪಿಸಿ, ದಿವಂಗತರಾಗಿರುವವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

‡ ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ. ಕರ್ನಾಟಕ ಎನ್ನುವ ಹೆಸರನ್ನು ನಮ್ಮ ರಾಜ್ಯಕ್ಕೆ ಅಧಿಕೃತವಾಗಿ ಇಡುತ್ತಿದ್ದಾರೆ. ಅದನ್ನು ಸಂತೋಷದಿಂದ ಒಪ್ಪಿಕೊಂಡು ನಾನು ಸದಾ ಕಾಲದಲ್ಲಿಯೂ ಕರ್ನಾಟಕ ಆಗಬೇಕು, ಕರ್ನಾಟಕ ಎಂಬ ಹೆಸರೇ ಇರವ ಎನ್ನುವ ವಾದ ಮಾಡಿಕೊಂಡು ಬಂದಿರುವ ಒಬ್ಬ ವ್ಯಕ್ತಿ. ಅದಕ್ಕೋಸ್ಕರ ನಾನು ಸ್ವಲ್ಪಮಟ್ಟಿಗೆ ಇಲ್ಲಿ ಆ ವಿಷಯವನ್ನು ಪ್ರಸ್ತಾವ ಮಾಡಬೇಕಾಗಿದೆ. ಅನೇಕರು ಕರ್ನಾಟಕದ ಗತವೈಭವನ್ನು ಹೇಳಿದ್ದಾರೆ ನಾನು ಸ್ವಲ್ಪ ಜೀವಂತ ವೈಭವವನ್ನು ಹೇಳಬೇಕೆಂದು ಹೊರಟಿದ್ದೇನೆ. ಕರ್ನಾಟಕ ಆಗಬೇಕೆಂದು ಶ್ರೀ ಕೆ. ಹನುಮಂತಯ್ಯನವರು ಮುಖ್ಯ ಮಂತ್ರಿ ಆಗಿದ್ದಾಗ ಪ್ರಾರಂಭ ಮಾಡಿ, ಮಂಗಳೂರು ಇತ್ಯಾದಿ ಕಡೆ ಹೋಗಿ, ಅನೇಕ ಕಡೆ ಭಾಷಣ ಮಾಡಿದಾಗ ನಮ್ಮ ಕಾಂಗ್ರೆಸ್ ಎಕ್ಸಿಕ್ಯೂಟಿವ್ ಕಮಿಟಿ ಮತ್ತು ಕಾಂಗ್ರೆಸ್ ಪಾರ್ಟಿಯಲ್ಲಿ ಕೂಡ ಅನೇಕ ಜನ ನೀವು ಯಾರನ್ನು ಕೇಳಿ ಭಾಷಣ ಮಾಡಿದಿರಿ ಎಂದು ಪ್ರಶ್ನೆ ಮಾಡಿರತಕ್ಕುದು ಕೂಡ ಇದೆ. ಈ ಸಂದರ್ಭದಲ್ಲಿ ಹೇಳುವಾಗ ಒಂದು ಮಾತನ್ನು ಮೊದಲು ಹೇಳದೆ ಹೋದರೆ ಸದಸ್ಯರಲ್ಲಿ ಕೆಲವು ಅಭಿಪ್ರಾಯ ಬದಲಾವಣೆ ಆಗಬಹುದು. ಶ್ರೀ ಹನುಮಂತಯ್ಯನವರ ಹೆಸರು ಹೇಳುವಾಗ. ಅವರ ಕಾಲದಲ್ಲಿ ನಾನು ಎಂ.ಎಲ್.ಎ. ಆಗಿರಲಿಲ್ಲ, ಎಂ.ಎಲ್.ಸಿ. ಆಗಿರಲಿಲ್ಲ. ನನಗೆ ಅವರು ಯಾವ ಜಾಗವನ್ನೂ ಕೊಟ್ಟಿರಲಿಲ್ಲ ಅಥವಾ ಅವರ ಕಾಲದಲ್ಲಿ ಯಾವ ಒಂದು ದರಖಾಸ್ತು ಮೂಲಕ ಭೂಮಿಯನ್ನಾಗಲೀ ಪಡೆದಿರುವವನಲ್ಲ. ಶ್ರೀ ಹನುಮಂತಯ್ಯನವರ ಹೆಸರನ್ನು ಹೇಳುವಾಗ ಶ್ರೀ ವೀರಪ್ಪ ಗೌಡರು ಅವರಿಂದ ಏನೊ ಪ್ರಯೋಜನ ಹೊಂದಿರಬಹುದು ಎನ್ನುವ ಭಾವನೆ ಸ್ವಾಭಾವಿಕವಾಗಿ ಬೆಳೆದು ಬರುತ್ತದೆ. ಆದುದರಿಂದ ಯಾವ ವಿಧವಾದ ಅಂಥ ಸಂಬಂದವನ್ನು ಇಟ್ಟುಕೊಳ್ಳದೆ ನಾನು ನಡೆದಿರುವ ವಿಚಾರಗಳನ್ನು ಸ್ವಲ್ಪಮಟ್ಟಿಗೆ ಪ್ರಸ್ತಾಪ ಮಾಡುತ್ತಿದ್ದೇನೆ. ಇದರಲ್ಲಿ ಸಮಯಸಾಧಕರು ಬಹಳ ಜನರಿದ್ದಾರೆ.

೧೯೫೬ನೇ ಇಸವಿಯಲ್ಲಿ ಕರ್ನಾಟಕ ಮಾಡಿಯೇ ತೀರಬೇಕು ಎಂದು ಹೇಳತಕ್ಕ ಕಾಲದಲ್ಲಿ ಆಗ ಮಂತ್ರಿಗಳಾಗಿದ್ದವರು ಮತ್ತು ಕೆಲವರು ನನ್ನನ್ನು ಕಂಡು ನೀವು ಕರ್ನಾಟಕವನ್ನು ವಿರೋಧಿಸಬೇಕು. ಮಂಡ್ಯಕ್ಕೆ ಬರಬೇಕು, ಮೆರವಣಿಗೆ ಆಗಬೇಕು ಎಂದು ಕೇಳಿದರು. ಅದಕ್ಕೆ ನಾನು ಕರ್ನಾಟಕ ಆಗಬೇಕೆಂದು ಹೇಳುವ ಮನುಷ್ಯ, ನನ್ನ ಹತ್ತಿರ ಬರಬೇಡಿ ಎಂದು ಹೇಳಿ ಕಳುಹಿಸಿದೆ. ಅದೇ ರೀತಿ, ಪಕ್ಷದ ಮುಂದೆ ಈ ವಿಷಯ ಬಂದಾಗ ಆಗ ಕೇಂದ್ರದಲ್ಲಿ ಡೆಪ್ಯುಟಿ ಮಂತ್ರಿಗಳಾಗಿದ್ದ ಶ್ರೀ ಎಂ. ಕೃಷ್ಣಪ್ಪನವರು ಮತ್ತು ಕಡಿದಾಳ್ ಮಂಜಪ್ಪನವರು, ಶ್ರೀ ಹನುಮಂತಯ್ಯನವರಿಗೆ ನೀವೇನಾದರೂ ಹೋಗಿ ಹೇಳಿ, ಇದನ್ನು ಅವರು ಒಪ್ಪದ ಹಾಗೆ ಮಾಡುವುದಕ್ಕೆ ಸಾಧ್ಯವೇ ಎಂದು ಪ್ರಯತ್ನ ಮಾಡಿ. ಅವರ ಮನಸ್ಸಿನಲ್ಲಿ ಕರ್ನಾಟಕವಾದರೆ ಸಾಯುವವರೆಗೂ ಮುಖ್ಯ ಮಂತ್ರಿಯಾಗಿರುತ್ತೇನೆ ಎಂದು ಭಾವಿಸಿಕೊಂಡು ಈ ರೀತಿ ಮಾಡುತ್ತಿರಬಹುದು, ಅವರಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿ ಎಂದು ಕೇಳಿದಾಗ ನಾನು ಶ್ರೀ ಹನುಮಂತಯ್ಯನವರಲ್ಲಿ ಮಾತನಾಡಿದಾಗ ಅವರು ಒಂದೇ ಮಾತು ಹೇಳಿದರು, ವೀರಪ್ಪಗೌಡರೇ, ನಾಳೆ

(ಶ್ರೀ ವಾಟಾಳ್ ನಾಗರಾಜ್)

ದಿವಸ ಬದುಕಿರುತ್ತೇನೆಂದು ಯಾರೂ ಬರೆದು ಕೊಟ್ಟಿಲ್ಲ. ಕರ್ನಾಟಕ ಆಗಬೇಕು ಎನ್ನುವ ನಿಲುವನ್ನು ನಾನು ತೆಗೆದುಕೊಂಡಿದ್ದೇನೆ, ಅದನ್ನು ಮಾಡಿಯೇ ತೀರಬೇಕು ಎಂದು ಮನಸ್ಸು ಮಾಡಿದ್ದೇನೆ, ನೀವೂ ಕೂಡ ಯಾವಾಗಿಗೂ ಯೀಲ್ಡ್ ಆಗಬೇಡಿ ಎಂದುಹೇಳಿದರು. ಆಗ ಎ. ಐ ಸಿ. ಸಿ. ವರ್ಕಿಂಗ್ ಕಮಿಟಿಯಲ್ಲಿ ಕೂಡ ಈ ಬಗ್ಗೆ ಒಂದು ತೀರ್ಮಾನ ಮಾಡಿದ್ದರು. ಏನೆಂದರೆ ಭಾಷಾವಾರು ಪ್ರಾಂತ ರಚನೆಯಾಗತಕ್ಕ ಕಾಲದಲ್ಲಿ ಯಾವ ಮುಖ್ಯ ಮಂತ್ರಿಗಳ ಮೇಲೂ ಅವಿಶ್ವಾಸ ನಿರ್ಣಯ ತರುವುದಕ್ಕೆ ಅವಕಾಶ ಕೊಡಬಾರದು ಎನ್ನುವ ತೀರ್ಮಾನವೂ ಆಗಿತ್ತು. ನಮ್ಮ ರಾಜ್ಯದಲ್ಲಿ ಕೂಡ ಶ್ರೀ ಹನುಮಂತಯ್ಯ ನವರು ಕರ್ನಾಟಕ ಆಗಲೇ ಬೇಕೆಂದು ಪ್ರಯತ್ನ ಮಾಡಿದರು. ಪಾರ್ಟಿಯೊಳಗೂ ಪಾಸಾಯಿತು, ಆಗ ಕಾಂಗ್ರೆಸ್ ಆಫೀಸು ಅರಳೇಪೇಟೆಯಲ್ಲಿ ಇತ್ತು. ಕಾಂಗ್ರೆಸ್ ಪಕ್ಷದಲ್ಲಿ ತೀರ್ಮಾನವಾದ ಮೇಲೆ ಅಸೆಂಬ್ಲಿ ಮುಂದೆ ಬಂದು ಅಲ್ಲಿಯೂ ತೀರ್ಮಾನವಾದ ಮೇಲೆ ಪಾರ್ಲಿಮೆಂಟ್ ಮುಂದೆ ವಿಷಯ ಬಂದು ಭಾಷಾವಾರು ಪ್ರಾಂತಗಳ ರಚನೆಯಾಯಿತು. ಆಗ ಈ ಹನುಮಂತಯ್ಯನವರನ್ನು ಅಧಿಕಾರದಿಂದ ಇಳಿಸಿಯೇ ತೀರಬೇಕೆಂದು ಪ್ರಯತ್ನ ಮಾಡಿ ಮಹನೀಯರೆಲ್ಲ ಸೇರಿ ಹನುಮಂತಯ್ಯನವರನ್ನೇ ಮುಖ್ಯ ಮಂತ್ರಿ ಪದವಿಯಿಂದ ತೆಗೆಯುವುದಕ್ಕೆ ಪ್ರಯತ್ನ ಮಾಡಿದರು. ಆಗ ಶ್ರೀ ಹನುಮಂತಯ್ಯನವರೇ ಮುಖ್ಯ ಮಂತ್ರಿ ಪದವಿಯನ್ನು ಬಿಟ್ಟರು ಆಗ ಕರ್ನಾಟಕ ಆಗುವುದನ್ನು ವಿರೋಧ ಮಾಡಿದವರೇ ದೇವರ ದಯೆಯಿಂದ ಕರ್ನಾಟಕವಾದ ಮೇಲೆ ಮಂತ್ರಿ ಪದವಿಯನ್ನು ಅನುಭವಿಸಿದರು. ಯಾರು ಇದಕ್ಕೋಸ್ಕರ ಕಷ್ಟಪಟ್ಟರೋ ಅವರನ್ನು ಮೇಲಿಂದ ಮೇಲೆ ತುಳಿಯತಕ್ಕ ಪ್ರಸಂಗ ಈ ಹೊತ್ತಿನವರೆಗೂ ನಡೆದಿದೆ ; ಈಗಲೂ ನಡೆದಿವೆ. ಸತ್ಯ, ಧರ್ಮ, ದೇವರು ಕೈ ಬಿಡುವುದಿಲ್ಲ ಎನ್ನುವ ನಂಬಿಕೆ ಭಾರತ ದೇಶದಲ್ಲಿದೆ. ಆಬಗ್ಗೆ ನಾನು ಹೆಚ್ಚಾಗಿ ವಾದಕ್ಕೆ ಇಳಿಯುವುದಿಲ್ಲ.

ಈಗ ಚುನಾಯಿತರಾಗಿ ಬಂದಿರುವ ನಮ್ಮ ಪಕ್ಷದ ೧೯೫ ಜನ ಸದಸ್ಯರೂ ಆತ್ಮ ಪೂರ್ವಕವಾಗಿ ಕೆಲಸ ಮಾಡಬೇಕು, ಈ ದೇಶಕ್ಕೆ ಒಳ್ಳೆಯದಾಗಬೇಕು ಎನ್ನುವ ಉದ್ದೇಶದಿಂದ ಬಂದಿದ್ದಾರೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಹಾತ್ಮಾಜಿಯವರಾಗಲೀ, ಇಂಧಿರಾ ಗಾಂಧಿಯವರಾಗಲೀ, ಆತ್ಮಕ್ಕೆ ದ್ರೋಹ ಮಾಡಿಕೊಳ್ಳಿ ಎಂದು ಹೇಳಲಿಲ್ಲ. ಆತ್ಮ ದ್ರೋಹ ಮಾಡಿಕೊಂಡು ಕೆಟ್ಟ ಕೆಲಸ ಮಾಡತಕ್ಕಂಥಾದ್ದನ್ನು ಸಹಿಸುವುದಕ್ಕಾಗುವುದಿಲ್ಲ. ಕರ್ನಾಟಕ ಎಂದು ಹೆಸರಿಡುವುದಕ್ಕೆ ಶ್ರೀಮಾನ್ ನಿಜಲಿಂಗಪ್ಪನವರ ಮತ್ತು ವೀರೇಂದ್ರಪಾಟೀಲರ ಕಾಲದಲ್ಲಿ ಆಗಲಿಲ್ಲ. ಮಾನ್ಯ ಕೆಂಗಲ್ ಹನುಮಂತಯ್ಯನವರಿಗೆ ಅವಕಾಶ ಸಿಕ್ಕಲಿಲ್ಲ. ಶ್ರೀ ಕೆಂಗಲ್ ಹನುಮಂತಯ್ಯನವರು ಮಂತ್ರಿಗಳಾಗಿದ್ದಾಗ ಕರ್ನಾಟಕ ಎಕ್ಸ್‌ಪ್ರೆಸ್ ಎನ್ನುವ ಒಂದು ಹೆಸರನ್ನು ರೈಲಿಗೆ ಇಟ್ಟರು. ಇದನ್ನು ಯಾರೂ ಹೇಳಬೇಕಾಗಿಲ್ಲ, ಅವರು ಮಾಡಿದ್ದೇ ಸಾಕು. ದೊಡ್ಡ ಬಂಡೆಯಾಗಿ ರಸ್ತೆ ಅಡ್ಡದ ರೂಪದಲ್ಲಿ, ಯಾರೂ ಪ್ರಯಾಣ ಮಾಡಬಾರದು, ಎಂದು ಹೇಳುತ್ತಾ ಇದ್ದರು. ಆ ಬಂಡೆ ಸರಿದಾಗ ಪ್ರಯಾಣ ಸುಖವಾಯಿತು. ಬಂಡೆ ಎತ್ತುವ ಕಾಲದಲ್ಲಿ ಎಲ್ಲರ ಮನಸ್ಸುಕೂಡ ಒಲಿಸಿಕೊಳ್ಳಬೇಕು, ಎನ್ನುವ ಪ್ರಶ್ನೆ ಹಿಂದಿನವರಲ್ಲಿ, ಇದ್ದುದರಿಂದ ನಿಧಾನವಾಯಿತೇ ವಿನಹ ಬೇರೆ ಯಾವುದೂ ಇಲ್ಲ. ಎಲ್ಲರೂ ಕೂಡ ಕರ್ನಾಟಕವಾಗಲೀ ಎಂದು ಹೇಳುತ್ತಾ ಬಂದಿರತಕ್ಕ ವ್ಯಕ್ತಿಗಳು, ಯಾರೊಬ್ಬರಿಂದ ಆಯಿತು ಎನ್ನುವ ಮನೋಭಾವ ಬರುವ ಹಾಗೆ ರಾಜಕೀಯವಾಗಿ ಉಪಯೋಗಿಸಿಕೊಂಡಿದ್ದರೆ ಅದು ತಪ್ಪು ಎಂದು ಹೇಳುತ್ತೇನೆ. ಯಾರು ಸ್ಥಾನವನ್ನು ಅಲಂಕರಿಸಿದ್ದಾರೋ ಅವರು ಒಪ್ಪಿಕೊಂಡಿದ್ದರೆ ಅವತ್ತು ಕೂಡ ಇದು ಆಗುತ್ತಿತ್ತು. ಆದ್ದರಿಂದ ನಾವು ಯಾವ ಮುಖಂಡರ ಮೇಲೂ ತಪ್ಪನ್ನು ಹೊರಿಸುವುದಕ್ಕೆ ಅವಕಾಶವಿಲ್ಲ. ಯಾರು ತಪ್ಪು ಮಾಡಿದ್ದಾರೋ ಅವರು ತಮ್ಮ ತಪ್ಪನ್ನು ತಿದ್ದಿಕೊಂಡಿದ್ದಾರೆ, ಎಂದು ಸಂತೋಷಪಟ್ಟು. ಕರ್ನಾಟಕ ಎಂದು ರಾಜ್ಯಕ್ಕೆ ಹೆಸರನ್ನು ಇಟ್ಟಿದ್ದಾರೆ. ಈ ಸಂದರ್ಭದಲ್ಲಿ ನಾವು ನೀವು ಎಲ್ಲರೂ ಕೂಡ ಸೇರಿ ಕರ್ನಾಟಕ ರಾಜ್ಯವನ್ನು ಸುಲಲಿತವಾಗಿ, ಸತ್ಯ ಸಂಧತೆಯಿಂದ, ಧರ್ಮದಿಂದ ಜನಗಳಿಗೆ ಯಾವ ಹಿಂಸೆಯೂ ಆಗದ ರೀತಿಯಲ್ಲಿ ಸಮಾಜವಾದವನ್ನು ಎಲ್ಲರಿಗೂ ಒಂದೇ ರೂಪಾದಲ್ಲಿ ಜಾರಿಗೆ ತರತಕ್ಕ ಮಟ್ಟದಲ್ಲಿ ಸಾಗೋಣ. ಎಂದು ಹೇಳಿ, ಕರ್ನಾಟಕ ಎಂದು ಕರೆದಿರತಕ್ಕ ಹೆಸರಿಗೆ ಕಾರಣರಾಗಿರತಕ್ಕ ಮುಖ್ಯಮಂತ್ರಿ ಶ್ರೀ ದೇವರಾಜ ಅರಸ್ ಅವರನ್ನು ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

‡ಶ್ರೀ ಕೆ. ಎಂ. ನಾಗಣ್ಣ—(ಚಿಕ್ಕಪೇಟೆ ಕ್ಷೇತ್ರ) – ಮಾನ್ಯ ಸಭಾಧ್ಯಕ್ಷರೆ, ಮೊನ್ನೆತಾನೆ ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂಬುದಾಗಿ ನಾಮಕರಣ ಮಾಡಬೇಕು ಎಂಬುದಾಗಿ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದ ನಿರ್ಣಯವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಏಕೆಂದರೆ ಇಡೀ ರಾಜ್ಯದ ಜನತೆಯೂ ಕೂಡ ಇದನ್ನು ಸ್ವಾಗತಿಸುತ್ತಾರೆ ಎಂದು ನಾನಾದರೂ ಅಂದುಕೊಂಡಿದ್ದೇನೆ. ಕರ್ನಾಟಕ

ನಾಮಕರಣ ೧೯೫೬ ರಿಂದ ೧೯೭೨ರವರೆಗೆ, ಅಂದರೆ ೧೬ ವರ್ಷಗಳ ಕಾಲ ಆದಮೇಲೆ ಆಯಿತು. ಏನೇ ಕಾರಣಗಳು ಇರಲಿ, ಈ ಹೆಸರನ್ನು ಇಡುವ ಕಾರ್ಯ ಮುಂದಕ್ಕೆ ಹೋಗದೆ, ಈಗಲೇ ಆಯಿತು, ಇದಕ್ಕೆ ಎಲ್ಲರೂ ಸಂತೋಷಪಡಬೇಕಾಗಿದೆ. ಸಂತೋಷ ಪಡುವ ಸಂದರ್ಭದಲ್ಲಿ ಕರ್ನಾಟಕ ಎಂದು ನಾಮಕರಣ ಆದ ಮಾತ್ರಕ್ಕೆ ನಮ್ಮ ದೇಶದ ಜನರಿಗೆ ಎಲ್ಲಾ ಅನುಕೂಲಗಳಾಗಿವೆ ಎಂದು ಹೇಳುವಂತಿಲ್ಲ. ಸರ್ಕಾರದವರು ಜನತೆಗೆ ಏನು ಅನುಕೂಲಗಳು ಆಗಬೇಕು ಎನ್ನುವುದನ್ನು ಗಮನಿಸಬೇಕು. ಹಿಂದೆ ಮೈಸೂರು ಎಂದು ನಾಮಕರಣ ಆದಾಗ ಆಡಳಿತ ಯಾವರೀತಿ ನಡೆಯುತ್ತಿತ್ತು, ಮತ್ತು ೧೯೪೭ನೇ ಇಸವಿಯಿಂದ ಈಚೆಗೆ ಆಡಳಿತ ಯಾವರೀತಿ ನಡೆಯುತ್ತಿದೆ ಎಂದು ನಾವು ಸಿಂಹಾವಲೋಕನ ಮಾಡಬೇಕಾಗಿದೆ. ಇಡೀ ಭಾರತ ದೇಶದಲ್ಲಿ ಮೈಸೂರಿನ ಆಡಳಿತ ಹೆಸರುವಾಸಿಯಾಗಿತ್ತು. ಏಕೆಂದರೆ ಆಗಿನ ದಿವಾನರುಗಳ ಕಾಲದಲ್ಲಿ ರಾಜ್ಯದ ಆಡಳಿತ ಬಹಳ ಚೆನ್ನಾಗಿ ನಡೆಯುತ್ತಿತ್ತು. ಮೈಸೂರಿಗೆ ಒಳ್ಳೆಯ ಹೆಸರು ಏತಕ್ಕೆ ಬಂತು ಅಂದರೆ, ಇಡೀ ಭಾರತದಲ್ಲಿ ಮೊಟ್ಟಮೊದಲನೆಯದಾಗಿ ಪ್ರಜಾಪ್ರತಿನಿಧಿ ಸಭೆ ಸ್ಥಾಪನೆ ಮಾಡಿದ್ದು ಮೈಸೂರಿನಲ್ಲಿ. ಪ್ರಜೆಗಳಿಂದ ಕೂಡಿದ ಸಭೆಯನ್ನು ಮೊದಲು ಸ್ಥಾಪನೆ ಮಾಡಿದ್ದು ಮೈಸೂರು ದೇಶದಲ್ಲಿ, ಆದ್ದರಿಂದ ಮೈಸೂರಿಗೆ ಇಡೀ ಭಾರತದಲ್ಲಿ ಒಳ್ಳೆಯ ಹೆಸರು ಇದೆ. ಈಚೆಗೆ ಬಹುಮಟ್ಟಿಗೆ ಆಡಳಿತ ಕುಂಠಿತವಾಗಿದೆ ಎಂದರೆ ತಪ್ಪಾಗಲಾರದು. ೧೯೪೭ರ ಹಿಂದೆ ಕಾರ್ಖಾನೆಗಳು ಬಹುಮಟ್ಟಿಗೆ ಸ್ಥಾಪನೆಯಾಗಿದುವು, ೧೯೪೭ರಿಂದ ಈಚೆಗೆ ಈ ಕಾರ್ಖಾನೆಗಳು ಬಹಳ ಮಟ್ಟಿಗೆ ಸ್ಥಾಪನೆಯಾಗಲಿಲ್ಲ, ಇದಕ್ಕೆ ಕಾರಣ ಆಡಳಿತ ವರ್ಗದಲ್ಲಿ ಅಜಾಗರೂಕತೆ ಇದೆಯೆಂದು ಹೇಳಿದರೆ ತಪ್ಪಾಗಲಾರದು ಎಂದು ನಾನು ತಿಳಿದುಕೊಂಡಿದ್ದೇನೆ. ಹಿಂದೆ ರಾಜ್ಯದ ಸಚಿವ ಸಂಪುಟದಲ್ಲಿ ದಿವಾನರುಗಳ ಕಾಲದಲ್ಲಿ ಇಬ್ಬರು ಮಂತ್ರಿಗಳು ಇರುತ್ತಿದ್ದರು. ಫಸ್ಟ್ ಕೌನ್ಸಿಲರ್ ಮತ್ತು ಸೆಕೆಂಡ್ ಕೌನ್ಸಿಲರ್ ಎಂದು, ಈ ಮಂತ್ರಿಗಳು ಹತ್ತಾರು ವರ್ಷ ಇದ್ದರೂ ಕೂಡ ಒಂದು ಸಣ್ಣ ಮನೆ ಕಟ್ಟಿಕೊಂಡು ವಾಸಮಾಡುತ್ತಿದ್ದಾರೆ. ಕೆಲವರಿಗೆ ಮನೆಗಳನ್ನು ತೆಗೆದುಕೊಳ್ಳುವುದಕ್ಕೆ ಕೂಡ ಅವಕಾಶವಾಗಲಿಲ್ಲ. ಆದರೆ ೧೯೪೭ ರಿಂದ ಈಚೆಗೆ ಬಂದ ಮಂತ್ರಿಗಳನ್ನು ನೋಡಿದರೆ, ಒಂದು ವರ್ಷದೊಳಗೆ, ಸದಾಶಿವನಗರದಲ್ಲಿ ಬಂಗಲೆ ಕಟ್ಟುತ್ತಾರೆ. ಈಗ ಸದಾಶಿವನಗರದಲ್ಲಿ ಮಾಜಿ ಮಂತ್ರಿಗಳ ಮನೆಗಳು ಇವೆಯೇ ಹೊರತು ಸಾಮಾನ್ಯ ಜನರ ಬಂಗಲೆಗಳು ಇಲ್ಲ. ಸರ್ವಾಧಿಕಾರ ಮನೋಭಾವ ಇರುವ ಕಾಲದಲ್ಲಿ ಹತ್ತಾರು ವರ್ಷಗಳು, ಯೋಗ್ಯತೆ ಇಲ್ಲದೆ, ಜವಾಬ್ದಾರಿ ಸರ್ಕಾರ ಎಂದು ಹೆಸರಿಗೆ ಆಡಳಿತ ನಡೆಸುವ ಮಂತ್ರಿಗಳು ವರ್ಷಕ್ಕೊಂದು ೪ ೫ ಲಕ್ಷ ರೂಪಾಯಿಗಳ ಬಂಗಲೆಗಳನ್ನು ಕಟ್ಟುತ್ತಾರೆ. ಇವರಿಗೆ ಇಷ್ಟೊಂದು ಹಣ ಹೇಗೆ ಬರುತ್ತದೆ ಎಂದು ಜನ ಯೋಚನೆ ಮಾಡುವುದಕ್ಕೆ ಹೊರಟಿದ್ದಾರೆ. ಇದನ್ನು ಈ ಸಭೆಯ ಗಮನಕ್ಕೆ ತರಬೇಕಾಗಿದೆ. ಈ ಮನೆಗಳನ್ನು ಮಂತ್ರಿಗಳು ಬೇರೆ ಯಾವ ಸಂಪಾದನೆಯಿಂದ ಕಟ್ಟಿದ್ದಾರೆ ಎಂದು ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಕೆ. ಪ್ರಭಾಕರ್.—ಹೌಸಿಂಗ್ ಬೋರ್ಡು ಇರಲಿಲ್ಲ, ಬ್ಯಾಂಕಿನಲ್ಲಿ ಹಣ ಕೊಡುತ್ತಿರಲಿಲ್ಲ.

ಶ್ರೀ ಕೆ. ಎಂ. ನಾಗಣ್ಣ.—ಆದ್ದರಿಂದ ಈಗ ರಾಜ್ಯದ ಹೆಸರು ಬದಲಾವಣೆಯಾದ ಮೇಲೆ ಸರ್ಕಾರದವರ ಜವಾಬ್ದಾರಿ ಬಹಳ ಮಟ್ಟಿಗೆ ಇದೆ. ಇಡೀ ಕರ್ನಾಟಕದ ಜನತೆಯ ಹಿತ ರಕ್ಷಣೆ ಮಾಡುವುದು ನಮ್ಮ ಸರ್ಕಾರದ ಕರ್ತವ್ಯ. ಅದರಲ್ಲಿಯೂ ನೀವು ಜಾತೀಯ ಮತ ಭೇದಗಳಿಗೆ ಮರುಳಾಗದೆ ಇಂಥ ಜಾತಿಯ ಜನ, ಅಂಥ ಜಾತಿಯ, ನಮ್ಮ ಜನ ಇರಬೇಕು, ಬೇರೆಯವನು ಇರಬಾರದು ಎಂದು ಹೇಳದೆ ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಿಕೊಡಬೇಕು, ಮತ್ತು ಯೋಗ್ಯತೆಗೆ ಮಾನ್ಯತೆ ಕೊಟ್ಟು ಕೆಲಸ ನಡೆಸಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ

ಇನ್ನು ತಮ್ಮ ಅಧಿಕಾರಿಗಳ ಲೋಪದೋಷಗಳನ್ನು, ನಿರ್ದಾಕ್ಷಿಣ್ಯವಾಗಿ ದಂಡಿಸುವುದರ ಮೂಲಕ ಸರಿಪಡಿಸುತ್ತೀರಿ ಎಂದು ನಾನಾದರೂ ಭಾವನೆ ಮಾಡುತ್ತೇನೆ. ಇದರ ಜೊತೆಗೆ ವಿಧಾನ ಸಭೆಯಲ್ಲಿ ೨-೩ ಪ್ರಶ್ನೆಗಳ ಚರ್ಚೆ ಕಾಲದಲ್ಲಿ ಸರ್ಕಾರದ ಮೇಲೆ ಅನುಮಾನಕ್ಕೆ ಕಾರಣವಾಗಿದೆ. ಮೊದಲನೆಯದು, ಶರಾವತಿ ಪ್ರಶ್ನೆ, ಶರಾವತಿ ಬಗ್ಗೆ ತಾವು ಖಂಡಿತವಾಗಿಯೂ ಒಂದು ಕಮಿಟಿ ನೇಮಕ ಮಾಡಿ ಅಲ್ಲಿ ಇರತಕ್ಕ ಲೋಪದೋಷ ಯಾರಿಂದ, ಹೇಗೆ ಆಯಿತು ಎಂದು ಜನಗಳಿಗೆ ತಾವು ತಿಳಿಯ ಹೇಳುವುದು ನಮ್ಮಗಳ ಕರ್ತವ್ಯ. ಇನ್ನೊಂದು ವಾಟರ್ ಸಪ್ಲೈ ಬೋರ್ಡು ಚೇರ್‌ಮನ್‌ರ ಮೇಲೆ ಬೇಕಾದಷ್ಟು ಆಪಾದನೆಗಳು ಬಂದಿವೆ. ದೇಶಕ್ಕೆ ಹೊಸ ಹೆಸರು ನಾಮಕರಣವಾಗಿರುವಾಗ, ಇವರ ಬಗ್ಗೆ ವಿಚಾರಣೆ ಮಾಡಿ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಆಲೋಚನೆ ಮಾಡಬೇಕಾದುದು ಮಾನ್ಯ ಮಂತ್ರಿಗಳ ಕರ್ತವ್ಯ. ಧೈರ್ಯವಾಗಿ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ನನಗೆ ನಂಬಿಕೆ ಇದೆ ಮತ್ತೊಂದು ಕೋಟ್ಯಾಂತರ ರೂಪಾಯಿಗಳನ್ನು ಶ್ರೀ ಕೆ. ಕೆ. ಮೂರ್ತಿಯವರ ಕೈಯಲ್ಲಿ ಕೊಟ್ಟಿದ್ದೀರಿ, ಅವರ ಇತಿಹಾಸವನ್ನು ತರಿಸಿ ನೋಡಿ, ಅವರ ಜಾತಕವನ್ನು ನಾನು ತಯಾರು ಮಾಡುತ್ತಾ ಇದ್ದೇನೆ. ಅವರ ಪೂರ್ಣ ವಿಚಾರವನ್ನು ಮುಖ್ಯಮಂತ್ರಿಗಳಿಗೆ ಬರೆದು ಕಳುಹಿಸುತ್ತೇನೆ. ಕೋಟ್ಯಾಂತರ ರೂಪಾಯಿಗಳನ್ನು

(ಶ್ರೀ ಕೆ ಎಂ. ನಾಗಣ್ಣ)

ಅಂಥವರ ಕೈಗೆ ಕೊಟ್ಟು ಖರ್ಚು ಮಾಡುವುದಕ್ಕೆ ಕೊಟ್ಟಿದ್ದೀರಿ ಎಂಬುದನ್ನು ಗಮನಿಸಿ ಕೂಡಲೇ ಪೂರ್ಣ ವಿಚಾರಣೆ ನಡೆಸಿ, ಚರಿತ್ರೆಯನ್ನು ನೋಡಿ, ಪರಿಶೀಲನೆ ಮಾಡಿ ಮುಂದಿನ ಕ್ರಮ ಕೈಗೊಳ್ಳಬೇಕು: ಇದು ಜನಗಳ ದುಡ್ಡು, ನೀವು ಅವರಿಗೆ ಕೊಡತಕ್ಕ ದುಡ್ಡು ಪ್ರಜೆಗಳ ಮೇಲೆ ತೆರಿಗೆಯಿಂದ ವಸೂಲಾದ ದುಡ್ಡು. ಈ ದುಡ್ಡನ್ನು ಎಷ್ಟೊಂದು ದಕ್ಷತೆಯಿಂದ ಖರ್ಚು ಮಾಡಬೇಕು, ಎಂಥ ಪ್ರಾಮಾಣಿಕರಿಗೆ ವಹಿಸಿ ಕೊಡಬೇಕು, ಏನು ನಿಮ್ಮ ಜವಾಬ್ದಾರಿ ಇದೆ, ಇಂಥಾದ್ದನ್ನು ದಯಮಾಡಿ ಬೇಗನೆ ಸೂಕ್ತ ಕ್ರಮ ತೆಗೆದು ಕೊಂಡರೆ ಮೈಸೂರಿಗೆ ಕರ್ನಾಟಕ ಎನ್ನುವ ಹೆಸರು ನಾಮಕರಣವಾಗಿದ್ದಕ್ಕೆ, ಕರ್ನಾಟಕದ ಮಂತ್ರಿಗಳಾಗಿ ರಾರಾಜಿಸುವುದಕ್ಕೆ ಒಳ್ಳೆಯ ಹೆಸರು ಬರುತ್ತದೆ. ಈ ಬಗ್ಗೆ ಸೂಕ್ತ ಕಾರ್ಯಕ್ರಮ ಹಾಕಿಕೊಳ್ಳಬೇಕು. ಕರ್ನಾಟಕ ಎಷ್ಟು ತಡವಾಗಿ ನಾಮಕರಣವಾದರೂ ಕೂಡ ಪರವಾಗಿಲ್ಲ ೧೬ ವರ್ಷದ ಕೊನೆಗೆ ನಾಮಕರಣ ಮಾಡಿದ ಸಂದರ್ಭದಲ್ಲಿ ಈ ಮಂತ್ರಿಮಂಡಲವನ್ನು ಅಭಿನಂದಿಸುತ್ತೇನೆ. ಜನತಾ ಪಕ್ಷದ ಪರವಾಗಿ ಸಂಪೂರ್ಣವಾಗಿ ಈ ನಿರ್ಣಯವನ್ನು ಸ್ವಾಗತಿಸಿ ಸರ್ಕಾರವನ್ನು ಅಭಿನಂದಿಸಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

4-00. P M.

ಶ್ರೀ ಎಸ್. ಎಂ. ಯಾಹ್ಯಾ (ಭಟ್‌ಕಲ್). —ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರು ಇಡುವ ವಿಷಯವು ಬಹಳ ಪ್ರಾಮುಖ್ಯವಾದ ವಿಷಯವಾಗಿದೆ. ಇದು ಇತಿಹಾಸವನ್ನು ಉಂಟುಮಾಡಿದ ವಿಷಯವಾಗಿದೆ. ಅದರಲ್ಲೂ ನಾವು ಈಗ ಇರುವ ಸದಸ್ಯರು ಬಹಳ ಪುಣ್ಯವಂತರು. ಏಕೆಂದರೆ ಇದರ ಮೊದಲು ಇದ್ದ ಸದಸ್ಯರು ಈ ವಿಷಯದಲ್ಲಿ ಈ ರೀತಿ ಠರಾವನ್ನು ಪಾಸ್ ಮಾಡಲಿಕ್ಕೆ ಅವರ ಕೈಯಿಂದ ಸಾಧ್ಯವಾಗಲಿಲ್ಲ. ಇನ್ನು ಮುಂದೆ ಬರುವ ಸದಸ್ಯರಿಗೆ ಈ ವಿಷಯದ ಮೇಲೆ ಮಾತ ನಾಡುವ ಸಂಧರ್ಭ ಇರುವುದಿಲ್ಲ. ಆದುದರಿಂದ ಪುಣ್ಯದ ಕಾರ್ಯವನ್ನು ನಾವು ಮಾಡುತ್ತಾ ಇದ್ದೇವೆ. ಇದು ಬಹಳ ಸಂತೋಷದ ವಿಷಯವಾಗಿದೆ. ಏಕೆಂದರೆ ಕರ್ನಾಟಕದ ಹೆಸರು ಕನ್ನಡ ಭಾಷೆಗೆ ಸಂಬಾಧವಾದ ಹೆಸರು. ಕನ್ನಡ ಏಕೀಕರಣಕ್ಕಾಗಿ ಮತ್ತು ಕನ್ನಡ ಭಾಷೆಯನ್ನು ಅಭಿವೃದ್ಧಿಗೊಳಿಸುವುದಕ್ಕೆ ಹಲವಾರು ನಾಯಕರು ಬಹಳ ಮಟ್ಟಿಗೆ ತ್ಯಾಗಮಾಡಿದ್ದಾರೆ. ಅವರುಗಳ ಬಗ್ಗೆ ನನ್ನ ಗೆಳೆಯರಾದ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಮತ್ತು ವಾಟಾಳ್ ನಾಗರಾಜ್‌ರವರು ಹೇಳಿದ್ದಾರೆ. ಈ ರೀತಿ ತ್ಯಾಗ ಮಾಡಿರುವ ನಾಯಕರಿಗೆಲ್ಲಾ ನಾವು ಕೃತಜ್ಞರಾಗಿದ್ದೇವೆ. ಶ್ರೀಯುತರಾದ ಹನುಮಂತಯ್ಯನವರು. ದೊಡ್ಡ ಮೇಟಿಯವರು, ಗೋಪಾಲಗೌಡರು, ಚೆನ್ನಯ್ಯನವರು ಮತ್ತು ಇತರ ಹಲವಾರು ಮಹನೀಯರು ಹೆಚ್ಚು ತ್ಯಾಗ ಮಾಡಿದ್ದಾರೆ. ಕರ್ನಾಟಕ ಏಕೀಕರಣ ಆಗಬೇಕು, ರಾಜ್ಯಕ್ಕೆ ಕರ್ನಾಟಕ ಎಂದು ಹೆಸರು ಇಡಬೇಕು ಎಂದು ಕೆಲವರು ವಾದಮಾಡಿದ್ದಾರೆ. ಕರ್ನಾಟಕ ಎಂದರೆ ರಾಕ್ಷಸರ ಹೆಸರು, ಮೈಸೂರು ರಾಕ್ಷಸರ ಹೆಸರು ಎಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ನನ್ನ ಅಭಿಪ್ರಾಯದ ಪ್ರಕಾರ ರಾಕ್ಷಸ, ಭೂತ ಎನ್ನುವುದರಲ್ಲಿ ನಂಬಿಕೆ ಇಲ್ಲ. ಕರ್ನಾಟಕ ಎಂದರೆ ಭಾಷಾವಾರು ಪ್ರಾಂತ್ಯಕ್ಕೆ ಸಂಬಂಧ ಪಟ್ಟ ಹೆಸರು, ಕರ್ನಾಟಕ ರಚನೆ ಮತ್ತು ಕರ್ನಾಟಕ ಎಂಬ ಹೆಸರಿನ ಬಗ್ಗೆ ಶ್ರೀ ರಾಜಗೋಪಾಲಚಾರಿಯವರು ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಈ ಬಗ್ಗೆ ಈಗ ಮಾತನಾಡಿದ ಹಲವು ಸದಸ್ಯರು ಶ್ರೀ ರಾಜಗೋಪಾಲಾಚಾರಿಯವರ ಹೇಳಿಕೆಗೆ ಉತ್ತರ ಕೊಟ್ಟಿದ್ದಾರೆ. ಸಾಹಿತ್ಯದ ಆಧಾರದ ಮೇಲೆ ಅದನ್ನು ನಿರಾಕರಿಸಿದ್ದಾರೆ. ಶ್ರೀಮಾನ್ ರಾಜಗೋಪಾಲಾಚಾರಿಯವರದು ಸ್ವಂತ ಅಭಿಪ್ರಾಯ. ಅವರಿಗೆ ಇಷ್ಟು ಹೇಳಬೇಕಾಗಿದೆ. ಕನ್ನಡ ಎಂದರೆ ಸಾಹಿತ್ಯ ಇರಲಿ, ಇಲ್ಲದೆ ಇರಲಿ, ಆದರೂ ಕನ್ನಡಕ್ಕೆ ಸಾಕಷ್ಟು ಹಿಂದಿನಿಂದ ಚರಿತ್ರಾಂಶವಿದೆ. ತಮಿಳುನಾಡಿನಲ್ಲಿ ಮದ್ರಾಸ್ ಎಂದು ಇದ್ದ ಹೆಸರನ್ನು ತೆಗೆದು ತಮಿಳುನಾಡು ಎಂದು ಹೇಗೆ ಹೆಸರಿಟ್ಟರೋ ಅದೇ ರೀತಿಯಲ್ಲಿ ಕನ್ನಡ ನಾಡಿಗೆ ಕರ್ನಾಟಕ ಎಂದು ಹೆಸರು ಇಡುತ್ತೇವೆ. ಪಂಜಾಬಿ ಭಾಷೆ ಮಾತನಾಡುವುದರಿಂದ ಪಂಜಾಬ್ ಎಂದು ಹೆಸರು ಇಟ್ಟಿದ್ದಾರೆ. ಬೆಂಗಾಲಿ ಭಾಷೆ ಮಾತನಾಡುವುದರಿಂದ ಬಂಗಾಳ ಎಂದೂ, ಗುಜರಾತಿ ಮಾತನಾಡುವುದರಿಂದ ಗುಜರಾತ್ ಎಂದು ಹೆಸರು ಇಟ್ಟಿದ್ದಾರೆ. ಕನ್ನಡ ಮಾತನಾಡುವುದರಿಂದ ಕರ್ನಾಟಕವೆಂದೂ ಹೇಳುತ್ತೇವೆ. ನಮ್ಮ ದೇಶದಲ್ಲೇ ಅಲ್ಲ ಪರದೇಶದಲ್ಲೂ ಕೂಡ ಇಂಗ್ಲೀಷ್ ಮಾತನಾಡುವುದರಿಂದ ಇಂಗ್ಲೆಂಡ್, ಫ್ರೆಂಚ್ ಭಾಷೆ ಮಾತನಾಡುವುದರಿಂದ ಫ್ರಾನ್ಸ್ ಎಂದು, ಜಪಾನೀಸ್ ಭಾಷೆ ಮಾತನಾಡುವುದರಿಂದ ಜಪಾನ್ ಎಂದು ಹೇಳುತ್ತಾರೆ, ಚೈನೀಸ್ ಭಾಷೆ ಮಾತನಾಡುವುದರಿಂದ ಚೈನಾ ರಷ್ಯನ್ ಭಾಷೆ ಮಾತನಾಡುವುದರಿಂದ ರಷ್ಯಾ ಎಂದೂ ಹೇಳುತ್ತಾರೆ ಈ ರೀತಿ ಭಾಷೆಗೆ ಸಂಬಂಧವಾದ ಹೆಸರು ಸ್ವಾಭಾವಿಕವಾಗಿ ಆಗುವುದು. ಆದ್ದರಿಂದ ಕರ್ನಾಟಕ ಎಂದು ನಾವು ಹೆಸರು ಇಡುವುದಕ್ಕೆ ಅದು ಬಹಳ ಸ್ವಾಭಾವಿಕವಾದ ಹೆಸರಾಗಿದೆ. ಕೆಲವರು ಈ ಸಭೆಯಲ್ಲಿ ಹೇಳಿದರು ಈ ಹೆಸರು ೧೦–೧೫ ವರ್ಷಗಳ ಹಿಂದೆಯೇ ಬರಬೇಕಿತ್ತು ಎಂದು,

ಆದರೆ ನನ್ನ ಅಭಿಪ್ರಾಯ ಏನೆಂದರೆ ಈ ಹೆಸರು ಹಿಂದೆ ಬರದೆ ಈಗ ಬಂದದ್ದು ಸರಿ. This is an appropriate time. ಯಾತಕ್ಕೆಂದರೆ ೧೦-೧೫ ವರ್ಷಗಳ ಹಿಂದೆ ಬಂದಿದ್ದರೆ ನಮ್ಮ ನಮ್ಮಲ್ಲೇ ಭಿನ್ನಾಭಿಪ್ರಾಯಗಳು ಉಂಟಾಗುತ್ತಿದ್ದವು, ನಮ್ಮಲ್ಲಿ ಒಡಕು ಉಂಟಾಗುತ್ತಿತ್ತು. ನಮ್ಮಲ್ಲೇ ಘರ್ಷಣೆ ಉಂಟಾಗುತ್ತಿತ್ತು. ಆದುದರಿಂದ ಈಗ ಯಾವರೀತಿ ಭಿನ್ನಾಭಿಪ್ರಾಯವಿಲ್ಲ. ಇಲ್ಲಿ ಮಾತನಾಡಿದವರು ಕರ್ನಾಟಕ ಎಂಬ ಹೆಸರನ್ನು ಸ್ವಾಗತಿಸಿದ್ದಾರೆ. ಇದನ್ನು ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ದೇವರಾಜ್ ಅರಸ್ ಅವರು ಈ ಸಭೆಯ ಮುಂದೆ ಮಂಡಿಸಿರುವುದು ಅವರ ಮುಂದಾಲೋಚನೆ (Foresight) ಎಂದು ಹೇಳಿದರೆ ತಪ್ಪಾಗಲಾರದು. ಈ ಸಭೆಯ ಮುಂದೆ ಮಂಡಿಸಿರುವುದು ನಮ್ಮ ಮುಖ್ಯ ಮಂತ್ರಿಗಳ ನಾಯಕತ್ವ ಮತ್ತು ದೂರದೃಷ್ಟಿ (statesmanship and foresight) ಗೆ ಒಂದು ಉದಾಹರಣೆಯಾಗಿದೆ. ಈ ವಿಷಯಕ್ಕೆ ಯಾವುದೂ ಒಂದು ಭಿನ್ನಾಭಿಪ್ರಾಯವಿಲ್ಲ. ಎಲ್ಲರೂ ಸ್ವಾಗತಿಸಿದ್ದಾರೆ. ಷೇಕ್‌ಸ್ಪಿಯರ್ ಹೇಳಿದರು (what is in a name) ಹೆಸರಿನಲ್ಲಿ ಏನಿದೆ ಎಂದು ಇದೊಂದು ಸಾಮಾನ್ಯ ಮಾತಾಗಿದೆ. ಆದರೆ ಹೆಸರಿನಲ್ಲಿ ತುಂಬಾ ಆಸಕ್ತಿ ಇದೆ. ಲಾಭ ಆಗುವುದು ಇದೆ, ನಷ್ಟ ಆಗುವುದು ಇದೆ. ತೊಡಕು, ತೊಂದರೆ ಆಗುವುದು ಇದೆ ಎಂಬುದು ನನ್ನ ಸ್ವಂತ ಅನುಭವ. ಉದಾಹರಣೆಗೆ ನನ್ನ ಹೆಸರು ನನಗೆ ತುಂಬಾ ತೊಂದರೆ ಕೊಟ್ಟಿದೆ. ನಮ್ಮ ಗೆಳೆಯರಿಗೆ ನನ್ನ ಹೆಸರನ್ನು ಸರಿಯಾಗಿ ಉಚ್ಚರಿಸುವುದಕ್ಕೆ ಬರುವುದಿಲ್ಲ. ನಂತರ ಏನಾಯಿತು ಎಂದರೆ ಯಾಹ್ಯಾಖಾನ್ ಎಂಬ ಹೆಸರಿನವರು ಪಾಕೀಸ್ಥಾನದ ಅಧ್ಯಕ್ಷರಾದರು. ಆಗ ಎಲ್ಲರಿಗೂ ನನ್ನ ಹೆಸರನ್ನು ಕರೆಯಲು ಸುಲಭವಾಯಿತು. ಆದರೆ ನನ್ನ ಹೆಸರು ''ಯಾಹ್ಯಾ'', ಆದರೆ "ಯಾಹ್ಯಾಖಾನ್'' ಅಲ್ಲ. ಆ ಸಮಯದಲ್ಲಿ ಪಾಕಿಸ್ಥಾನ ಮತ್ತು ಹಿಂದೂ ದೇಶಕ್ಕೆ ಯುದ್ಧವಾಯಿತು ಆ ಕಾರಣದಿಂದಾಗಿ ಸ್ವಲ್ಪ ಜನರು ನನ್ನನ್ನು ದ್ವೇಷದಿಂದ ನೋಡಲಿಕ್ಕೆ ಶುರುಮಾಡಿದರು. ಅವನು ಯಾಹ್ಯಾಖಾನ್, ನಾನು ಯಾಹ್ಯಾಖಾನ್ ಅಲ್ಲ ಆ ಯಾಹ್ಯಾಖಾನ್ ಮತ್ತು ಅವನ ದೇಶವನ್ನು ನೋಡಿ ನನ್ನನ್ನು ದ್ವೇಷದಿಂದ ನೋಡಬೇಡಿ, ರಾಮ ಎಂಬ ಹೆಸರುಳ್ಳವರೆಲ್ಲ ದೈವಿಕ ಸ್ವಭಾವ ಇರುವವರು ಮತ್ತು ರಾಕ್ಷಸ ಸ್ವಭಾವ ಇರುವವರೂ ಇರಬಹುದು. ಎಲೆಕ್ಷನ್ ಕಾಲದಲ್ಲಿ ನನ್ನ ಗೆಳೆಯರು "ಯಹಿಯಾ" ಎಂದು ಹೆಸರಿಟ್ಟುಕೊಳ್ಳಬೇಡಿ ''ಸಿದ್ದಿಕಿ'' ಎಂದು ಹೇಳಿ ಇಲ್ಲವಾದರೆ ಓಟು ಸಿಕ್ಕುವುದಿಲ್ಲ ಎಂಬುದಾಗಿ ಹೇಳಿದರು. ಆದರೂ ನನ್ನ ಹೆಸರಿನ ಬಗ್ಗೆ ವಿರೋಧಪಕ್ಷದವರು ಸಾಕಷ್ಟು ಅಪ ಪ್ರಚಾರ ಮಾಡಿದರು. ಆದರೆ ಏನೂ ನಡೆಯಲಿಲ್ಲ. ಹೇಗೆ ಹೆಸರಿನಿಂದ ತೊಂದರೆ ಬರುತ್ತದೆ ಎಂಬುದಕ್ಕೆ ಒಂದು ಉದಾಹರಣೆಯನ್ನು ಕೊಟ್ಟೆ. ನಿಜವಾಗಿಯೂ ಹೆಸರಿನಲ್ಲಿ ಶಕ್ತಿ ಇದೆ, ಪ್ರಭಾವ ಇದೆ. ಕರ್ನಾಟಕ ಎಂಬ ಹೆಸರು ಬಹಳ ಚಲೋದು—ಮಧುರವಾಗಿದೆ, ಕರ್ನಾಟಕ ಎಂಬ ಪದ ಉಚ್ಚಾರಣೆಗೂ ಸುಲಭ. ಇದು ಕನ್ನಡ ಭಾಷೆಗೆ ಸಂಬಂಧಪಟ್ಟ ಹೆಸರು. ಈ ಹೆಸರಿನಲ್ಲಿ ಯಾವ ಜಾತಿ ಮತಭೇದ ಇಲ್ಲ. ಯಾವ ಭಾಷೆಗೂ ಜಾತಿಮತ ಇರುವುದಿಲ್ಲ. ಕನ್ನಡ ಭಾಷೆ ಮಾತನಾಡತಕ್ಕವರಲ್ಲಿ ಹಿಂದುಗಳು, ಮುಸ್ಲಿಮರು, ಕ್ರೈಸ್ತರು ಹೀಗೆ ಎಲ್ಲಾ ಜಾತಿಯವರೂ ಇದ್ದಾರೆ. ಅದೇ ರೀತಿ ತಮಿಳು ಮಾತನಾಡುವವರಲ್ಲೂ ಇದೇ ರೀತಿ ಎಲ್ಲಾ ಜಾತಿಯವರೂ ಇದ್ದಾರೆ. ಆದುದರಿಂದ ಭಾಷೆಗೆ ಜಾತಿ ಮತ ಇಲ್ಲ, ''ಕರ್ನಾಟಕ'' ಎಂಬ ಶಬ್ದವು ಬಹಳ ಸೆಕ್ಯೂಲರಿಸಮ ಜಾತ್ಯತೀತ ತತ್ವವನ್ನು ಸಾಧಿಸುವುದಕ್ಕೆ ಸಾಧನವಾಗಿದೆ. ನಾವು ಉಪಯೋಗ ಮಾಡುವ ''ಕರ್ನಾಟಕ'' ಶಬ್ದ ಹಾಗೇ ನಮ್ಮ ರಾಜ್ಯ ಕೂಡ ಸೆಕ್ಯೂಲರ್ ಆದುದರಿಂದ ನಮ್ಮ ನಡೆ ನುಡಿಗಳೆಲ್ಲ ಸೆಕ್ಯೂಲರ್ ತತ್ವದ ಮೇಲೆ ಇರಬೇಕು. ''ಕರ್ನಾಟಕ'' ಎಂಬ ಹೆಸರು ಭಾಷೆ ಮೇಲೆ ಹೊಂದಿಕೊಂಡಿದೆ. ನಮ್ಮ ರಾಜ್ಯದಲ್ಲಿ ಮರಾಠಿ, ತಮಿಳು, ತೆಲುಗು, ಉರ್ದು ಇತ್ಯಾದಿ ಭಾಷೆಗಳಲ್ಲಿ ಮಾತನಾಡುವವರು ಇದ್ದಾರೆ. ಕನ್ನಡ ಹೊರತು ಬೇರೆ ಯಾವ ಭಾಷೆಯಲ್ಲಿ ಯಾರೇ ಮಾತನಾಡಿದರೂ ಅವರು ಸೆಕೆಂಡ್ ಗ್ರೇಡ್ ಸಿಟಿಜನ್ಸ್ ಎಂಬ ಭಾವನೆ ಬರಬಾರದು. ಎಲ್ಲರೂ ಸಮಾನರು. ಈ ರೀತಿ ಸಮಾನ ಭಾವನೆ ''ಕರ್ನಾಟಕ" ಎಂಬ ಶಬ್ದದಲ್ಲಿ ಬರಬೇಕು. ಹೆಸರು ಹಾಕಿಕೊಂಡು ಸುಮ್ಮನೆ ಕೂತರೆ ಸಾಲದು. ಹೆಸರಿನಲ್ಲಿ ಯಾವ ಸೆಕ್ಯೂಲರಿಸಮ್ ತತ್ವ ಅಡಕವಾಗಿದೆಯೋ ಅದರ ಪ್ರಕಾರ ಎಲ್ಲಾ ಭಾಷೆ ಮಾತನಾಡುವವರೂ ಸರಿಸಮಾನರು, ಅವರಲ್ಲಿ ಯಾರೂ ಸೆಕೆಂಡ್‌ಗ್ರೇಡ್, ಥರ್ಡ್‌ಗ್ರೇಡ್ ಸಿಟಿಜನ್ಸ್ ಇಲ್ಲ. ಎಲ್ಲರೂ ಒಂದೇ ಎನ್ನುವ ಭಾವನೆಯನ್ನು ನಾವು ಇನ್ನು ಮುಂದೆ ಬೆಳೆಸಬೇಕು.

ಕರ್ನಾಟಕ ಎಂಬ ಹೆಸರು ಸೆಕ್ಯೂಲರಿಸಮ್ ಆಧಾರದ ಮೇಲೆ ನಿಂತಿದೆ. ಕರ್ನಾಟಕ ಎಂಬ ಹೆಸರಿನಿಂದ ಸೈಕಲಾಜಿಕಲ್ ಮತ್ತು ಎಮೋಷನಲ್ ಇಂಟಿಗ್ರೇಷನನ್ನು ಕರ್ನಾಟಕ ರಾಜ್ಯದಲ್ಲಿ ತರಬೇಕೆಂಬುದು ನಮ್ಮ ಉದ್ದೇಶವಾಗಿದೆ. ಇದರಿಂದ ಕರ್ನಾಟಕದ ಕೀರ್ತಿ ಹೆಚ್ಚಾಗುತ್ತಿದೆ. ''ಕರ್ನಾಟಕ" ಎನ್ನುವ ಹೆಸರನ್ನಿಡುವುದಕ್ಕೆ ಮತ್ತು ಈ ಕರ್ನಾಟಕ ರಾಜ್ಯದ ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಬೇಕು. ಕರ್ನಾಟಕದಲ್ಲಿ ಹಲವಾರು ಸಮಸ್ಯೆಗಳಿವೆ ಅವುಗಳನ್ನು ನಿವಾರಿಸಲು ಪ್ರಯತ್ನ ಮಾಡಬೇಕಾಗಿದೆ. ''ಕರ್ನಾಟಕ'' ಎಂಬ ಹೆಸರು ನಮ್ಮ ರಾಜ್ಯಕ್ಕೆ ಕೀರ್ತಿಯನ್ನು ತರಲಿ

(ಶ್ರೀ ಎಸ್. ಎಂ. ಯಾಹ್ಯಾ)

ನಮ್ಮ ಈ ಕರ್ನಾಟಕ ರಾಜ್ಯ ಇನ್ನೂ ಹೆಚ್ಚಿನ ಅಭಿವೃದ್ಧಿ ಹೊಂದಿ ಒಂದು ಮಾದರಿ ರಾಜ್ಯವಾಗಲಿ ಎಂದು ಹಾರೈಸಿ, ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : (ಸಾಗರ).—ಮಾನ್ಯ ಅಧ್ಯಕ್ಷರೇ, ಈ ರಾಜ್ಯಕ್ಕೆ ಕರ್ನಾಟಕ ಎನ್ನತಕ್ಕ ಹೆಸರನ್ನು ಇಡಲು ಈ ದಿನ ಇಲ್ಲಿ ನಿರ್ಣಯ ತಂದಿರುವುದಕ್ಕಾಗಿ ನಾನು ಹೃತ್ಪೂರ್ವಕವಾಗಿ ಬೆಂಬಲಿಸುತ್ತೇನೆ. ಜೊತೆಗೆ ಇಂತಹ ಒಂದು ಸುಸಂದರ್ಭದಲ್ಲಿ ಈ ನಿರ್ಣಯವನ್ನು ಈ ಸದನದ ಮುಂದೆ ತಂದು ಸರ್ವರ ಅಭಿಪ್ರಾಯವನ್ನೂ ರೂಪಿಸುವುದರಲ್ಲಿ ನಮ್ಮ ಮುಖ್ಯ ಮಂತ್ರಿಗಳು ಬಹಳ ಯಶಸ್ವಿಯಾಗಿದ್ದಾರೆ. ಅದಕ್ಕಾಗಿ ನಾನು ಅವರನ್ನು ಇಲ್ಲಿ ವಂದಿಸಬೇಕಾಗಿದೆ. ಈ ನಿರ್ಣಯವನ್ನು ಮಂಡನೆ ಮಾಡುವಾಗ ಇದರ ಇತಿಹಾಸ ಚರಿತ್ರೆಯನ್ನು ಬಹುವಾಗಿ ಉಲ್ಲೇಖಿಸಿದುದು, ಖಂಡಿತವಾಗಿಯೂ ಇದು ಒಬ್ಬ ರಾಜಕಾರಣಿಗಳ ಗುಣವನ್ನು ಪ್ರತಿ ಬಿಂಬಿಸುತ್ತದೆ. ಮುಖ್ಯವಾಗಿ ಇದರಲ್ಲಿ ಕಂಡುಬರುವ ಗುಣಗಳು ಎಂದರೆ ರಾಜಕಾರಣಿಗೆ ಇತಿಹಾಸ ಸಂಬಂಧವಾದ ಪ್ರಜ್ಞೆ ಇರಬೇಕಾದದು ಅಗತ್ಯ, ಇಲ್ಲದೆ ಹೋದರೆ ಇದು ಕಂಪ್ಳಿಯಲ್ಲಿ ಪಟ್ಟು ಕಳೆದುಕೊಂಡ ಜಟ್ಟಿಯಂತಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಆದುದರಿಂದ ಜಾಣ ರಾಜಕಾರಣಿಗಳು ಅವರ ಕಾರ್ಯದಲ್ಲಿ ಯಶಸ್ವಿಯಾಗಬೇಕಾದರೆ ಇತಿಹಾಸ ಮುಂತಾದವುಗಳ ಪ್ರಜ್ಞೆ ಇರಬೇಕು ಮತ್ತು ಅದರಂತೆ ಅವರು ಬದುಕಿ ಬಾಳಬೇಕು. ಇಂತಹ ಒಂದು ಪ್ರಜ್ಞೆ ನಮ್ಮ ಮುಖ್ಯ ಮಂತ್ರಿಗಳಲ್ಲಿದೆ ; ಎಲ್ಲರ ಅಭಿಪ್ರಾಯಗಳನ್ನೂ ಗಮನಕ್ಕೆ ತೆಗೆದುಕೊಂಡು ಇಲ್ಲಿ ಶಕ್ತಿಯುತವಾದ ಒಂದು ನಿರ್ಣಯವನ್ನು ತಂದು ಮಂಡಿಸಿದ್ದಾರೆ. ಇದಕ್ಕಾಗಿ ಅವರನ್ನು ನಾವು ಎಷ್ಟು ಹೊಗಳಿದರೂ ಸಾಲದು. ವಿಶೇಷವಾಗಿ ಈ ವಿಷಯದ ಬಗ್ಗೆ ಕಳಕಳಿ ಇಟ್ಟುಕೊಂಡಿರುವ ಜನ ನಾವು. ಕರ್ನಾಟಕ ಎಂಬ ಹೆಸರನ್ನು ಇಲ್ಲಿ ತರಬೇಕು ಎಂದು ಆಸೆ ಇಟ್ಟುಕೊಂಡಂತೆ ಇಲ್ಲಿ ತಂದಿರುವ ನಿರ್ಣಯವನ್ನು ನಾವು ತುಂಬಾ ಸಂತೋಷದಿಂದ ಸ್ವಾಗತಿಸುತ್ತೇವೆ. ಮೈಸೂರು ಚರಿತ್ರೆಯ ಬಗ್ಗೆ ನಾವು ನಮ್ಮ ಅಭಿಪ್ರಾಯಗಳನ್ನು ಹೇಳಲು ಹೋಗುವುದಿಲ್ಲ ಹಾಗೂ ಮೈಸೂರಿನ ಕೊಡುಗೆ ಬಗ್ಗೆ ಅಭಿಪ್ರಾಯವನ್ನು ಕೊಡಲು ಹೋಗುವುದಿಲ್ಲ. ಎಲ್ಲರೂ ಕರ್ನಾಟಕವಾಗಬೇಕು ಎಂದು ಒಮ್ಮತದಿಂದ ಹೇಳುತ್ತಿರುವಾಗ ಮೈಸೂರು ಚರಿತ್ರೆ ಹಾಗೂ ಕರ್ನಾಟಕದ ಚರಿತ್ರೆ ಬಗ್ಗೆ ಭಾಷಣ ಮಾಡುವುದು ಅನಾವಶ್ಯಕ ಎಂದು ನಾನಾದರೂ ಭಾವಿಸುತ್ತೇನೆ. ಮೈಸೂರು ರಾಜ್ಯ ಅಸ್ತಿತ್ವಕ್ಕೆ ಬಂದಾಗ ಆಗ ಎಷ್ಟೋ ಆಶ್ರಿತ ಸಂಸ್ಥಾನಗಳಿದ್ದವು. ಅಂತಹ ಆಶ್ರಿತ ಸಂಸ್ಥಾನಗಳಲ್ಲಿ ಬಿದನೂರು ಸಂಸ್ಥಾನ ಒಂದು ಹಿಂದೆ ಇತ್ತು. ನಾವು ಆ ಬಿದನೂರು ಸಂಸ್ಥಾನಕ್ಕೆ ಸೇರಿದವರಾಗಿದ್ದವು. ಹಿಂದೆ ನಮ್ಮ ಆ ಸಂಸ್ಥಾನದ ಸಂಸ್ಕೃತಿ ಬಗ್ಗೆ ಕೆಲವರು ಹೇಳುತ್ತಿದ್ದರು ಆಗ ನಮ್ಮ ಸಂಸ್ಥಾನದಲ್ಲಿ ಇದ್ದಂತಹ ಒಂದು ರಾಜ ಬೀದಿ ಸುಮಾರು ಐದು ಮೈಲುಗಳಷ್ಟು ಉದ್ದವಾಗಿತ್ತು ಎಂದು ಹೇಳುತ್ತಿದ್ದರು ಅಂತಹ ಒಂದು ದೊಡ್ಡ ಸಂಸ್ಥಾನದಲ್ಲಿದ್ದವರು ನಾವು. ಅಂತಹ ಬಿದನೂರು ಸಂಸ್ಥಾನವನ್ನು ಮೈಸೂರು ಸಂಸ್ಥಾನದ ಅರಸರು ಸೋಲಿಸಿ ಮೈಸೂರು ಸಂಸ್ಥಾನದೊಳಗೆ ನಮ್ಮ ಬಿದನೂರು ಸಂಸ್ಥಾನವೂ ಸೇರಿ ಹೋಯಿತು. ಇಂತಹ ಬಿದನೂರು ಸಂಸ್ಥಾನ ಇಂದು ಕರ್ನಾಟಕ ಸಂಸ್ಥಾನದೊಡನೆ ವಿಲೀನವಾಗಿದೆ, ಮೈಸೂರು ಸಂಸ್ಥಾನದಂತೆ ಅದು ಹಾಗೆಯೇ ಇದ್ದಿದ್ದರೆ ಅದು ಇಂದು ಕರ್ನಾಟಕವಾಗುತ್ತಿತ್ತು. ಆದರೆ ಅನೇಕ ಸಾರಿ ಈ ಕರ್ನಾಟಕ ಎನ್ನುವ ಹೆಸರನ್ನು ಇಡುವುದರ ಬಗೆ ಕೆಲವರು ಸಂಕುಚಿತ ಮನೋಭಾವವನ್ನು ವ್ಯಕ್ತಮಾಡಿದ್ದರು ಎಂದು ನಾವು ಕೇಳುತ್ತೇವೆ. ಇದಕ್ಕೆ ಕಾರಣ ಕರ್ನಾಟಕವಾಗಿಬಿಟ್ಟರೆ ಬರೀ ಲಿಂಗಾಯತರ ರಾಜ್ಯವಾಗುತ್ತದೆ, ಮೈಸೂರು ಎಂದು ಇದ್ದರೆ ಬರೀ ಒಕ್ಕಲಿಗರ ರಾಜ್ಯವಾಗುತ್ತದೆ ಎನ್ನುವ ಅಭಿಪ್ರಾಯಗಳನ್ನೂ ಸೂಚಿಸಿದ ಸಂದರ್ಭಗಳೂ ಇದ್ದವು ಎಂದು ಕೇಳಿದ್ದೇವೆ. ನಾನು ಹೇಳುವುದು ಇಷ್ಟೇ. ಇನ್ನು ಮುಂದೆ ಇಂತಹ ಸಂಕುಚಿತ ಮನೋಭಾವನೆಗಳನ್ನು ತರುವುದು ಬೇಡ. ವಿಶಾಲ ಕರ್ನಾಟಕ ಎಂದು ಸ್ಥಾಪನೆ ಮಾಡಿಕೊಂಡ ಮೇಲೆ ಇನ್ನು ಮುಂದೆ ಮೈಸೂರಿನ ಬಗ್ಗೆ ಮಾತಾಡುವುದು ಬೇಡ. ಕರ್ನಾಟಕವೆಂದೇ ಎಲ್ಲರೂ ಹೇಳೋಣ. ಕರ್ನಾಟಕ ಎಂಬ ಹೆಸರನ್ನು ಅನುಕರಣ ಮಾಡುವುದು ನ್ಯಾಯವಾದುದು ಮತ್ತು ಸ್ತುತ್ಯವಾದುದು. ಮೈಸೂರು ಎನ್ನುವ ಹೆಸರೇ ಚೆನ್ನಾಗಿತ್ತು ಎಂದು ಹೇಳುವವರೂ ಇದ್ದಾರೆ. ಆದರೆ ನಾವೆಲ್ಲ ಸೇರಿ ಇಂದು ಕರ್ನಾಟಕ ಎನ್ನುವ ಹೆಸರನ್ನು ಇಡಬೇಕೆಂದು ಒತ್ತಾಯ ಮಾಡುತ್ತಿದ್ದುದನ್ನು ಗಮನಕ್ಕೆ ತೆಗೆದುಕೊಂಡು ಇಲ್ಲಿ ಕರ್ನಾಟಕ ಎನ್ನುವ ಹೆಸರನ್ನು ಇಡಬೇಕೆಂದು ನಿರ್ಣಯ ಇಟ್ಟಿದ್ದಾರೆ. ಇದನ್ನು ಇಟ್ಟ ಮೇಲೆ ಈ ನಾಡನ್ನು ಸಂಪದ್ಭರಿತವಾದ ನಾಡನ್ನು ಕಟ್ಟತಕ್ಕ ಹೊಣೆಗಾರಿಕೆ ನಮ್ಮ ಮೇಲೆ ಇದೆ ಎನ್ನುವ ಒಂದು ಮಾತನ್ನು ನಾವು ಹೇಳಿದರೆ ಅದು ತಪ್ಪಾಗುವುದಿಲ್ಲ. ಅನೇಕರು ಕರ್ನಾಟಕ ಎಂದು ಹೆಸರು ಇಡುವುದಕ್ಕಿಂತ ಹಿಂದೆ ಇದ್ದ ಹೆಸರೇ ಇದ್ದರೆ ಅದರಿಂದೇನೂ ದೊಡ್ಡ ಅನಾಹುತವೇನೂ ಆಗುತ್ತಿರಲಿಲ್ಲ ಎಂದು ಅಭಿಪ್ರಾಯಪಟ್ಟರು ಎಂದು ಮಾನ್ಯ ದೇವರಾಜಅರಸ್‌ರವರು ಇಲ್ಲಿ ಇದರ ಹಿನ್ನೆಲೆಯನ್ನು ಸ್ವಲ್ಪ ಹೇಳಿದರು. ಅನೇಕ ಸಾರಿ ಅವರು

ಇದ್ದುದನ್ನು ಇದ್ದ ಹಾಗೇ ಹೇಳಿದರು. ಆದರೆ ಇಲ್ಲಿ ಕೆಲವರು ಬಾಯಲ್ಲಿ ಹೇಳುವುದು ಒಂದು ಕೆಲಸ ಮಾಡುವುದು ಬೇರೊಂದು ಎನ್ನುವ ಹಾಗೆ ಇರುತ್ತಾರೆ. ಇದು ತುಂಬಾ ವ್ಯಸನವಾದ ಸಂಗತಿ. ಆದರೆ ವಾಸ್ತವಾಂಶಗಳನ್ನು ಅರಿತುಕೊಂಡು ಶ್ರೀಮಾನ್ ದೇವರಾಜಅರಸ್‌ರವರು ಅವರ ಅಭಿಪ್ರಾಯವನ್ನು ನ್ಯಾಯವಾಗಿ ಹೇಳಿದರು, ಸ್ವಾಭಾವಿಕವಾಗಿ ಹೇಳಿದರು, ಸತ್ಯವಾಗಿ ಹೇಳಿದರು. ಅವರ ಮಂತ್ರಿ ಮಂಡಲದಲ್ಲಿ ಅಭಿಪ್ರಾಯಗಳು ಬೇರೆ ಇದ್ದರೂ ಎಲ್ಲ ಜನರ ಅಭಿಪ್ರಾಯಗಳಿಗೂ ಮನ್ನಣೆ ಕೊಡಬೇಕೆಂದು ಹೇಳಿರುವುದು ರಾಜಕಾರಣಗಳ ಒಂದು ಒಳ್ಳೆಯ ಗುಣ. ಇಂದು ಕರ್ನಾಟಕ ಎನ್ನುವ ಹೆಸರು ಉದಯ ವಾಯಿತು. ಇದಾದ ಮೇಲೆ ನಮ್ಮ ಈ ರಾಜ್ಯವನ್ನು ಕಟ್ಟುವುದರಲ್ಲಿ ಹಿಂದು ಮುಂದು ನೋಡಬಾರದು. ಧೈರ್ಯದಿಂದ ಶ್ರೀಮಾನ್ ದೇವರಾಜಅರಸ್‌ರವರು ಇದನ್ನು ಕಾರ್ಯರೂಪಕ್ಕೆ ತರಬೇಕೆಂದು ಇಲ್ಲಿ ತಂದಿರುವುದು ರಾಜಕಾರಣಿಗಳ ಒಂದು ಒಳ್ಳೆಯ ಗುಣ. ಆ ರೀತಿ ಮಾಡುವುದು ಸ್ವಾಭಾವಿಕ. ಇದನ್ನು ನಾವೆಲ್ಲರೂ ಸ್ವಾಗತ ಮಾಡಬೇಕುದುದು ಅವಶ್ಯಕ. ಧೈರ್ಯದಿಂದ ಅವರು ಇಂದು ಇಂತಹ ಒಂದು ನಿರ್ಣಯ ತಂದು ಭಾಷೆಯ ಆಧಾರದ ಮೇಲೆ ಕರ್ನಾಟಕ ರಾಜ್ಯ ನಿರ್ಮಾಣವಾಗಬೇಕು ಎಂದು ಇಲ್ಲಿ ನಿರ್ಣಯ ತಂದಿದ್ದಾರೆ, ಇದನ್ನು ಹೇಡಿಯಾಗಿದ್ದರೆ ತರಲು ಸಾಧ್ಯವಾಗುತ್ತಿರಲಿಲ್ಲ. ಇತಿಹಾಸ ಪ್ರಜ್ಞೆಯುಳ್ಳವರು ಇವರು. ಇತಿಹಾಸಕಾರರ ಪಂಕ್ತಿಯಲ್ಲಿ ಇವರ ಹೆಸರೂ ಇರುತ್ತದೆ. ಇಂತಹ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾದರೆ ರಾಜಕಾರಣಿಗಳಿಗೆ ಇತಿಹಾಸದ ಪ್ರಜ್ಞೆ ಇದ್ದರೆ ಇದನ್ನು ತರುವುದು ಸಾಧ್ಯ. ಅಂತಹ ಕೆಲಸವನ್ನು ಮಾಡಿದ್ದಾರೆ. ಇತಿಹಾಸ ಚಕ್ರ ಬದಲಾವಣೆಯಾಗುತ್ತ ಬಂದಿದೆ ಎಂದು ಅವರು ಹೇಳಿದರು. ಅದರಂತೆ ನಾನೂ ಆ ವಾದವನ್ನು ಒಪ್ಪುವಾಗ ಇತಿಹಾಸದ ಶ್ರೇಷ್ಠತೆಯನ್ನು ಎತ್ತಿ ಹಿಡಿಯುವುದರಲ್ಲಿ ದೇಶದ ಹಿತವನ್ನು ಬಲಿಗೊಡದೆ ಅದು ಉಳಿಯುವಂತೆ ಮಾಡುವುದು ಅವಶ್ಯಕ. ಹಾಗೆ ಮಾಡುವುದರಿಂದಲೇ ಈ ರಾಜ್ಯ ಉಳಿಯುವುದಕ್ಕೆ ಸಾಧ್ಯವಾಗುತ್ತದೆ. ಹಿಂದೆ ಇಂತಹ ಒಂದು ಸೂಚನೆ ಬಂದಾಗ ಅದು ಸಭೆಯಲ್ಲಿ ಚರ್ಚೆಯಾಗಿ ಮುಂದೆ ಹೋಗುತ್ತಿತ್ತು, ಸ್ವಾತಂತ್ರ್ಯ ಬಂದಾಗಿನಿಂದಲೂ ಇಂತಹ ಕರ್ನಾಟಕ ಎನ್ನುವ ನಿರ್ಣಯ ಬಂದರೂ ಅದು ಹಾಗೇ ಉಳಿಯುತ್ತಿತ್ತು. ಆದರೆ ಇಂದು ಎಲ್ಲರೂ ಒಪ್ಪಿ ಕರ್ನಾಟಕ ಎನ್ನುವ ಹೆಸರನ್ನು ತುಂಬಾ ಆತುರವಾಗಿ ತರುತ್ತಿದ್ದಾರೆ, ಸಂತೋಷ. ಇವೊತ್ತು ಕರ್ನಾಟಕ ಎನ್ನುವ ದೃಷ್ಟಿಯಿಂದ ಶಾಶ್ವತವಾದ ಎಲ್ಲಾ ಸಮಸ್ಯೆ ಗಳ ವಿಚಾರದಲ್ಲೂ ತೀರ್ಮಾನ ತೆಗೆದುಕೊಳ್ಳುವ ಧೈರ್ಯವನ್ನು ಬೆಳೆಸಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಯಾವುದೇ ಸಂದರ್ಭದಲ್ಲಾದರೂ ಕೇಂದ್ರದ ಒತ್ತಡದಿಂದಾಗಿ ಕರ್ನಾಟಕದ ಸಮಸ್ಯೆ ಗಳನ್ನು ಬಗೆಹರಿಸುವಾಗ ಬೆಳಗಾಂನ್ನು ಬಿಟ್ಟುಕೊಡಬಾರದು. ಹಾಗೆ ಮಾಡಿದರೆ ಇತಿಹಾಸಕಾರರು ನಿಮಗೆ ಶಾಪ ಹಾಕದೇ ಇರಲಾರರು ಕರ್ನಾಟಕ ರಾಜ್ಯ ಎಂದು ಹೆಸರಿಟ್ಟು ಇಲ್ಲಿ ಬೆಳಗಾಂ ಪ್ರದೇಶವನ್ನು ಮಾತ್ರ ಕೈ ಬಿಡುವಂತೆ ಮಾಡಬೇಡಿ ಎಂದು ಹೇಳುತ್ತೇನೆ. ಹಾಗೆ ಮಾಡಿದರೆ ಹಿಂದೆ ಆದ ಗತಿ ತಮಗೂ ಆದೀತು, ಅಂತಹ ತಪ್ಪುದಾರಿಗೆ ನಿಮ್ಮನ್ನು ಎಳೆಯುವುದು ತಪ್ಪು. ಯಾವುದೇ ಕಾರಣಕ್ಕಾಗಲೀ ಇದನ್ನು ಕೈಬಿಡುವುದು ಬೇಡ, ಈ ಸರಕಾರ ಕರ್ನಾಟಕ ಎಂದು ಹೆಸರು ಇಡಲು ಶ್ರಮಿಸಿದುದುಕ್ಕಾಗಿ ಅವರನ್ನು ಅಭಿನಂದಿಸುವುದೇನೋ ಸರಿ. ಆದರೆ ಕರ್ನಾಟಕದಲ್ಲಿ ಇನ್ನೂ ಅನೇಕ ಸಮಸ್ಯೆಗಳಿವೆ. ಕರ್ನಾಟಕದ ಹಿತಕ್ಕೆ ಧಕ್ಕೆ ಬಾರದ ರೀತಿಯಲ್ಲಿ ಕೆಲಸಮಾಡಬೇಕು. ನಮ್ಮ ಕರ್ನಾಟಕದ ಹಿನ್ನೆಲೆಯನ್ನು ನೋಡುವಾಗ ನಮ್ಮಲ್ಲಿ ಸತ್ಸಂಪ್ರದಾಯಗಳಿಗೆ ಏನೂ ಕೊರತೆ ಇಲ್ಲ.

ಏಕೆ ಎಂಬುದಕ್ಕೆ ಒಂದು ಕಾರಣವಿದೆ ಸ್ವಾತಂತ್ರ್ಯ ಬಂದಮೇಲೆ ನಮ್ಮ ರಾಜ್ಯದಲ್ಲಿ ಮುಖ್ಯ ಮಂತ್ರಿ ಪದವಿಯನ್ನು ಅನುಭವಿಸಿರತಕ್ಕವರು ಕೇವಲ ಎರಡು ಜನಾಂಗದವರು ಮಾತ್ರ. ಒಕ್ಕಲಿಗರ ನಂತರ ಲಿಂಗಾಯಿತರು, ಲಿಂಗಾಯಿತರ ನಂತರ ಒಕ್ಕಲಿಗರು, ಈ ರೀತಿ ಎರಡು ಜನಾಂಗದವರೇ ಈ ಸ್ಥಾನವನ್ನು ಪಡೆಯುತ್ತಿರುವುದರಿಂದ, ಬೇರೆ ಜನರ ಮನಸ್ಸಿನಲ್ಲಿ ಏನು ಭಾವನೆ ಬಂದಿದೆ ಎಂದರೆ, ಈ ಸ್ಥಾನ ಕೆಲವರಿಗೇ ಸೀಮಿತವಾಗಿದೆಯೋ ಏನೋ ಎಂದು. ಈ ಭಾವನೆ ಮೊದಲು ಹೋಗಬೇಕು. ಎಲ್ಲರೂ ಒಂದೇ, ಯಾರು ಬೇಕಾದರೂ ಈ ರಾಜ್ಯದಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಬರಬಹುದು, ಅವಕಾಶ ಸಿಕ್ಕಿದರೆ ಯಾವ ಒಂದು ಸ್ಥಾನಮಾನಕ್ಕಾದರೂ, ಯಾವ ಒಂದು ಮಟ್ಟಕ್ಕಾದರೂ ಬರಬಹುದು ಎಂಬ ಕಲ್ಪನೆ ಈ ರಾಜ್ಯದ ಎಲ್ಲ ವರ್ಗದ ಜನರ ಮನಸ್ಸಿನಲ್ಲಿಯೂ ಬರಬೇಕಾದರೆ, ಈ ಸ್ಥಾನವನ್ನು ಅನುಭವಿಸಿರ ತಕ್ಕಂಥವರು ಬೇರೆಯವರಿಗೆ ದಾರಿ ಮಾಡಿಕೊಡಬೇಕು. ನೀವೂ ಆ ಸ್ಥಾನಕ್ಕೆ ಬನ್ನಿ ಎಂದು ಹೇಳಬೇಕು. ಈ ರಾಜ್ಯದಲ್ಲಿ ಅಲ್ಪಸಂಖ್ಯಾತರು ಬೇಕಾದಷ್ಟು ಜನ ಇದ್ದಾರೆ. ಇದುವರೆಗೆ ಯಾವ ಒಂದು ಅಧಿಕಾರವೂ ಸಿಕ್ಕದಿರುವವರಿದ್ದಾರೆ. ಈ ರೀತಿ ಎಷ್ಟೋ ವರ್ಗದ ಜನರಿದ್ದಾರೆ. ಈ ವರ್ಗದ ಜನರಿಗೆ ಮುಖ್ಯಮಂತ್ರಿ ಸ್ಥಾನವನ್ನು ಮುಟ್ಟುವುದಕ್ಕಾಗುವುದಿಲ್ಲ. ಈ ಕಾರಣದಿಂದ ಈ ರಾಜ್ಯದ ಎಲ್ಲ ವರ್ಗದ ಜನರ ಮನಸ್ಸನ್ನು ಬದಲಾವಣೆ ಮಾಡಬೇಕಾಗಿದೆ. ಇದು ಎಲ್ಲರಿಗೂ ಸೇರಿರುವ ಕರ್ನಾಟಕ ರಾಜ್ಯ, ಎಲ್ಲರಿಗೂ ಸಮಪಾಲು ಸಿಗಬೇಕು ಎನ್ನುವ ರೀತಿಯಲ್ಲಿ ಈಗ ಅಧಿಕಾರದಲ್ಲಿರುವವರು ತಿಳಿದುಕೊಂಡು ಅದಕ್ಕೆ ಸಹಾಯಕವಾಗುವ ರೀತಿಯಲ್ಲಿ ದಾರಿ ಮಾಡಿಕೊಡಬೇಕು. ಈಗಿನ ಸರ್ಕಾರದವರು ನಾನು ಹೇಳಿದ ದಾರಿಯಲ್ಲಿ ಹೋಗು

(ಶ್ರೀ ಕಾಗೋಡು ತಿಮ್ಮಪ್ಪ)

ತ್ತಿದ್ದಾರೆ. ಅದು ಸ್ವಾಗತಾರ್ಹವಾದ ಸಂಗತಿ. ನಿಮ್ಮ ಒಂದು ನೇತೃತ್ವದಲ್ಲಿ ಹರಿಜನರು ಮುಖ್ಯಮಂತ್ರಿಯಾಗತಕ್ಕಂಥ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕು. ಅದೇ ರೀತಿ ಹಿಂದುಳಿದಿರತಕ್ಕ ಸಣ್ಣಪುಟ್ಟ ವರ್ಗದ ಜನರೇನಿದ್ದಾರೆ ಅವರಿಗೂ ಸಹ ತಾವು ಒಂದು ಕಾಲು ಕೊಟ್ಟರೆ ಅವರು ಎದ್ದು ನಿಂತುಕೊಳ್ಳುತ್ತಾರೆ. ಈಗಿರುವ ಅಸಮತೆ ಹೋಗಬೇಕು. ಜನರ ಮನಸ್ಸಿನಲ್ಲಿ ಏನು ಒಂದು ತಪ್ಪು ಭಾವನೆ ಇದೆ ಅದನ್ನು ಮೊದಲು ಹೋಗಲಾಡಿಸಬೇಕು. ಏಕೆಂದರೆ ಎಲ್ಲರೂ ಸೇರಿದರೆ ಮಾತ್ರ ಈ ಕರ್ನಾಟಕ ರಾಜ್ಯವನ್ನು ಕಟ್ಟುವುದಕ್ಕೆ ಸಾಧ್ಯ. ಸಮೃದ್ಧಿ ಕರ್ನಾಟಕವನ್ನು ಕಟ್ಟುವುದಕ್ಕೆ ಸಾಧ್ಯ. ಆದ್ದರಿಂದ ಈಗಿರುವ ವಾತಾವರಣವನ್ನು ಹೋಗಲಾಡಿಸಿ ಹೊಸ ವಾತಾವರಣವನ್ನು 'ನಿರ್ಮಾಣ ಮಾಡುವುದಕ್ಕೆ ತಾವು ಸಹಾಯಕರಾಗಬೇಕು ಎಂದು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಈಗ ನಾವು ಸಮೃದ್ಧ ಕರ್ನಾಟಕವನ್ನು ಕಟ್ಟಬೇಕಾದರೆ ಹೊರಗಿರುವ ಕನ್ನಡ ಭಾಗಗಳನ್ನು ಸಹ ನಾವು ಪಡೆಯಬೇಕಾಗುತ್ತದೆ. ಅದಕ್ಕೆ ಕೆಲವು ತೊಡಕುಗಳಿವೆ. ಆದರೂ ಸುಮ್ಮನೆ ನಾವು ಕುಳಿತುಕೊಳ್ಳದೆ ಅವುಗಳನ್ನು ಪಡೆಯುವುದಕ್ಕೆ ನಾವು ಪ್ರಯತ್ನ ಮಾಡುವುದರಲ್ಲಿ ಹಿಂದೆ ಬೀಳಬಾರದು. ನಮ್ಮ ರಾಜ್ಯಕ್ಕೆ ಸೇರಿದಂತೆ ಸುಮಾರು ೨೦೦ ಮೈಲಿಗಳವರೆಗೆ ಕರಾವಳಿ ಪ್ರದೇಶವಿದೆ. ಕರ್ನಾಟಕ ರಾಜ್ಯವನ್ನು ಸಮೃದ್ಧಿಯಾಗಿ ಕಟ್ಟಬೇಕಾದರೆ ಅದರ ಪ್ರಯೋಜನವನ್ನು ನಾವು ಪಡೆದುಕೊಳ್ಳಬೇಕಾಗಿದೆ. ಆ ರೀತಿ ಪಡೆದುಕೊಳ್ಳುವುದಕ್ಕೆ ಪ್ರಾಮಾಣಿಕವಾದಂಥ ಪ್ರಯತ್ನವನ್ನು ಸರ್ಕಾರದವರು ಮಾಡುತ್ತಾರೆಂದು ತಿಳಿದುಕೊಂಡು, ಈ ನಿರ್ಣಯವನ್ನು ತಂದಿರತಕ್ಕ ಮುಖ್ಯ ಮಂತ್ರಿಯವರನ್ನು ಹೃತ್ಪೂರ್ವಕವಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ.ವಿ. ವಾಯಿ (ಶಿರಹಟ್ಟಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಯವರು ಈ ರಾಜ್ಯದ ಹೆಸರನ್ನು 'ಕರ್ನಾಟಕ' ವೆಂಬುದಾಗಿ ಬದಲಾಯಿಸಬೇಕೆಂದು ಏನು ಒಂದು ನಿರ್ಣಯವನ್ನು ಈ ಸಭೆಯ ಮುಂದೆ ಮಂಡಿಸಿದ್ದಾರೆ ಅದಕ್ಕೆ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕನ್ನಡ ನಾಡಿನ ಕವಿಗಳು ಈ ಕನ್ನಡದ ನೆಲವನ್ನು, ಈ ಕನ್ನಡದ ನೀರನ್ನು ಈ ಕನ್ನಡದ ಹುಲ್ಲನ್ನು ಯಾವ ಪ್ರಕಾರವಾಗಿ ಪ್ರಶಂಸೆ ಮಾಡಿದ್ದಾರೆಂಬುದನ್ನು ನಾವು ನೋಡುತ್ತಿದ್ದೇವೆ. ಕನ್ನಡದ ಕವಿಗಳಾದ ಸಾಲಿರಾಮಚಂದ್ರರಾವ್ ಅವರು ಒಂದು ಕಡೆ ಈ ರೀತಿ ತಮ್ಮ ಕವನದಲ್ಲಿ ಹೇಳಿದ್ದಾರೆ :

"ಕನ್ನಡದ ಪುಲ್ಲೆನಗೆ ಪರಮಪಾವನಿ ತುಲಸಿ ;
ಕನ್ನಡದ ನೀರ್ವೆನಲೆನಗೆ ದೇವನದಿ ;
ಕನ್ನಡದ ಕಲ್ಲೆನಗೆ ಶಾಲಿಗ್ರಾಮ ಶಿಲೆ ಕನ್ನಡಂ ದೈವಮೈ : :
ಕನ್ನಡದ ಶಬ್ದವೇನಗೆ ಓಂಕಾರಮೀಯನ್ನ ;
ಕನ್ನಡ ನುಡಿಯೇ ಗಾಯತ್ರೀ ಅದ್ಭುತ ಮಂತ್ರ ಮಿನ್ನಾಪುದೈ ;
ಕನ್ನಡದ ಸೇವೆಯಿಂದಧಿಕಂ ಮೀಜಗದೊಳನಗೆ : :

ಐತಿಹಾಸಿಕವಾಗಿ ಹೆಸರು ಗಳಿಸಿದ್ದ ನಮ್ಮ ಕನ್ನಡ ನಾಡು ವಿಜಯನಗರದ ಅರಸರು ಆಳಿದ ನಂತರ ಚಿನ್ನವಿಚಿನ್ನವಾಗಿ ಹರಿದು ಹಂಚಿಹೋಯಿತು. ಮತ್ತು ಕನ್ನಡಿಗರು ಅನೇಕ ರಾಜರ ಆಡಳಿತ ತುಳಿತಕ್ಕೆ ಒಳಪಟ್ಟರು. ಪರಿಸ್ಥಿತಿ ಇದೇ ರೀತಿ ಮುಂದುವರೆಯುತ್ತಾ ಬಂತು. ಮಹಾತ್ಮಾಗಾಂಧಿಯವರು ದಕ್ಷಿಣ ಆಫ್ರಿಕಾ ದೇಶದಿಂದ ವಾಪಸ್ ಬಂದ ನಂತರ ಕಾಂಗ್ರೆಸ್ ಪಕ್ಷದ ಅಧಿಕಾರವನ್ನು ವಹಿಸಿಕೊಂಡು ಸತ್ಯಾಗ್ರಹದ ಮುಖಂಡತ್ವವನ್ನು ವಹಿಸಿಕೊಂಡ ಮೇಲೆ ರಾಜಕೀಯವಾಗಿ ಒಂದು ಹೊಸ ಸ್ವರೂಪ ಬಂತು. ಆಗ ಅವರು ಏನು ಹೇಳಿದರು ಅಂದರೆ, ನಾವು ಏನು ಒಂದು ತೀರ್ಮಾನ ತೆಗೆದುಕೊಂಡರೂ ಅದು ಆಯಾ ರಾಜ್ಯದ ಜನರಿಗೆ ಅವರವರ ಭಾಷೆಯಲ್ಲಿಯೇ ಮುಟ್ಟಿದರೆ ಆ ಜನರಿಗೆ ಉತ್ತಮವಾಗಿ ತಿಳಿಯುತ್ತದೆ, ಇಲ್ಲದಿದ್ದರೆ ನಮ್ಮ ಗುರಿ ಮುಟ್ಟಲು ಸಾಧ್ಯವಾಗುವುದಿಲ್ಲ ಎಂದು ಹೇಳಿ ಆ ದಿಶೆಯಲ್ಲಿ ಭಾಷಾವಾರು ಪ್ರಾಂತ್ಯಗಳು ರಚನೆಯಾಗಬೇಕೆಂದು ಅವರೇ ಹೇಳಿದರು ಅದರಂತೆ ಕೇರಳಾ, ಮದ್ರಾಸ್, ಪಶ್ಚಿಮ ಬಂಗಾಳಗಳು, ಆಂಧ್ರ ಕರ್ನಾಟಕ ಪ್ರಾಂತ್ಯಗಳು ರಚನೆಯಾದವು. ಈ ರೀತಿ ರಚನೆಯಾದ ಮೇಲೆ ಅನೇಕ ರಾಜ್ಯಗಳವರು ತಮ್ಮ ರಾಜ್ಯದ ಹೆಸರನ್ನು ಬದಲಾವಣೆ ಮಾಡಿಕೊಂಡರು. ಆದರೆ ನಮ್ಮ ರಾಜ್ಯದ ಹೆಸರನ್ನು ಬದಲಾವಣೆ ಮಾಡದೆ ಇದುವರೆಗೆ ತಳ್ಳಿಕೊಂಡು ಬರಲಾಯಿತು. ಈ ಒಂದು ಕೆಲಸ ಜಾಗ್ರತೆ ಆಗಬೇಕು, ಬೇರೆ ರಾಜ್ಯಗಳಲ್ಲಿ ಸೇರಿಹೋಗಿರುವ ಕನ್ನಡ ಪ್ರದೇಶಗಳನ್ನು ವಾಪಸ್ ಪಡೆಯಬೇಕು ಎಂಬುದಾಗಿ ಕವಿಗಳು ಮತ್ತು ಸಾಹಿತಿಗಳು ಹೇಳಿಕೊಂಡು ಬರುತ್ತಿದ್ದರು. ಅದರಂತೆ ಇಂದು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೆಸರಿನ ಬದಲಾವಣೆಯ ನಿರ್ಣಯವನ್ನು ಈ ಸದನದ ಮುಂದೆ ಮಂಡಿಸಿದ್ದಾರೆ. ಈ ನಿರ್ಣಯ

ವನ್ನು ಇದುವರೆಗೆ ಮಾತನಾಡಿದ ಯಾರೂ ವಿರೋಧ ಮಾಡಿಲ್ಲ. ಎಲ್ಲರೂ ಆತ್ಮೀಯವಾಗಿ ಹೊಗಳುತ್ತಿದ್ದಾರೆ. ನಮ್ಮ ಕನ್ನಡದ ಕವಿಗಳು ಸಹ ಈ ಕರ್ನಾಟಕದ ಬಗ್ಗೆ ಹೊಗಳುತ್ತಿದ್ದಾರೆ ಮತ್ತು ಹಾಡಿದ್ದಾರೆ:

''ಕರ್ನಾಟಕಾಂಬೆ ನೀ ಧನ್ಯೆ ಧನ್ಯೆ ;
ಹಳೇಬೀಡು, ಬಾದಾಮಿ, ಬನವಾಸಿ,
ಬಿದನೂರು, ಮಳಖೇಡ ಕಲ್ಯಾಣ,
ವಿಜಯನಗರದ ಕಲಿಸಾರ್ವಭೌಮ,
ನೃಪರಿಂದೆಸೆದು ಹೆಸರಾದ ಹಳೆಯ ರಾಜ್ಯಗಳಿಂದ ಮೆರೆದೆಯಮ್ಮಾ : :

ಎಂಬುದಾಗಿ ಕವಿಗಳು ಹಾಡಿದ್ದಾರೆ. ರಾಮಾಯಣ, ಕುಮಾರವ್ಯಾಸ ಭಾರತದಂತಹ ಉದ್ಧಾಮ ಗ್ರಂಥಗಳಲ್ಲಿಯೂ ಸಹ ಕನ್ನಡ ನುಡಿಯ ಬಗ್ಗೆ ಕರ್ನಾಟಕ ಎಂಬ ಹೆಸರಿನ ಬಗ್ಗೆ ಉಲ್ಲೇಖವಿದೆ. ಕುಮಾರ ವ್ಯಾಸ, ಪುರಂದರದಾಸ, ಕನಕದಾಸರ ದಾಸ ಸಾಹಿತ್ಯಗಳು ಕನ್ನಡ ನುಡಿಯನ್ನು ಬೆಳಸಿದವು. ಮತ್ತು ನಮ್ಮ ದೇಶದ ಕೀರ್ತಿಯನ್ನು ಎಲ್ಲ ಕಡೆಗಳಲ್ಲಿಯೂ ಹಬ್ಬಿಸಿದವು. ಬಸವಣ್ಣನವರು ತಮ್ಮ ವಚನವನ್ನು ಕನ್ನಡದಲ್ಲಿ ಬರೆದಿಟ್ಟಿದ್ದಾರೆ. ಮೊದಲು ಸಂಸ್ಕೃತ ಓದಿದರೆ ಮಾತ್ರ ಮುಕ್ತಿ ಸಿಗುತ್ತದೆ ಎಂದು ಹೇಳಲಾಗುತ್ತಿತ್ತು. ಆದರೆ ಬಸವಣ್ಣನವರು ಕನ್ನಡ ವಚನವನ್ನು ಓದುವುದರಿಂದಲೂ ಮುಕ್ತಿ ಹೊಂದಲು ಸಾಧ್ಯ ಎಂದು ತಿಳಿಸಿದರು. ೧೯೨೪ನೇ ಇಸವಿಯಲ್ಲಿ ಬೆಳಗಾಂನಲ್ಲಿ ಕಾಂಗ್ರೆಸ್ ಅಧಿವೇಶನ ನಡೆದಾಗ, ಅದರ ಅಧ್ಯಕ್ಷತೆ ವಹಿಸಿದ್ದ ಮಹಾತ್ಮಗಾಂಧಿಜೀಯವರು ಸಹ ತಮ್ಮ ಭಾಷಣದಲ್ಲಿ ಈ ರಾಜ್ಯದ ಹೆಸರನ್ನು ಪ್ರಸ್ತಾಪ ಮಾಡುತ್ತಾ 'ಕರ್ನಾಟಕ ರಾಜ್ಯ' ಎಂದು ಹೇಳಿದರು. ಅಲ್ಲಿಂದ ಮುಂದಕ್ಕೆ ಇದೇ ಹೆಸರನ್ನು ಎಲ್ಲರೂ ಬಳಸುವುದಕ್ಕೆ ಪ್ರಾರಂಭ ಮಾಡಿದರು. ೧೯೩೦ನೇ ಇಸವಿಯಲ್ಲಿ ಉಪ್ಪಿನ ಸತ್ಯಾಗ್ರಹ ನಡೆಯಿತು. ಅದರ ಮುಖಂಡತ್ವವನ್ನು ಮಹಾತ್ಮ ಗಾಂಧಿಜೀಯವರು ವಹಿಸಿದ್ದರು. ಬಾರ್ಡೋಲಿಯಲ್ಲಿ ನಡೆದ ಕರಬಂದಿ ಚಳವಳಿಯ ಮುಖಂಡತ್ವವನ್ನು ಸರ್‌ದಾರ್ ವಲ್ಲಭಾಯಿ ಪಟೇಲ್ ಅವರು ವಹಿಸಿದ್ದರು. ಈ ರೀತಿ ಇಡೀ ಹಿಂದೂಸ್ಥಾನದ ಎಲ್ಲ ಭಾಗಗಳಲ್ಲಿಯೂ ಈ ಒಂದು ಸತ್ಯಾಗ್ರಹ ನಡೆಯಿತು. ನಮ್ಮ ರಾಜ್ಯದ ಸಿರಸಿ ಸಿದ್ದಾಪುರದಲ್ಲಿ ಸಹ ಈ ಸತ್ಯಾಗ್ರಹ ನಡೆಯಿತು. ಈ ಒಂದು ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಕರ್ನಾಟಕ ಪ್ರಾಂತ್ಯದ ಎಲ್ಲ ಜನತೆಗೂ ಮಹಾತ್ಮಾಗಾಂಧಿಜೀಯವರು ಆಶೀರ್ವಾದ ಮಾಡಿದ್ದರು. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ನಮ್ಮ ರಾಜ್ಯದ ಹೆಸರನ್ನು ಕರ್ನಾಟಕ ಪ್ರಾಂತ್ಯ ಎಂದೇ ಕರೆಯಲಾಗುತ್ತಿತ್ತು. ಮತ್ತು ಅದೇ ಹೆಸರು ಮುಂದುವರೆದುಕೊಂಡು ಬಂತು. ನಮ್ಮ ಕರ್ನಾಟಕದಲ್ಲಿರುವಂತಹ ಅದ್ವಿತೀಯ ಶಿಲ್ಪಕಲೆ, ಸಾಹಿತ್ಯ ಭಾರತದ ಯಾವ ಭಾಗದಲ್ಲಿಯೂ ಇಲ್ಲ. ನಾನು ಇಡೀ ಸಮಗ್ರ ಭಾರತದಲ್ಲಿ ಪ್ರವಾಸ ಮಾಡಿ ಬಂದಿದ್ದೇನೆ. ಆದರೆ ಹಳೇಬೀಡು, ಬೇಲೂರು, ಹಂಪಿಯಲ್ಲಿರುವಂತಹ ಶಿಲ್ಪಕಲೆ ಬೇರೆ ಎಲ್ಲಿಯೂ ಇಲ್ಲ. ನಮ್ಮ ಕರ್ನಾಟಕದಲ್ಲಿ ಬೆಳೆದಂತಹ ಶ್ರೀಗಂಧದ ಸಿರಿ ಪ್ರಪಂಚದ ಎಲ್ಲ ಭಾಗಗಳಲ್ಲಿಯೂ ಹಬ್ಬಿದೆ. ಇನ್ನು ಮುಂದೆಯೂ ಸಹ ಈ ಒಂದು ಶ್ರೀಗಂಧದ ಸಿರಿ ಮತ್ತು ಕರ್ನಾಟಕದ ಕೀರ್ತಿ ಪ್ರಪಂಚದ ಎಲ್ಲ ಭಾಗಗಳಲ್ಲಿಯೂ ಹಬ್ಬುತ್ತಿರುತ್ತದೆಂದು ನಾನು ಹೇಳುತ್ತೇನೆ. ಈ ಕರ್ನಾಟಕ ಪ್ರಾಂತ್ಯ ಭಾಷಾವಾರು ಪ್ರಾಂತ್ಯದ ಆಧಾರದ ಮೇಲೆ ರಚನೆಯಾಗಿ ಇಲ್ಲಿಗೆ ಸುಮಾರು ೧೬ ವರ್ಷಗಳಾಯಿತು. ಆದರೆ ಕರ್ನಾಟಕ ಎಂಬ ಹೆಸರನ್ನು ಇಲ್ಲಿಯವರೆಗೆ ಇಟ್ಟಿರಲಿಲ್ಲ. ೧೬ ವರ್ಷಗಳಾದ ಮೇಲೆ ಕರ್ನಾಟಕ ಎಂದು ಹೆಸರಿಡಲಾಗುತ್ತಿದೆ. ಈ ಹೆಸರನ್ನು ಎಲ್ಲರೂ ಒಮ್ಮತದಿಂದ ಹಾಡಿ ಹರಸಿದ್ದಾರೆ. ನಮ್ಮ ರಾಜ್ಯದ ಹೆಸರಾಂತ ಸಾಹಿತಿಗಳಾದ ಆರ್.ಆರ್. ದಿವಾಕರ್, ಶ್ರೀ ಗೋಕಾಕ್, ಮುಗಳಿ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬಿ.ಎಂ. ಶ್ರೀಕಂಠಯ್ಯ, ತಿ. ನಂ. ಶ್ರೀಕಂಠಯ್ಯ, ಕೆ.ವಿ ಪುಟ್ಟಪ್ಪ, ಬೇಂದ್ರೆ, ಅ.ನ ಕೃಷ್ಣರಾಯರು, ಆಲೂರು ವೆಂಕಟರಾವ್, ಮುದವೀಡ ಕೃಷ್ಣರಾವ್, ಹುಯಿಲಗೋಳ, ಮುಂತಾದವರು ಸಹ ಈ ರಾಜ್ಯದ ಹೆಸರು 'ಕರ್ನಾಟಕ' ಎಂದು ಆಗಬೇಕೆಂದು ಹೇಳಿಕೊಂಡು ಬಂದಿದ್ದಾರೆ. ಇಂದು ಆ ಮಹೂರ್ತ ಸಮಯ ಬಂದಿದೆ. ಇನ್ನು ಮುಂದೆ ನಮ್ಮ ಕನ್ನಡ ನಾಡು ಸರ್ವಾಂಗ ಸುಂದರವಾಗಿ ಬೆಳೆಯಲಿ, ಕನ್ನಡ ಜನರ ಭಾವೈಕ್ಯತೆ ಬೆಳೆಯಲಿ, ಜಾತೀಯತೆ ಮಾಯವಾಗಲಿ, ಕನ್ನಡನಾಡು ಉತ್ತರೋತ್ತರವಾಗಿ ಬೆಳೆಯಲ್ಲಿ ಎಂದು ಹೇಳುತ್ತೇನೆ.

4-30 P.M.

ಇನ್ನೂ ಕರ್ನಾಟಕದ ಹೊರಗಡೆ ಉಳಿದಿರತಕ್ಕ ಸೊಲ್ಲಾಪುರ, ಅಕ್ಕಲಕೋಟೆ, ಕಾಸರಗೋಡು ಮುಂತಾದ ಕನ್ನಡ ಪ್ರದೇಶಗಳನ್ನು ನಮ್ಮ ಕರ್ನಾಟಕಕ್ಕೆ ಸೇರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಹಾಗೆಯೇ ಬೆಳಗಾವಿನ ಗಡಿಸಮಸ್ಯೆಯನ್ನು ಬಗೆಹರಿಸಿ ನಮ್ಮ ರಾಜ್ಯಕ್ಕೆ ಅನುಕೂಲವಾಗುವ ಹಾಗೆ ಮಾಡಬೇಕು. ನಮ್ಮ ರಾಜ್ಯಕ್ಕೆ ಸೇರಬೇಕಾದ ಎಲ್ಲಾ ಕನ್ನಡ ಪ್ರದೇಶಗಳನ್ನು ಸೇರಿಸಿಕೊಂಡು ಸಮಗ್ರ ಕರ್ನಾಟಕವನ್ನು ಮಾಡಬೇಕು. ನಮ್ಮ ರಾಜ್ಯದಲ್ಲಿ ಒಗ್ಗಟ್ಟನ್ನು ಸಾಧನೆ ಮಾಡಬೇಕು. ನಮ್ಮ ಕನ್ನಡ ನಡೆ ನುಡಿ ಅಭಿವೃದ್ಧಿಯನ್ನು ಹೊಂದಿ ನಮ್ಮ ಕರ್ನಾಟಕ ರಾಜ್ಯ ಬಾಳಿ ಬೆಳಗಲಿ ಎಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ಅಭಿನಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬೆಟ್ಟಸ್ವಾಮಿಗೌಡ (ಕುದೂರು) .—ಮಾನ್ಯ ಸಭಾಧ್ಯಕ್ಷರೇ, ಈ ಒಂದು ರಾಜ್ಯಕ್ಕೆ ಒಂದು ಒಳ್ಳೆಯ ಇತಿಹಾಸವನ್ನು ಸೂಚಿಸತಕ್ಕಂಥಾ ಹೆಸರನ್ನು ಎಂದರೆ ಕರ್ನಾಟಕ ಎನ್ನುವ ಹೆಸರನ್ನು ನಾಮಕರಣ ಮಾಡತಕ್ಕ ಈ ಶುಭ ಸಂಧರ್ಭದಲ್ಲಿ ನನಗೆ ಮಾತನಾಡುವುದಕ್ಕೆ ಅವಕಾಶ ಸಿಕ್ಕಿರತಕ್ಕದ್ದು ನನ್ನ ಸೌಭಾಗ್ಯ ಎಂದು ನಾನು ಭಾವನೆ ಮಾಡುತ್ತೇನೆ. ನಿಜವಾಗಿಯೂ ಕೂಡ ಈ ಒಂದು ರಾಜ್ಯಕ್ಕೆ ಬಹಳ ದಿವಸಗಳಿಂದ ಬಹಳ ಚರ್ಚಾಸ್ಪದವಾದ ಮತ್ತು ಬಹಳ ಜಟಿಲವಾಗಿರತಕ್ಕ ಸಮಸ್ಯೆಯಾದ ಈ ಒಂದು ರಾಜ್ಯಕ್ಕೆ ಕರ್ನಾಟಕ ಎಂಬ ನಾಮಕರಣವನ್ನು ಮಾಡತಕ್ಕಂಥಾ ಸಮಸ್ಯೆಯನ್ನು ಬಗೆಹರಿಸಿ ನಮ್ಮ ಸಭಾನಾಯಕರಾದ ಹಾಗೂ ಈ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ದೇವರಾಜ ಅರಸ್ ಅವರು ಈ ರಾಜ್ಯದ ಹೆಸರನ್ನು ಕರ್ನಾಟಕ ಎಂದು ಬದಲಾಯಿಸಲು ನಿರ್ಣಯವನ್ನು ಈ ಸಭೆಯ ಮುಂದೆ ತಂದಿದ್ದಾರೆ ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ ಈ ನಿರ್ಣಯದ ಬಗ್ಗೆ ಈಗಾಗಲೇ ನಮ್ಮ ಹಿರಿಯ ಮಾನ್ಯ ಸದಸ್ಯರು ಸಾಕಷ್ಟು ಮಾತನಾಡಿದ್ದಾರೆ. ಆದ್ದರಿಂದ ನಾನು ಈ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರನ್ನು ಇಡಬೇಕೆಂದು ಹಿರಿಯ ಸದಸ್ಯರಾಗಿದ್ದ ಶ್ರೀಮಾನ್ ಗೋಪಾಲಗೌಡರು ಜೀವಂತವಾಗಿರುವವರೆಗೂ ಹೋರಾಟ ಮಾಡಿದ್ದಾರೆ. ಈ ಒಂದು ಸಂದರ್ಭದಲ್ಲಿ ಬಹಳ ದುಃಖದಿಂದ ಅವರನ್ನು ನಾವು ನೆನೆದುಕೊಳ್ಳಬೇಕಾದಂತಹ ಸಂದರ್ಭ ಬಂದಿದೆ. ಈ ಕರ್ನಾಟಕ ಪ್ರಾಂತ ರಚನೆಗಾಗಿ ಶ್ರೀಮಾನ್ ಕೆ. ಹನುಮಂತಯ್ಯನವರು ಬಹಳವಾಗಿ ಶ್ರಮಿಸಿದ್ದಾರೆ. ಕರ್ನಾಟಕಕ್ಕಾಗಿ ಮತ್ತು ಹೆಸರನ್ನು ನಾಮಕರಣ ಮಾಡುವುದಕ್ಕಾಗಿ ಅನೇಕ ಜನ ಕವಿಗಳು ರಾಜಕಾರಣಿಗಳು ಶ್ರಮಿಸಿದ್ದಾರೆ ಆದ್ದರಿಂದ ಅವರೆಲ್ಲರನ್ನೂ ಕೂಡ ನಾವು ಈ ಸಂದರ್ಭದಲ್ಲಿ ನೆನೆಸಿಕೊಳ್ಳದಿದ್ದರೆ ತಪ್ಪಾಗುತ್ತದೆ ನಾನು ಈ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಈ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರನ್ನು ಇಟ್ಟಿದ್ದು ಇದು ಬಹಳ ಚರಿತ್ರಾರ್ಹ ದಿನ ಮತ್ತು ಬಹಳ ಮಹತ್ವಪೂರಿತವಾದ ದಿನ ಎಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ಈ ಹೆಸರಿನಿಂದ ನಮ್ಮ ರಾಜ್ಯಕ್ಕೆ ಏನಾದರೂ ದುರುಪಯೋಗವಾದರೆ ನಿಜವಾಗಿಯೂ ಕೂಡ ನಮ್ಮ ರಾಜ್ಯಕ್ಕೆ ನಾವು ಬಹಳ ಅನ್ಯಾಯವನ್ನು ಮಾಡಿದ ಹಾಗಾಗುತ್ತದೆಂದು ನಾನು ಭಾವನೆ ಮಾಡುತ್ತೇನೆ. ಈಗ ನಮ್ಮ ರಾಜ್ಯಕ್ಕೆ ಕರ್ನಾಟಕ ಎನ್ನುವ ಹೆಸರನ್ನು ಇಟ್ಟು ಸಂತೋಷಪಡುವುದರ ಜೊತೆಗೆ ನಮ್ಮ ರಾಜ್ಯದ ಆರ್ಥಿಕ ಸ್ಥಿತಿ ಮತ್ತು ಜನಸಾಮಾನ್ಯರ ಕಾರ್ಮಿಕರು ಹಾಗೂ ರೈತವರ್ಗದವರ ಕಷ್ಟಸುಖಗಳೇನಿವೆ, ಕುಂದುಕೊರತೆಗಳೇನಿವೆ, ಅವುಗಳ ಬಗ್ಗೆಯೂ ಚಿಂತನೆ ಮಾಡತಕ್ಕದ್ದು ಅವಶ್ಯಕ ಎಂದು ನಾನು ಹೇಳುತ್ತೇನೆ. ನಮ್ಮ ರಾಜ್ಯದ ಹಿಂದಿನ ಇತಿಹಾಸವನ್ನು ನೋಡುವುದಾದರೆ ಶ್ರೀಮಾನ್ ಮಹಾರಾಜರು ಮತ್ತು ದಿವಾನರಾಗಿದ್ದ ಸರ್ ಎಂ ವಿಶ್ವೇಶ್ವರಯ್ಯನವರು ಇದ್ದ ಕಾಲದಲ್ಲಿ ನಮ್ಮ ಮೈಸೂರು ರಾಜ್ಯ ಇಡೀ ಪ್ರಪಂಚಕ್ಕೆ ಮಾದರಿಯಾಗಿ ಮಾದರಿ ಮೈಸೂರು ಎಂಬ ಹೆಸರನ್ನು ಪಡೆದಿತ್ತು. ಆ ಒಂದು ಸಂದರ್ಭದಲ್ಲಿ ಜನೋಪಯುಕ್ತ ಕೆಲಸಕಾರ್ಯಗಳನ್ನು ಮತ್ತು ಕೈಗಾರಿಕೆಗಳ ಸ್ಥಾಪನೆಯನ್ನೂ ಸ್ವಲ್ಪ ಹೆಚ್ಚಿನ ಮಟ್ಟದಲ್ಲಿ ಆಗ ಮಾಡಿದರು ಆದ್ದರಿಂದ ಇಡೀ ಪ್ರಪಂಚದಲ್ಲೇ ನಮ್ಮ ಮೈಸೂರು ರಾಜ್ಯಕ್ಕೆ ಒಂದು ಅತ್ಯುನ್ನತವಾದ ಪ್ರಾಶಸ್ತ್ಯವನ್ನು ಇಡೀ ಪ್ರಪಂಚದ ಜನತೆ ಕೊಡಲೇಬೇಕಾದಂತಹ ಸಂದರ್ಭ ಒದಗಿತ್ತು. ಈ ದೃಷ್ಟಿಯಿಂದ ಇಂಥಾ ಒಂದು ಅವಕಾಶವನ್ನು ಈ ರಾಜ್ಯಕ್ಕೆ ಒದಗಿಸುವುದಕ್ಕೆ ನಾವು ಕಂಕಣಬದ್ಧರಾಗಿ ಪ್ರಯತ್ನ ಮಾಡಬೇಕು ಎಂದು ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮತ್ತು ಸರ್ಕಾರವನ್ನು ನಡೆಸತಕ್ಕವರಲ್ಲಿ ಬಿನ್ನವಿಸಿಕೊಳ್ಳುತ್ತೇನೆ.

ಈ ರಾಜ್ಯದಲ್ಲಿ ಈಗಾಗಲೇ ತಾಲ್ಲೂಕು ಮಟ್ಟದಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ತರುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಿದ್ದಾರೆ, ಇನ್ನು ಮುಂದೆ ಆದಷ್ಟು ಅತಿ ಶೀಘ್ರವಾಗಿ ಜಿಲ್ಲಾ ಮಟ್ಟದಲ್ಲಿಯೂ ಕೂಡ ಕನ್ನಡವನ್ನು ಆಡಳಿತ ಭಾಷೆಯಾಗಿ ತರುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು ಮತ್ತು ಅದರಂತೆ ಅತಿ ಜರೂರಾಗಿ ರಾಜ್ಯಮಟ್ಟದಲ್ಲಿಯೂ ಕೂಡ ಕನ್ನಡ ಭಾಷೆ ಆಡಳಿತ ಭಾಷೆಯಾಗಿ ಬರಬೇಕು ಎಂದು ನಾನು ಸರ್ಕಾರಕ್ಕೆ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಈ ಒಂದು ಸಂದರ್ಭದಲ್ಲಿ ನನ್ನ ಗೆಳೆಯರಾದ ಶ್ರೀ ಕಾಗೋಡು ತಿಮ್ಮಪ್ಪನವರು ಹೇಳಿದಂತೆ. ನಮ್ಮ ರಾಜ್ಯದ ಗಡಿ ಪ್ರದೇಶಕ್ಕೆ ಸಂಬಂಧಪಟ್ಟಹಾಗೆ ಇರತಕ್ಕ ನಿಪ್ಪಾಣಿ ಬೆಳಗಾಮ್ ಮುಂತಾದ ಕನ್ನಡ ಪ್ರದೇಶಗಳೆಲ್ಲವನ್ನೂ ನಮ್ಮ ರಾಜ್ಯಕ್ಕೆ ಸೇರಿಸಿಕೊಳ್ಳಲು ಸರ್ಕಾರದವರು ಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತೇನೆ. ಈ ವಿಚಾರದಲ್ಲಿ ಮಹಾರಾಷ್ಟ್ರದ ನಾಯಕರು ಕೇಂದ್ರದಲ್ಲಿ ಒಳ್ಳೆಯ ಪ್ರಭಾವವನ್ನು ಇಟ್ಟುಕೊಂಡಿರತಕ್ಕ ಹಾಗೆ ಕಾಣುತ್ತಿದೆ. ಆದ್ದರಿಂದ ಇಂಥಾ ಒಂದು ಸಂದರ್ಭದಲ್ಲಿ ನಮ್ಮ ಮುಖ್ಯ ಮಂತ್ರಿಗಳು ಯಾವ ಒಂದು ಪ್ರಭಾವಕ್ಕೂ ಒಳಗಾಗದೆ ಇಡೀ ನಮ್ಮ ಮೂರೂವರೆ ಕೋಟಿ ಕನ್ನಡಿಗರ ಏಳಿಗೆಗೋಸ್ಕರ ಶ್ರಮಿಸಬೇಕು. ಕೇಂದ್ರ ಸರ್ಕಾರದ ಯಾವ ಒಂದು ಪ್ರಭಾವಕ್ಕೂ ಒಳಗಾಗಬಾರದು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ ಇವೊತ್ತು 'ಕರ್ನಾಟಕಕ್ಕಾಗಿ ಹೆಚ್ಚಿನ ಸೇವೆಯನ್ನು ಮಾಡಿರತಕ್ಕ ಶ್ರೀ ಕೆ. ಹನುಮಂತಯ್ಯನವರು ಕೇಂದ್ರದಲ್ಲಿ ಮಂತ್ರಿ ಸ್ಥಾನವನ್ನು ಕಳೆದುಕೊಂಡಿರತಕ್ಕದ್ದು ನಿಜವಾಗಿಯೂ ಕೂಡ ಬಹಳ ದುಃಖಕರವಾದ ವಿಚಾರ. ಶ್ರೀಮಾನ್ ಹನುಮಂತಯ್ಯನವರು ಈ ವಿಧಾನಸೌಧವನ್ನು

ಕಟ್ಟುವುದಕ್ಕೆ ಪ್ರಯತ್ನಮಾಡಿ ಈ ಒಂದು ಭವ್ಯವಾಗಿರತಕ್ಕ ವಿಧಾನಸೌಧವನ್ನು ನಿರ್ಮಾಣ ಮಾಡಿದರು. ಅವರು ಈ ಒಂದು ಮಹತ್ವಪೂರ್ಣವಾದ ಕಾರ್ಯವನ್ನು ನಿರ್ವಹಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಮತ್ತು ಕರ್ನಾಟಕ ರಚನೆಗಾಗಿ ಅವರು ಬಹಳವಾಗಿ ಶ್ರಮಿಸಿದ್ದಾರೆ. ಒಳ್ಳೆಯ ದಕ್ಷ ಆಡಳಿತಗಾರರು ಎನ್ನುವ ಒಂದು ಹೆಸರನ್ನು ಅವರು ಪಡೆದಿದ್ದಾರೆ. ಇಂಥಾ ಒಬ್ಬ ವ್ಯಕ್ತಿಯನ್ನು ಇವೊತ್ತು ಕೇಂದ್ರದಲ್ಲಿ ಪದಚ್ಯುತಿ ಮಾಡಿರತಕ್ಕದ್ದು ಸರಿಯಲ್ಲ. ಈ ವಿಚಾರದಲ್ಲಿ ನಾನು ನನ್ನ ಅಸಮಾಧಾನವನ್ನು ವ್ಯಕ್ತಪಡಿಸುತ್ತೇನೆ.

ರಾಜ್ಯದಲ್ಲಿ ಹಿಂದಿನಿಂದ ನಡೆದು ಬಂದಂತಹ ಲಂಚಗುಳಿತನವನ್ನು ನಿರ್ಮೂಲ ಮಾಡಬೇಕಾಗಿದೆ. ಇವತ್ತು ಈ ಲೋಪದೋಷಗಳನ್ನು ತಪ್ಪಿಸಿ ಜನಸಮಾನ್ಯರಿಗೆ ನ್ಯಾಯವಾದ ಬೇಡಿಕೆಗಳು ಸಿಗುವ ಹಾಗೆ ವ್ಯವಸ್ಥೆ ಮಾಡಬೇಕು. ಅದೇ ರೀತಿ ಇವತ್ತು ನಿರುದ್ಯೋಗ ಸಮಸ್ಯೆ ಒಂದು ದೊಡ್ಡ ಸಮಸ್ಯೆಯಾಗಿದೆ. ಅದರ ಕಡೆಯೂ ಸರ್ಕಾರದವರು ಹೆಚ್ಚಿನ ಗಮನವನ್ನು ಕೊಡಬೇಕು. ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಹಿಂದೆ ಇದ್ದಂತಹ ಮಂತ್ರಿ ಮಂಡಲ ಮತ್ತು ಅಧಿಕಾರಿ ವರ್ಗದವರು ಸಾಮಾನ್ಯ ಒಬ್ಬ ರೈತನು ತನ್ನ ಅಹವಾಲುಗಳನ್ನು ಹೇಳಿಕೊಂಡರೆ ಅದನ್ನು ತಕ್ಷಣ ಈಡೇರಿಸುತ್ತಿರಲಿಲ್ಲ ಒಬ್ಬ ರೈತನು ಅಧಿಕಾರಿಯ ಹತ್ತಿರ ಅಥವಾ ಮಂತ್ರಿಯ ಹತ್ತಿರ ಬಂದು ತಮ್ಮ ಅಹವಾಲುಗಳನ್ನು ಹೇಳಿಕೊಂಡರೆ ಅದನ್ನು ಆದಷ್ಟು ಜಾಗ್ರತೆ ಮಾಡುತ್ತೇವೆ ಅಥವಾ ಮಾಡುವುದಿಲ್ಲವೆನ್ನುವುದರ ಬಗ್ಗೆ ಒಂದು ತೀರ್ಮಾನವನ್ನು ಕೂಡಲೇ ಕೊಡಬೇಕು. ಆಗ ಮಾತ್ರ ಸಾಮಾನ್ಯ ರೈತನಿಗೆ ತಾನು ಬಂದ ಕೆಲಸವು ಪೂರೈಸಿದಂತೆ ಆಗಿ ಅನುಕೂಲವಾಗುತ್ತದೆ ಮತ್ತು ಬರತಕ್ಕ ತೊಂದರೆಗಳೂ ತಪ್ಪುತ್ತವೆ. ಆದ್ದರಿಂದ ಹೊಸ ಸರ್ಕಾರದವರು ಅಂತಹ ಒಂದು ತೀರ್ಮಾನವನ್ನು ತೆಗೆದುಕೊಂಡು ಒಂದು ಹೊಸ ಸಂಪ್ರದಾಯವನ್ನು ಬೆಳಸಬೇಕು. ಸಾಮಾನ್ಯವಾಗಿ ಒಬ್ಬ ರೈತನು ಬೆಂಗಳೂರಿಗೆ ಬಂದು ಒಂದು ದಿವಸ ಇರಬೇಕಾದರೆ ಅವನಿಗೆ ಎಷ್ಟು ತೊಂದರೆಯಾಗುತ್ತದೆ ಮತ್ತು ಖರ್ಚಾಗುತ್ತದೆ ಎಂಬುದನ್ನು ಅಧಿಕಾರಿಗಳು ಮತ್ತು ಮಂತ್ರಿಗಳು ಗಮನದಲ್ಲಿಟ್ಟುಕೊಳ್ಳಬೇಕು. ಕೊನೆಯದಾಗಿ ಈ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದ ನಿರ್ಣಯವನ್ನು ಸ್ವಾಗತಿಸಿ, ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SMT. ADDY SALDANHA (Mangalore I) —Madam Speaker—, It gives me great joy to hail Karnataka—JAYA KARNATAKA. The efforts of so many of our leaders and elders have culminated in the union of the Kannada people, formerly divided, by force of history, into Mysore Karnataka, Bombay Karnataka, Hyderabad Karnataka, Madras Karnataka and Kerala Karnataka. This happy union of our territories needed a name, a name which signified the spirit of tha union and the brotherhood of the people united under one flag. We have all come together in a new State which is our own and which is the instrument of our progress and prosperity. It is most highly appropriate that the adoption of the new name-the christening of the new State–, should be under the auspices of the lady Speaker a Mysore 'MATHA', daughter of 'BHARAT MATHA'. These are symbols of rich significance. On this happy occasion, let us recall the services of Rajahs and Maharajahs, Dewans and Chief Ministers, our Administrators and Engineers, our men of light and learning, our sculptors, our poets, our signers, our sages and seers who have created Karnataka over the ages and more significantly, during the last several decades.

Our new State was born in 1956. Up till now, it has been looking for a sweet new name and has found it in the 'Karnataka' of ancient literature and of Mahabharatha.

I conclude by saying : 'JAI[illegible]TO KARNATAKA'.

(Mr. Deputy Speaker in the Chair)

SRI B.B. SAYANAK (Belgaum).—Mr. Deputy Speaker-, Sir, It is a great pleasure to me to welcome the Motion moved by the Hon. Chief Minister to rename the Mysore State as 'Karnataka'. We, the Maharashtrians are not mean minded. Hon. Chief Minist r of Mysore State has respected the wishes of people of the State. My friends who are demanding Sholapur Poona and o'her areas—I have no objection ; you can demand even Poona and Bombay-, but accept the principles for the solution of Maharastra Mysore border dispute. The principles are language of the people relative majority, contiguity and the wishes of the people. We the people of the border area have been fighting for more than sixteen years for Marathi border areas to be merged in Maharastra and we have won the elections successfully four times. What more do you want ? Not only that. Belgaum is the crux of the problem. In the Municipality of Belgaum out of 35 Municipal Councillors 35 Municipal Counci lors are Maharashtrians. The pr sident is a Marathi man. What more do you want ? That is why I have been saying before this House that Belgaum belongs to Maharashtra and it shou'd go to to Maharashtra. This is my contention and I request the House that you must accept the same principles to solve the Mysore-Maharashtra border dispute, Mysore-Kerala border dispute and Mysore Andhra border dispute Then only justice will go to the persons who are figh ing for it. Otherwise, there will be no justice. What is the use of the Maharashtrians here ? To these persons who do not know Kannada language, you are sending circulars in Kannada. Why are you keeping th m in Mysore State ? Why should Kannada people remani g Maharashtra and other areas? The Maharashtra Government is willing to give 264 villages on the basis of language, contiguity and simple maj rity and wishes of the people. Why the Mysore Government has not got a broad mind ? They say we must accept the Mahajan's Award, Sholapur must come to us, Kasargod must come to us. When you say like this you must accept the same principle in respect of other areas also. Whatever we want we must get, and whatever the otherswant, you must let them go.

Another thing. Now there is Congress Government-Mrs. Indira Gandhi's Government-at the Centre There is Congress Government in Mysore State and Maharashtra also. Why is Mr. Devaraj Urs not taking bold steps to solve the Mysore-Maharashtra border problem, which is pending for more then sixteen years ? So, I request Mr. Devaraj Urs to solve the border dispute during his regime.

Lastly, I should say: I wish all progress and prosperity to Karnataka' and I should say that good and efficient administration should be there to guide the people of Karnataka.
Thank you

‡ SRI C M. ARUMUGAM (KGF).—Sir, at the outset, I would submit that this Resolution-I do not know who drafted this,- is not properly drafted. The Resolution says : 'that the House Recommends that

steps may be taken by the State Government for securing necessary amendments to the Constitution." Sir, it is very wrong. When this House passes a resolution, it becomes more or less law and the Government should take proper action to implement it. It is not necessary to amend the Constitution to change the name of the State. Under articles 3 and 4 of the Constitution - Article 3 says that Parliament has power to change the name of, boundary etc. It can say include Sholapur, include Kasargod. But there is no need for such a amendment for the mere change in the name of a territory. Article 4(2) says:

> "No such law as aforesaid shall be deemed to be an amendment of the Constitution for the purpose of article 368."

So, for mere change of name, there is no need to amend the Constitution. The Resolution says that the Constitution should be amended. There are so many law officers in Government: I do not know why they did not take proper care about this.

SRI M. MALLIKARJUNASWAMY.—We have to introduce the change in the Schedule.

SRI C. M. ARUMUGAM.—Amendment of the Constitution means amendment of article 368.

With this observation, I support the resolution. Once it so happened in 1957 such a resolution was brought At that time I opposed it, and opposed it on several grounds Under that circumstnce it looked that Karnataka meant, as I said last time, only one particular community. That was the reason. But now it has become possible for a man of the minority community to become the Chief Minister of the State. It was not possible at that time. Not at all. From 1956 to 1971 it was not possible. But now the times have changed. A minority man become a Chif Minister. We can see that. But there is a lot of other changes also. You might have seen in today's press reports that RAJAJI says that there is no KARNTAKA any where in Maha Bharatha. I should say that there there was such a reference in all humility that word KARNATAKA should have been there. People of the State wishes that the State should be called Karnataka, because you find names like ADI KARNATKA; REFERENCE TO PEOPLE OF Karnataka They must have lived here even before the people of Karnataka-you come across names like ADI DRAVIDA meaning people of tamil origin, ADI ANDHRA meaning people of Telugu origin so far as language is concerned. Therefore Sir, after ten long years, I have come in this House speaking before you Mr. President supporting the name of KARNATAKA for Mysore State. I ess very much enamoured about the name MYSORE because, you have Mysore Soap, Mysore Silk, Mysore Sandal. But that was confined to a very small area. If the pepole of the State went it I have no objec-

(SRI C. M. ARUMUGAM)

tion as I have said. But I compliment the present Government for fulfilling the long cherished desire of the people of Mysore to call themselves as KARNATAKA.

Sir, as I said, language alone is not the basis. Take for instance; in UK, 4½ crores of people speak the same language namely English, 22 crores of people in USA speak English. But they do not unite. In UP 10 lakhs speak HINDI, in Madhaya Pradesh and Hariyana they speak Hindi. But still they do not form one single State. How is it, from Belgaum to Kollegal and from Kolar to North Kanara they have united into one single Karnataka? It is not merely language, but culture, civilisation, kith and kin one-ness. A man from Bijapur, if he comes to Tumkur, he feels that he is in his own district

SRI S. BANGARAPPA.—What about Mr. Sayanak ?

SRI C. M. ARUMUGAM.—So there is a sort of one-ness. There is a feeling that 292 lakhs of people to come together and unit together to form one single Karnataka State. Therefore the will of the people shall prevail.

Such a resolution like this was brought before the Bombay Legislative Assembly on 4-4-1953. It was said at that time that the Kannada speaking areas of the then Madras State, Bombay State and Hyderabad State should form a State called Karnataka. Mr. V. G. Jog, a Member from North-Dharwar moved this resolution in the Bombay Legislative Assembly. They said that if Mysore also is included in this, it would become a bigger State. Fortunately today Sir, we have a very big State called KARNATAKA. As I said, days have changed. Today, We are in a democratic set-up. Dr. Ambedkar in the Bombay Assebly opposed the resolution on the simple ground that if Karnataka is formed, one particular community will form a majority and that community will rule the State for ever. But the people of the state have falsified his prophesy by electing aminority community person Mr. Devaraj Urs as the Chief Minister. Today, as I see, every body must accept that the majority communities in Mysore State, are the Vokkaligas and Lingayats. It is my appeal to the Hon'ble Chief Minister that he must treat the people of these two communities as his two eyes, because they must have confidence in his leadership and the S. C and the backward communities as his heart! And that is how we can change, rectify the entire set up, reorganise the entire group and create confidence in the mojor communities of the State. This is the simple reason why I opposed it at that time Mr. Deen Dayal, Mr. Ramappa and as a matter of fact, our present Chif Minister also supported that idea that by forming Karnataka a single community becomes the majority in the State. But now they have realised, in a democratic set up, anybody can become

the Chif Minister. Tomorrow, somebody else may become the Chief Minister. There must be a sort of give and take policy between communities. People must develop sort of receptive mind. The Leader of the House need not be a majority commuuity man. I am happy today at what has happened in our State and that is the reason why I am supporting this resolution. At the same time, I appeal to the Chif Minister that he should change his attitude to certain areas like Bijapur, Belgaum, Dharwar. North Kanara. They were demanding a separate State because they neglected by the old Bombay Government. There were no proper roads, no proper educational instituions in Belgaum or Bijapur. Today after integratation, Belgaum nas got all amenities it has got university colleges, aluminium industry has come up. Even Karwar has nothing but forests Karwar is important.

5-00 P.M.

Now Karwar has also improved. This is because people in those places have come under their own Government. They are not in Bombay State now. Bombay State consisted of parts of Gujarath, Maharashtra and Karnataka. But now Gujarath has been separated from Bombay State. Gujarath State is formed. Maharashtrians have formed their own State and have named it Maharashtra. So there is nothing wrong in calling our State as 'Karnataka' The naming has been very wisely done by the Leader of our House and Chief Minister Sri Devaraj Urs. I compliment him and I support the Resolution. I appeal to him in this connection that this oneness that is going to be created by the change of name of the State should go deep in the village level. This State should become a model in everything and should work in the best interests of the people of Karnataka.

With these few words, I compliment the Chief Minister again and conclude.

MR. DEPUTY SPEAKER.—Sri Armugam, I retorted in a mild way that amendment to the Constitution is necessary for altering the name of the State. For the hon. members' information, I shall read Art. 3 (e) of the Constitution, which reads: "Parliament

may by law...................

* * * * * * *

(e) alter the name of any State :"

Of course, Article 4 is consequential. I am passing on a copy of the 'Constitution' to the hon member.

SRI C. M. ARUMUGAM.—Since you have referred to the Constitution, don't think I do not know the provisions of the Constitution. Kindly read Art. 2 which reads as follows :

> "Parliament may by law admit into the Union, or establish, new States on such terms and conditions as it thinks fit."

MR. DEPUTY SPEAKER.— There is a special procedure. The member cannot impose everything.

SRI C. M. ARUMUGAM.—In this matter there is no discretion for the Deputy Speaker or Speaker. The law should be read as it is. Article 4 states :

> "(1) Any law referred to in article 2 or article 3 shall contain such provisions for the amendment of the First Schedule and the Fourth Schedule as may be necessary to give effect to the provisions of the law and may also contain such supplemental, incidental and consequential provisions (including provisions as to representation in Parliament and in the Legislature or Legislatures of the State or States affected by such law) as Parliament may deem necessary"

Clause (2) says :

> "No such law as aforesaid shall be deemed to be an amendment of this Constitution for the purposes of article 368."

So, this is not an amendment of the Constitution. Parliament has power to enact a law and they can change the name of the State. That does not mean it is an amendment of the Constitution. Please refer this point to the Advocate-General and give a ruling tomorrow.

MR. DEPUTY SPEAKER.—It is not such a complicated matter

SRI C. M. ARUMUGAM.—Or please refer to the Law Department.

MR. DEPUTY SPEAKER.—I know it myself.

SRI S. BANGARAPPA.—Under the Constitution no matter can be referred to the Law Department. It is only the Advocate-General who has to be consulted.

SRI C. M. ARUMUGAM —For my satisfaction, please refer the matter to the Advocate-General to know the Constitutional position.

MR. DEPUTY SPEAKER.—I will consider over it.

‡SRI D. B KALMANKAR —(Afzalpur). Mr. Deputy Speaker, While wholeheartedly supporting this Resolution which is before this august House, I want to say a few words.

As you know very well, *de facto* Karnataka came into existence when the States Reorganisation Act was brought into force and the New State of Mysore was formed. Then alone Karnataka was formed with the Karnataka areas which were in different States such areas where Kannada-speaking people were scattered, were brought together and a new State was born. That is why I say *de facto* Karnataka came into existence in the year 1956 itself It is the naming ceremony that we are doing: that was delayed. As a matter of fact, Karnataka was formed then only. The process of emotional integration started then only. Today we are going with *de jure* recognition to that concept of Karnataka. So, now it is no good saying anything against or in favour of Karnataka. Karnataka is an accomplished fact. Now we are only giving *de jure* recognition.

No doubt, we know that Mysore State has its own history and traditions. But the name 'Karnataka' is more comprehensive and more attractive. By naming our State as Karnataka, emotional integration will take place. People coming from Hyderabad Karnataka, Bombay Karnataka and such other areas are very proud that today this naming ceremony is taking place because they have contributed very much for the development of this Karnataka. If you take literature and history the people who have worked for Karnatka hail from different areas comprising this new State of Karnataka. So it is our duty to say that we are proud of them and their sacrifice and their martyrdom for whatever they have done for the creation of Karnataka. As the speaker preceding me stated, we cannot forget the name of Sri Gopala Gowda, If he were alive today, he would have been very happy to see Mysore State being named Karnataka.

Sri Deve Gowda took objection to some word being stated about our Chief Minister. But one thing remains: what was not possible to the ardent protagonists of Karnataka in the past, has been realised by Sri Devaraj Urs. In deference to the wishes of the people of Karnataka, he bowed to fulfil their aspiration whatever his personal view might have been. It shows his democratic attitude for the solution of problems. He might have had his own opposition in regard to renaming of the State but in deference to the wishes of the people, he bowed to the demand for naming this State as Karnataka. So, that way I think the historic task was to be done by Sri Devaraj Urs; which could not be done by the earlier Chief Ministers however ardent a champion of Karnataka they may be.

From that point of view, today I say that it is a thing of pride for us. Today we are happy that we have been able to participate in the naming ceremony of the sixteen year old child of Karnataka.

With the emergency of Karnataka on the map of our Country, what I feel is that Karnataka should create new traditions. Karnataka should be the first State in the whole of the Country to

(SRI D. B. KALAMANKAR)

create new traditions of democracy, secularism, nationalism and socialism. These are the four pillars of our State. I hope that this new Government under the dynamic leadership of the Chief Minister will emerge as a true socialist Government and that it will, as Sri Thimmappa said, give new directions to the events that are to follow. Today, our people are in poverty; they are facing scarcity; they are facing drought and untold misery. Now it is up him to see that he gives justice to all parts of this vast area of Karnataka inhabited by three crores of people. They are expecting justice from him and he should not lag behind in that respect. Today we from Hyderabad Karnatak Area feel that this Government has to do many things. Today there must not be any misgiving in any part of this vast area that it is neglected. I am speaking on behalf of the Hyderabad Karnatak Area and the Bombay Karnatak Area which are today unfortunately stricken with famine and drought conditions. The first thing that this Government must do is to go to their rescue as early as possible and show that the history of Karnatak has started with doing justice.

Secondly, we are really fortunate that there is a new climate prevailing in this State The Hon. Member Sri Arumugham said that Dr. Ambedkar opposed the creation of Karnataka because a particular community will have dominance but he himself admitted that it has been falsified. What we are finding is that a climate of democracy has come to stay in the State as it has come to stay in our Country. Thanks to our leader that climate has come. Whatever may be his community or caste or creed, he is representing the real hopes and aspirations of the people. When we are thinking of demorcratic and socialisie State, naturally the only yardstick that the people will have is whether the people who represent them are democratic and socialistic and whether they are in a position to deliver the goods for them. It is only the politicians that have created these narrow conditions and narrow mindedness. I think we have started on a new state and let this Karnataka which was a land of promise and which is now recognised *de jure* show by its future course of action that it stands for the down-trodden, for the poor and for the neglected. With these words I thank the Chair.

‡ ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮುಖ್ಯ ಸಚಿವರು ಏನೊಂದು ನಿರ್ಣಯವನ್ನು ತಂದಿದ್ದಾರೆ, ನಮ್ಮ ರಾಜ್ಯದ ಹೆಸರನ್ನು ಬದಲಾವಣೆ ಮಾಡಬೇಕು, ಅದಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಬೇಕು ಎಂಬ ಐತಿಹಾಸಿಕ ನಿರ್ಣಯವನ್ನೇನು ನಮ್ಮ ಮುಂದಿಟ್ಟಿದ್ದಾರೆ ಅದನ್ನು ನಾನು ಹೃತ್ಪೂರ್ವಕವಾಗಿ ಬೆಂಬಲಿಸಿ, ಎರಡು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ದಿನ ನಾನು ಕಮ್ಯೂನಿಸ್ಟ್ ಪಕ್ಷವನ್ನು ಪ್ರತಿನಿಧಿಸಿದರೂ ಸಹ ನನಗೆ ಅಪಾರವಾದ ಸಂತೋಷವಾಗಿದೆ. ಈ ರೀತಿ ನಾಮಕರಣ ಮಾಡಿರುವುದು ಬಹಳ ಆನಂದವನ್ನುಂಟುಮಾಡಿದೆ. ಏಕೆಂದರೆ ಮುಖ್ಯ ಮಂತ್ರಿಗಳಾದ ಶ್ರೀಮಾನ್ ದೇವರಾಜ ಅರಸರು ನಿರ್ಣಯವನ್ನು ಮಂಡಿಸಿದ್ದಾರೆ. ಆದುದರಿಂದ ಅಪಾರವಾದ ಸಂತೋಷವಾಗಿದೆ. ಇದನ್ನು ನನ್ನ ಮಿತ್ರರೂ ಹೇಳಿದ್ದಾರೆ. ಆದುದರಿಂದ

ಮತ್ತೆ ನಾನು ಅದನ್ನು ಹೇಳಲು ಇಷ್ಟಪಡುವುದಿಲ್ಲ. ಹಿಂದೆ ವಿರೋಧವಾಗಿದ್ದೆವು, ಈಗ ಮನಸ್ಸು ಮಾಡಿದ್ದೇವೆ, ಒಪ್ಪಿದ್ದೇವೆ ಎಂದು ಮುಖ್ಯ ಮಂತ್ರಿ ಅವರೇ ಹೇಳಿದ್ದಾರೆ. ಶ್ರೀ ವಾಟಾಳ್ ನಾಗರಾಜ್ ರವರು ಮಾತನಾಡುತ್ತಾ ಮುಖ್ಯ ಮಂತ್ರಿಯವರು ಜನಾಭಿಪ್ರಾಯಕ್ಕೆ ಮನ್ನಣೆ ಕೊಟ್ಟಿದ್ದಾರೆ, ಆದುದರಿಂದ ಬಹಳ ಸಂತೋಷವಾಗುತ್ತಿದೆ ಎಂದು ಹೇಳಿದ್ದಾರೆ. ನಾನು ಕೂಡ ಅವರ ಜೊತೆಯಲ್ಲಿ ಸೇರಿಕೊಂಡು ಅದನ್ನು ಹೇಳಬೇಕಾಗಿದೆ.

ಇನ್ನೊಂದು ವಿಷಯ. ಅವರು ಅರಸು ಮನೆತನದಿಂದ ಬಂದಿದ್ದರೂ ಕೂಡ ಮೈಸೂರು ಎಂಬ ಹೆಸರು ಬೇಡ, ಕರ್ನಾಟಕ ಎಂದಿರಲಿ ಎಂದು ಹೇಳಿರುವುದರಿಂದ ಸಂತೋಷವಾಗಿದೆ ಎಂದೂ ಹೇಳಿದ್ದಾರೆ. ವ್ಯಾಖ್ಯಾನದಲ್ಲಿ ನನಗೂ ಅವರಿಗೂ ಭಿನ್ನಾಭಿಪ್ರಾಯವಿದೆ. ಅವರು ಅರಸು ಮನೆತನದಿಂದ ಬಂದಿದ್ದರೂ ಸಹ ಅರಸರ ಗದ್ದುಗೆಗೆ ಅವರು ವಿರೋಧವಾಗಿದ್ದರು. ಪಾಳೇಯಗಾರಿ ಪರಂಪರೆಗೆ ಅವರು ವಿರೋಧಿಗಳಾಗಿದ್ದರು, ಸಾಮ್ರಾಜ್ಯಶಾಹಿ ಪರವಾಗಿ ಕೆಲವರ ಅಭಿಪ್ರಾಯವಿದ್ದರೂ, ಪಾಳೆಗಾರಿಕೆ ಉಳಿಯಬೇಕು ಎಂಬ ಅಭಿಪ್ರಾಯ ಕೆಲವರಿಗಿದ್ದರೂ ಅದಕ್ಕೆ ಬಗ್ಗದೆ ಅವರು ವಿರೋಧವಾಗೇ ಇದ್ದುದರಿಂದ ಈ ನಿರ್ಣಯವನ್ನು ಮಂಡಿಸಿದರು, ಹಾಗಿಲ್ಲದಿದ್ದರೆ ಅವರಿಗೆ ಈ ಕೆಲಸ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಆ ದೃಷ್ಟಿಯಿಂದ ಮುಖ್ಯ ಮಂತ್ರಿಗಳನ್ನು ಅಭಿನಂದಿಸಬೇಕು. ಹಿಂಗೆ ಮಾಡುವುದಕ್ಕಾಗುತ್ತಿರಲಿಲ್ಲ. ಆಗ ತೊಂದರೆಯಾಗುತ್ತಿತ್ತು ಎಂದು ಯಹ್ಯರವರು ಹೇಳಿದರು. ಅದು ಸರಿಯಲ್ಲವೆಂದು ಕಾಣುವುದು. ಹಿಂದೆಯೇ ಈ ಕೆಲಸ ಮಾಡಬಹುದಾಗಿತ್ತು. ನನಗೆ ತಿಳಿದ ಹಾಗೆ ಶ್ರೀ ನಿಜಲಿಂಗಪ್ಪನವರು ಕರ್ನಾಟಕದ ಪ್ರಪಿತಾಮಹರು ಎಂದು ಹೆಸರು ಪಡೆದಿದ್ದಾರೆ ಎಂದು ಹೊರಗೆ ಹೇಳುತ್ತಿದ್ದವು. ಆದರೆ ಈ ಸಭೆಗೆ ಅವರು ಬಂದಾಗ ಜಿಜ್ಞಾಸೆ ತೋರಿಸಿದರು. ೧೯೬೩ರಲ್ಲಿ ಚರ್ಚೆಯಾದಾಗ ಎಮರ್ಜೆನ್ಸಿ ಎಂದು ಈ ಸಂಬಂಧವಾದ ನಿರ್ಣಯಕ್ಕೆ ಕಲ್ಲು ಹಾಕಿದರು. ಇದೊಂದೇ ಕಾರಣ ಅವರು ಕೊಟ್ಟಿರುವುದು. ಆದರೆ ಎಮರ್ಜೆನ್ಸಿ ಎಂದು ಈ ಮುಖ್ಯವಾದ ಪ್ರಶ್ನೆಯನ್ನು ತಳ್ಳಿಹಾಕುವುದು ಸಕಾರಣವಾಗಿರಲಿಲ್ಲ. ಧಿಟ್ಟವಾದ ನಿಲುವನ್ನು ತೆಗೆದುಕೊಳ್ಳಲು ಯಾವಾಗಲೂ ಧೈರ್ಯಸ್ಥೈರ್ಯ ಬೇಕು. ಶ್ರೀ ನಿಜಲಿಂಗಪ್ಪನವರಾಗಲಿ, ಶ್ರೀ ವೀರೇಂದ್ರ ಪಾಟೀಲರಾಗಲಿ ಮನಸ್ಸು ಮಾಡಿದ್ದರೆ ಅವರಿಗೆ ಹೆಚ್ಚು ಬೆಂಬಲವಿದ್ದುದರಿಂದ ಈ ವಿಷಯದಲ್ಲಿ ತೀರ್ಮಾನ ತಗೆದುಕೊಳ್ಳಬಹುದಾಗಿತ್ತು ಎಂಬುದು ನನ್ನ ಅಭಿಪ್ರಾಯ: ನಾನೂ ಕೂಡ ಹಿಂದೆ ಈ ಸಂಬಂಧವಾದ ಚರ್ಚೆಯಲ್ಲಿ ಭಾಗ ವಹಿಸಿದ್ದೆ. ಆಗಲೂ ಸಹ ಕಾಂಗ್ರೆಸ್ ಪಕ್ಷದಲ್ಲಿ ಏಕಾಭಿಪ್ರಾಯವಿರಲಿಲ್ಲ. ಭಿನ್ನಾಭಿಪ್ರಾಯವಿತ್ತು ಎಂದು ಪತ್ರಿಕೆಗಳಲ್ಲಿ ವರದಿಯಾಗಿತ್ತು. ವಿರೋಧ ಇದ್ದರೂ ಅದು ಬಹುಮತದ ಪಕ್ಷವಾಗಿತ್ತು, ಈ ಸಭೆಯಲ್ಲಿ ಒಂದಾಗಿ ಬೆಂಬಲ ಕೊಡುವ ಪರಿಸ್ಥಿತಿ ಇತ್ತು. ಈ ಪ್ರಶ್ನೆ ಬಂದಾಗ ಶ್ರೀ ವೀರೇಂದ್ರ ಪಾಟೀಲರು ಇದರ ಬಗ್ಗೆ ಧಿಟ್ಟ ನಿಲುವನ್ನು ತಾಳಬಹುದಾಗಿತ್ತು, ತಾಳಲಿಲ್ಲ. ಇಂಥ ಪ್ರಶ್ನೆ ಬಂದಾಗ ತೀರ್ಮಾನ ಮಾಡುವಾಗ ಎದೆ ಗಟ್ಟಿಯಾಗಿರಬೇಕು. ಸರಿಯಾದ ನಿರ್ಧಾರಕ್ಕೆ ಬರಬೇಕಾದರೆ ಹಿಂದಿನವರಿಗೆ ಈ ಬಗ್ಗೆ ಸರಿಯಾದ ಮನೋಭಾವ ಇರಲಿಲ್ಲವೆಂದು ಇದರಿಂದ ತಿಳಿಯಬಹುದು.

ಕಮ್ಯೂನಿಸ್ಟ್ ಪಕ್ಷದವರು ಹೆಸರಿನ ಬಗ್ಗೆ, ಭಾಷಾವಾರು ಪ್ರಾಂತದ ಬಗ್ಗೆ ಮೊದಲೇ ಒಂದು ನಿಲುವು ಇಟ್ಟುಕೊಂಡ ಜನ. ನಮಗೆ ಕನ್‌ಫ್ಯೂಷನ್ ಇಲ್ಲ. ಹೀಗೆ ಆಗಬೇಕು, ಹಾಗೆ ಆಗಬೇಕು ಎಂದು ಚಂಚಲ ಮನೋಭಾವ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಯಾವ ಕಾಲದಲ್ಲಿ ಆಗಬೇಕೋ ಆ ಕಾಲದಲ್ಲಿ ಆಗಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಮೊದಲೇ ನಿರ್ದಿಷ್ಟವಾಗಿ ತೀರ್ಮಾನ ತೆಗೆದುಕೊಳ್ಳಬೇಕಾಗಿತ್ತು. ಆಗ ಆ ರೀತಿ ತೆಗೆದುಕೊಂಡಿದ್ದರೆ ಇದರ ಬಗ್ಗೆ ಭಿನ್ನಾಭಿಪ್ರಾಯ ಬರುತ್ತಾ ಇರಲಿಲ್ಲ. ಒಂದುವೇಳೆ ಭಿನ್ನಾಭಿಪ್ರಾಯ ಬಂದಿದ್ದರೂ ಸಹ ಜನಸಾಮಾನ್ಯರು ಈ ನಿರ್ಣಯದ ಬಗ್ಗೆ ಬೆಂಬಲ ಕೊಡುತ್ತಿದ್ದರು. ಜನಸಾಮಾನ್ಯರ, ಕಾರ್ಮಿಕರ ಮತ್ತು ಇತರರ ಅಭಿಪ್ರಾಯ ಏನು ಇದೆ ಅದರಂತೆ ಮಾಡಬೇಕು. ತಮ್ಮ ಹಿತಾಸಕ್ತಿ ನೋಡಿಕೊಂಡು ತೀರ್ಮಾನ ತೆಗೆದುಕೊಳ್ಳುವುದು ಸಾಧುವಾದದ್ದಲ್ಲ ಎಂದು ಹೇಳುತ್ತೇನೆ. ನಮ್ಮ ಪಾರ್ಟಿಯ ನಿಲುವು ಏನು ಎಂದು ಮಾನ್ಯ ಸಭಾಧ್ಯಕ್ಷರಿಗೆ ಮೊದಲಿನಿಂದಲೂ ಗೊತ್ತಿದೆ. ಈ ಸಂದರ್ಭದಲ್ಲಿ ಶ್ರೀಮಾನ್ ಗೋಪಾಲಗೌಡರನ್ನು ಸ್ಮರಿಸುತ್ತೇವೆ. ವಾಟಾಳ್ ನಾಗರಾಜರವರು ಮಾತನಾಡಿ ಭಾವೋದ್ರೇಕ ಪೂರಿತವಾಗಿ ಹೇಳಿದ್ದಾರೆ. ಶ್ರೀ ಗೋಪಾಲಗೌಡರು ಇದ್ದಿದ್ದರೆ ಬಹಳ ಸಂತೋಷ ಪಡುತ್ತಿದ್ದರು. ಅವರ ಸಂತೋಷದಲ್ಲಿ ನಾವು ಭಾಗಿಗಳಾಗುತ್ತಿದ್ದೆವು. ಅವರು ಅಚ್ಚ ಕನ್ನಡದಲಿ ಮಾತನಾಡುತ್ತಿದ್ದರು, ಬೆರಕೆ ಕನ್ನಡ ಮಾತನಾಡುತ್ತಿರಲಿಲ್ಲ. ವಾಟಾಳ್ ನಾಗರಾಜ್‌ರವರಿಗೆ ಅಷ್ಟೊಂದು ಮಾತನಾಡುವುದಕ್ಕೆ ಬರುವುದಿಲ್ಲ. ಶ್ರೀಮಾನ್ ಗೋಪಾಲಗೌಡರು ಸ್ವಚ್ಛವಾಗಿ ನಿಧಾನವಾಗಿ ಮಾತನಾಡಿ ಪದಗಳನ್ನು ಚೆನ್ನಾಗಿ ಜೋಡಿಸುತ್ತಿದ್ದರು. ನಮ್ಮ ಪಾರ್ಟಿಯ ನಿಲುವು ಏನು ಇತ್ತು ಎಂದರೆ ನಾವು ಜಾತಿಯ ಆಧಾರದ ಮೇಲೆ ಈ ವಿಚಾರವನ್ನು ನೋಡುವ ಜನವಲ್ಲ. ಒಕ್ಕಲಿಗರು, ಲಿಂಗಾಯಿತರು,

(ಶ್ರೀ ಎಂ. ಎಸ್. ಕೃಷ್ಣನ್)

ಆದಿಕರ್ನಾಟಕರು, ಹರಿಜನರು, ಬ್ರಾಹ್ಮಣರು ಅನ್ನುವ ಪ್ರಶ್ನೆ ಇಲ್ಲ, ನನಗೆ ತಿಳಿದಮಟ್ಟಿಗೆ ಈ ಪ್ರಶ್ನೆ ಪ್ರಜಾಪ್ರಭುತ್ವದ ಪ್ರಶ್ನೆ. ಪ್ರಜಾಪ್ರಭುತ್ವ ಬೆಳೆಯಬೇಕಾದರೆ ಯಾವುದೇ ದೇಶದಲ್ಲಿ ಆಯಾಯ ರಾಜ್ಯದ ಜನ ಅಲ್ಲಿಯ ಭಾಷೆಯಲ್ಲಿ ಮಾತನಾಡಿದರೆ ಮಾತ್ರ ಬೆಳೆಯುತ್ತದೆ. ರಾಜ್ಯ ಸರ್ಕಾರಗಳು ಎಲ್ಲಾ ಹಂತಗಳಲ್ಲಿಯೂ ಆಯಾಯ ದೇಶದ ಭಾಷೆಯಲ್ಲೇ ನಡೆವಳಿಕೆಯನ್ನು ನಡೆಸಿದರೆ ಈ ಪ್ರಜಾ ಪ್ರಭುತ್ವ ಬೆಳೆಸುವುದಕ್ಕೆ ಸಾಧ್ಯ. ಇಲ್ಲದಿದ್ದರೆ ಬೆಳೆಯುವುದಿಲ್ಲ. Socialism is the Highest form of Democracy ಎಂದು ಮಾರ್ಕ್ಸವಾದಿಗಳ ಅಭಿಪ್ರಾಯ.

SRI M. MALLIKARJUNASWAMY.—But the State will wither away.

ಶ್ರೀ ಎಂ. ಎಸ್. ಕೃಷ್ಣನ್.—ಮಲ್ಲಿಕಾರ್ಜುನಸ್ವಾಮಿಯವರು ಸಮಾತಾವಾದದ ರಾಷ್ಟ್ರಗಳಿಗೆ ಹೋಗಿದ್ದಾರೋ ಇಲ್ಲವೋ ಗೊತ್ತಿಲ್ಲ. ಅವರು ಹೋಗಿದ್ದರೆ ಕಪ್ಪು ಕನ್ನಡಕ ಹಾಕಿಕೊಂಡು ಹೋಗಿರ ಬಹುದು.

SRI M. MALLIKARJUNASWAMY.—for the information of the hon. member I may say that Communism was my special subject in M. A.

ಶ್ರೀ ಎಂ ಎಸ್. ಕೃಷ್ಣನ್.—ನಾನು ಓದಿಲ್ಲ. ತಾವು ಆ ಸಬ್ಜೆಕ್ಟನ್ನು ಓದಿರಬಹುದು. ಎಷ್ಟೋ ಜನ ಓದಿರುವಂಥ ಅತಿರಥ ಮಹಾರಥರು ಆ ತತ್ವವನ್ನು ಸರಿಯಾಗಿ ತಿಳಿದುಕೊಂಡಿಲ್ಲ ಎಂದು ಹೇಳ ಬೇಕಾಗಿದೆ ಸಮತಾವಾದ ಔಟ್ ಮೋಡೆಡ್ ಫಿಲಾಸಫಿ, ಮಾರ್ಕ್ಸವಾದ ಔಟ್ ಮೋಡೆಡ್ ಫಿಲಾಸಫಿ ಎಂದು ಹೇಳುತ್ತಿದ್ದವರು ಅದನ್ನು ಒಪ್ಪಿಕೊಳ್ಳುವ ಕಾಲ ಈಗ ಬಂದಿದೆ, ಒಪ್ಪಿಕೊಳ್ಳುತ್ತಿದ್ದಾರೆ. ನೀವೂ ಕೂಡ ಒಪ್ಪಿಕೊಳ್ಳುತ್ತೀರಿ. ಆ ತತ್ವ ಬರಬೇಕು ಎಂದು ಹೇಳುತ್ತೇನೆ. ಆ ತತ್ವದ ತಿರುಳು ಜಾತಿ ಆಧಾರದ ಮೇಲೆ ಇಲ್ಲ, ಭಾಷೆಗಳ ಆಧಾರದ ಮೇಲೆ ನಿಂತಿದೆ.

ಇನ್ನು ಎರಡನೇ ಮುಖ್ಯ ತತ್ವ ಕರ್ನಾಟಕ ಎಂದು ಹೆಸರು ಇಟ್ಟಿರುವುದು ಏತಕ್ಕೆ ಎಂದರೆ ಅದು ಸಾಮ್ರಾಜ್ಯಶಾಹಿ ವಿರುದ್ಧವಾಗಿ ಇರುವ ಪರಂಪರೆ ಹೆಸರು. ಚರಿತ್ರೆ ಬಗ್ಗೆ ನಮ್ಮ ಸ್ನೇಹಿತರು ಹೇಳಿದ್ದಾರೆ. ಕವಿಗಳ ಬಗ್ಗೆ ಹೇಳಿದ್ದಾರೆ. ಅದನ್ನು ವಿಚಾರ ಮಾಡುವುದಕ್ಕೆ ಹೋಗುವುದಿಲ್ಲ. ಸಾಮ್ರಾಜ್ಯಶಾಹಿ ಪರ ಪರೆಗೆ ವಿರುದ್ಧವಾಗಿ ಇರುವ ಕಾರ್ಮಿಕ ವರ್ಗ ಕರ್ನಾಟಕ ಆಗಬೇಕು ಎಂದು ಮೊದಲಿನಿಂದಲೂ ಅಭಿಪ್ರಾಯ ಪಟ್ಟಿದೆ. ಮಹಾತ್ಮಾ ಗಾಂಧಿಯವರೂ ಸಹ ಬೆಳಗಾಂಗೆ ಬಂದಾಗ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿ ಹೆಸರಿನಲ್ಲಿ ಮಹಾಧಿವೇಶನ ನಡೆಯಿತು. ಮುಖ್ಯಮಂತ್ರಿಗಳು ಮಾತನಾಡುತ್ತಾ, ವಿದ್ಯಾರ್ಥಿಗಳ ಬಗ್ಗೆ ಹೇಳಿದ್ದಾರೆ, ಸಾರ್ವಜನಿಕರ ಬಗ್ಗೆ ಕೂಡ ಹೇಳಿದ್ದಾರೆ. ಆದರೆ ಕಾರ್ಮಿಕರ ಬಗ್ಗೆ ಹೇಳಲಿಲ್ಲ.

SRI D. DEVARAJ URS.—(Chief Minister) I acknowledge.

SRI M. S. KRISHNAN.—Thank you very much. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಕಾರ್ಮಿಕರ ಮಧ್ಯೆ ಬೇರೆ ಬೇರೆ ಭಾಷೆಗಳನ್ನು ಮಾತನಾಡುವವರು, ಬೇರೆ ಬೇರೆ ಜಾತಿಯವರು ಇದ್ದಾರೆ. ಈ ವಿಷಯದಲ್ಲಿ ಮಾತ್ರ ಅವರು ಮೊದಲಿನಿಂದಲೂ ಬಹಳ ಸ್ಪಷ್ಟವಾಗಿ ಕರ್ನಾಟಕ ಆಗಬೇಕು ಎಂದು ಹೇಳಿದ್ದಾರೆ. ಆದೂ ಕೂಡ ಚರಿತ್ರೆಯ ಭಾಗವಾಗಿದೆ. ನಾವು ಮೊದಲಿನಿಂದಲೂ ಹೋರಾಟ ನಡೆಸಿಕೊಂಡು ಬಂದವರು, ಹೋರಾಟ ನಡೆಸಿದವರು. ಆದುದರಿಂದ ಈ ಸಂದರ್ಭದಲ್ಲಿ ಕಾರ್ಮಿಕರನ್ನು ಸ್ಮರಿಸುವುದು ಒಳ್ಳೆಯದು. ಈ ಹೆಸರು ಬದಲಾವಣೆ ಮಾಡಿರುವುದರಿಂದ ನಿಜವಾಗಿಯೂ ಸಂತೋಷವಾಗಿದೆ. ಇದು ಐತಿಹಾಸಿಕವಾದ ತೀರ್ಮಾನ ಎಂದು ಒಪ್ಪಿಕೊಳ್ಳುತ್ತೇನೆ. ಈ ಕರ್ನಾಟಕ ಪರಂಪರೆಯನ್ನು ಉಳಿಸಿಕೊಂಡು ಬರಬೇಕು. ಸಾಮ್ರಾಜ್ಯಶಾಹಿ ವಿರುದ್ಧ ಪರಂಪರೆಯನ್ನು ಉಳಿಸಬೇಕು. ಅದಕ್ಕಾಗಿ ಸಮಾತಾವಾದಿ ಕಾರ್ಯಕ್ರಮವನ್ನು ಜಾರಿಗೆ ತರಬೇಕು ಎಂದು ನಾನು ಕೇಳಿ ಕೊಳ್ಳುತ್ತೇನೆ. ಈ ಸಮಾತಾವಾದಿ, ಕಾರ್ಯಕ್ರಮ ಜಾರಿಗೆ ಬಾರದೆ ಹೆಸರು ಬದಲಾವಣೆ ಆದರೆ ನಮ್ಮ ಮುಂದಿರುವ ಪ್ರಶ್ನೆಗಳು ಬಗೆಹರಿಯುವುದಿಲ್ಲ. ಯಾವುದು ಸಮಾತಾವಾದಿ ? ಹೇಗೆ ತೆಗೆದುಕೊಂಡು ಹೋಗಬೇಕು ? ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಮತ್ತು ಸಮಾತಾವಾದಿ ಕ್ರಮಗಳನ್ನು ಜಾರಿಗೆ ತರಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಂಡು ಈ ಕರ್ನಾಟಕ ಎಂಬ ಹೆಸರಿನ ಬಗ್ಗೆ ನಮ್ಮ ಮುಂದೆ ಇಟ್ಟಿರುವ ತೀರ್ಮಾನವನ್ನು ಬೆಂಬಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ರಾಮಯ್ಯ.—(ಸಿರಗುಪ್ಪ) ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ನಮ್ಮ ಮುಂದೆ ಮಂಡಿಸಿದಂಥ ಕರ್ನಾಟಕ ನಿರ್ಣಯವನ್ನು ಅನುಮೋದಿಸುತ್ತಾ ಕೆಲವು ವಿಚಾರಗಳನ್ನು ಮಾತನಾಡುವುದಕ್ಕೆ ಬಯಸುತ್ತೇನೆ. ಅವರು ಐತಿಹಾಸಿಕ ನಿರ್ಣಯವನ್ನು ನಮ್ಮ ಮುಂದೆ ತಂದಿದ್ದಾರೆ. ಹರಿದು ಹಂಚಿಹೋಗಿದ್ದ ಕರ್ನಾಟಕವು ೧ನೇ ನವಂಬರ್ ೧೯೫೬ ರಿಂದ ಒಂದುಗೂಡಿತ್ತು. ಅಲ್ಲಿಂದ ಮುಖ್ಯಮಂತ್ರಿಗಳಾಗಿ ಹೋದವರೆಲ್ಲರಿಗೂ ಈ ನಿರ್ಣಯವನ್ನು ತರಲು ಧೈರ್ಯ ಬರಲಿಲ್ಲ. ಅಂಥಾ ನಿರ್ಣಯವನ್ನು ಈ ಅರಸು ಮಂತ್ರಿವರ್ಗದವರೊಬ್ಬರೇ ಧೈರ್ಯ ಮಾಡಿ ತಂದರು. ಅದಕ್ಕಾಗಿ ಅವರನ್ನು ನಿಜವಾಗಿ ಅಭಿನಂದಿಸಬೇಕಾದುದು ನಮ್ಮ ಕರ್ತವ್ಯವಾಗಿದೆ. ೧೬ ವರ್ಷಗಳಿಂದಲೂ ಕರ್ನಾಟಕ ಆಗ ಬೇಕೆಂದು ಎಲ್ಲಾ ಕಡೆಯಿಂದಲೂ ಎಲ್ಲಾ ಜನರೂ ಹೋರಾಡಿದರೂ ಕೂಡ ಯಾವ ಮುಖ್ಯಮಂತ್ರಿಗಳಿಗೂ ಈ ನಿರ್ಣಯವನ್ನು ತರಲು ಧೈರ್ಯ ಬರಲಿಲ್ಲ.

೫-೩೦ ಪಿ. ಎಂ.

ಮಾನ್ಯ ದೇವರಾಜ ಅರಸು ಅವರೇ, ಈ ರಾಜ್ಯಕ್ಕೆ ಮೈಸೂರು ಎಂದೇ ಹೆಸರು ಇರಬೇಕು, ಕರ್ನಾಟಕ ಎಂದು ಇರಬಾರದು ಎಂದು ಮೂರು ಗಂಟೆ ಕಾಲ ಭಾಷಣವನ್ನು ಈ ಸದನದಲ್ಲಿ ಮಾಡಿದ್ದಾರೆ. ಅಂಥವರು ಜನರ ಒತ್ತಡಕ್ಕೆ ಮಣಿದು, ಈ ನಿರ್ಣಯವನ್ನು ಮಂಡಿಸಿದ್ದು ನೋಡಿದರೆ ಅವರ ಹಿರಿಮೆ ಇದರಿಂದ ಹೆಚ್ಚಾಗುತ್ತದೆಂದರೆ ತಪ್ಪಾಗಲಾರದು. ನಾನು ಈ ಸಂದರ್ಭದಲ್ಲಿ ಬಳ್ಳಾರಿ ವಿಷಯ ಮಾತನಾಡ ಬೇಕಾಗುತ್ತದೆ.

೧ನೆಯ ಅಕ್ಟೋಬರ್ ೧೯೫೩ರಲ್ಲಿ ಬಳ್ಳಾರಿ ಜಿಲ್ಲೆಯ ಸೇರ್ಪಡೆ ಕರ್ನಾಟಕವಾಗುವುದಕ್ಕೆ ನಾಂದಿ ಯಾಯಿತು ಎಂದರೆ ತಪ್ಪಾಗಲಾರದು. ಅಲ್ಲಿಯವರೆವಿಗೂ ಬಳ್ಳಾರಿ ಮದ್ರಾಸ್ ರಾಜ್ಯದಲ್ಲಿತ್ತು. ಆಗ ಬಳ್ಳಾರಿಯಲ್ಲಿ ೮ ತಾಲ್ಲೂಕುಗಳಿದ್ದವು. ದುರದೃಷ್ಟವಶಾತ್ ಆಲೂರು, ಆದೋಣಿ ಮತ್ತು ರಾಯದುರ್ಗ ತಾಲ್ಲೂಕುಗಳು ಆಂಧ್ರಕ್ಕೆ ಹೋಗಿ ಉಳಿದ ತಾಲ್ಲೂಕುಗಳು ಮೈಸೂರು ರಾಜ್ಯಕ್ಕೆ ಬಂದು, ಸೇರಿದವು ಅಲ್ಲಿಂದ ಕರ್ನಾಟಕದ ಕನಸು ನನಸಾಗುವುದಕ್ಕೆ ಪ್ರಾರಂಭವಾಯಿತು. ಆದರೂ ಪ್ರಾದೇಶಿಕ ಭಾವನೆ ನಮ್ಮಲ್ಲಿ ಹೋಗಿಲ್ಲ. ಹೈದರಾಬಾದ್ ಕರ್ನಾಟಕ, ಬೊಂಬಾಯಿ ಕರ್ನಾಟಕದಿಂದ ಬಂದವರು, ಹಳೇ ಮೈಸೂರಿ ನವರು, ಕೊಡಗಿನವರು ಎನ್ನುವ ಪ್ರಾದೇಶಿಕ ಭಾವನೆ ಏನಿದೆ ಅದು ೧೬ ವರ್ಷವಾದರೂ ಕೂಡ ಹೋಗಿಲ್ಲ. ಈ ಭಾವನೆ ಹೋಗದೆ ಇದ್ದರೆ ಸರಿ ಹೋಗುವುದಿಲ್ಲವೆಂದು ಒತ್ತಾಯ ಮಾಡಿ ಹೇಳಬೇಕಾಗುತ್ತದೆ.

ಕರ್ನಾಟಕದ ನಾಂದಿಯಾದರೂ, ದುರದೃಷ್ಟದಿಂದ ಎಲ್ಲ ರೀತಿಯಿಂದಲೂ ನಮ್ಮ ಬಳ್ಳಾರಿ ಜಿಲ್ಲೆ ಹಿಂದುಳಿದಿರುವಂತಾಗಿದೆ. ಪ್ರಾದೇಶಿಕ ಮನೋಭಾವನೆಯಿಂದ ಹೀಗಾಗಿದೆ. ನಮ್ಮನ್ನು ಮೈಸೂರಿನವರು ಹಳೆ ಮೈಸೂರಿನವರಲ್ಲ ಎಂದು ಹೇಳುತ್ತಾರೆ, ಬೊಂಬಾಯಿ ಕರ್ನಾಟಕದವರು ನೀವು ಹಳೆ ಮೈಸೂರಿ ನವರು ಎಂದು ಹೇಳುತ್ತಾರೆ. ಈ ರೀತಿ ಹೇಳುವುದನ್ನು ಕೇಳಿ ಬಹಳ ವ್ಯಸನವಾಗುತ್ತದೆ.

ನಮ್ಮ ಕನ್ನಡ ಸಹೋದರರು ಬೇರೆ ಕಡೆ ಇದ್ದಾರೆ. ಅವರೆಲ್ಲರನ್ನೂ ಕೂಡ ನಮ್ಮ ಜೊತೆಗೆ ತೆಗೆದು ಕೊಂಡು ಅಖಂಡ ಕರ್ನಾಟಕ ಎಂದು ಮಾಡಿದರೆ ಒಳ್ಳೆಯದಾಗುತ್ತದೆ. ಬಳ್ಳಾರಿ ಜಿಲ್ಲೆಗೆ ಸೇರಿದ್ದು ಆಂಧ್ರಕ್ಕೆ ಹೋಗಿರುವ ಆಲೂರು, ಆದೋಣಿ ಮತ್ತು ರಾಯದುರ್ಗ ಈ ಮೂರೂ ತಾಲ್ಲೂಕುಗಳಲ್ಲಿರುವ ಕನ್ನಡಿಗರು ೧೫-೨೦ ವರ್ಷದಿಂದ ಕರ್ನಾಟಕಕ್ಕೆ ಸೇರುತ್ತೇವೆಂದು ಮುಖ್ಯಮಂತ್ರಿಗಳಿಗೂ, ರಾಷ್ಟ್ರದ ಅಧ್ಯಕ್ಷರಿಗೂ ಮತ್ತು ಪ್ರಧಾನ ಮಂತ್ರಿಗಳಿಗೂ ಮೆಮೊರಾಂಡಂ ಕೊಟ್ಟಿದ್ದಾರೆ, ಮನವಿ ಮಾಡಿದ್ದಾರೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಅವರ ಬಗ್ಗೆ ಚಕಾರವೆತ್ತಲಿಲ್ಲ. ಮೊನ್ನೆ ಈ ಸದನದಲ್ಲಿ ಈ ಬಗ್ಗೆ ಮುಖ್ಯಮಂತ್ರಿಗಳ ನಿಲುವೇನು, ಸರ್ಕಾರದ ನಿಲುವೇನು ಎಂದರೆ ಸರಿಯಾಗಿ ಹೇಳಲಿಲ್ಲ. ಅಲ್ಲಿಯ ಕನ್ನಡಿಗರು ನಮ್ಮಲ್ಲಿ ಬಂದು ಸೇರುತ್ತೇವೆಂದು ಹೇಳುತ್ತಿದ್ದಾರೆ. ನಮಗೆ ಅನ್ಯಾಯವಾಗಿ ಬರತಕ್ಕ ಪ್ರದೇಶ ಬೇಡ. ನ್ಯಾಯವಾಗಿ ಬರುವಂಥ ಪ್ರದೇಶದಲ್ಲಿ ನಮ್ಮ ಸಹೋದರರೇನಿದ್ದಾರೆ ಅವರು ಕರ್ನಾಟಕಕ್ಕೆ ಬರುತ್ತಾರೆಂದರೆ ನಾವು ಏಕೆ ಬೇಡ ಎನ್ನುವುದು ? ಈ ವಿಷಯದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಖಚಿತವಾದ ನಿಲುವನ್ನು ತೆಗೆದುಕೊಂಡು ಆಂಧ್ರ ಬಾರ್ಡರ್ ಕಮಿಟಿ ಎಂದು ಕಮಿಟಿಯನ್ನು ಮಾಡಿ ನಮ್ಮ ರಾಜ್ಯಕ್ಕೆ ಬರಬೇಕಾದ ಭಾಗಗಳು ಬರುವಂತೆ ಮಾಡಬೇಕು. ಎಂದು ಹೇಳುತ್ತೇನೆ. ಮದ್ರಾಸಿನಲ್ಲಿರುವ ಹೊಸೂರು ತಾಲ್ಲೂಕು, ಕಾಸರಗೋಡು ತಾಲ್ಲೂಕು, ಕೊಯಮತ್ತೂರು ಜಿಲ್ಲೆಗೆ ಸೇರಿದ ತಾಳವಾಡಿ ಫಿರ್ಕಾ, ಅನಂತಪುರ ಜಿಲ್ಲೆಯ ಮಡಕಸಿರಾ ತಾಲ್ಲೂಕಿನವರು ಕರ್ನಾಟಕಕ್ಕೆ ಬರುತ್ತೇವೆಂದು ಹೇಳುತ್ತಿದ್ದಾರೆ. ಈ ಭಾಗಗಳೆಲ್ಲ ನಮ್ಮ ರಾಜ್ಯಕ್ಕೆ ಸೇರುವಂತೆ ಮಾಡಬೇಕು. ಮಹಾರಾಷ್ಟ್ರ ಬಾರ್ಡರ್ ಕಮಿಟಿ ಇರುವಂತೆ ಇತರ ಭಾಗಗಳಿಗೂ ಸಹ ಅನ್ವಯವಾಗುವಂತೆ ಒಂದು ಬಾರ್ಡರ್ ಕಮಿಟಿಯನ್ನು ನೇಮಿಸುವ ವ್ಯವಸ್ಥೆ ಮಾಡಿ, ನಮ್ಮ ಕರ್ನಾಟಕಕ್ಕೆ ಬರುವ ಭಾಗಗಳು ಬರುವಂತೆ ಮಾಡಬೇಕು ಎಂದು ಹೇಳುತ್ತೇನೆ. ರಾಜ್ಯದ ಹೆಸರನ್ನು 'ಕರ್ನಾಟಕ' ಎಂದು ಬದಲಾಯಿಸಬೇಕು ಎಂದು ಮಾನ್ಯ ಮುಖ್ಯ ಮಂತ್ರಿಗಳು ತಂದಿರುವ ನಿರ್ಣಯವನ್ನು ಸ್ವಾಗತಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಬಿ. ರಾಮಸ್ವಾಮಿ (ಆನೇಕಲ್) : ಸನ್ಮಾನ್ಯ ಸಭಾಪತಿಗಳೇ, ಈ ದಿವಸ ನಮ್ಮ ಮುಖ್ಯ ಮಂತ್ರಿಗಳು ಭಾರತದ ಸಂವಿಧಾನವನ್ನು ನಮೂದಿಸಿ ರಾಜ್ಯದ ಹೆಸರು 'ಕರ್ನಾಟಕ' ಎಂದು ಆಗಬೇಕು ಎಂಬ ವಿಚಾರವಾಗಿ ಇಟ್ಟಿರತಕ್ಕ ನಿರ್ಣಯವನ್ನು ನಾನು ಪುಷ್ಟೀಕರಿಸಿ, ಸುಸ್ವಾಗತಿಸಿ ಒಂದೆರಡು ಮಾತನ್ನು ಆಡುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ರಾಜ್ಯಕ್ಕೆ 'ಕರ್ನಾಟಕ' ಎಂಬ ಹೆಸರಾಗ ಬೇಕೆಂದು ಈಗಾಗಲೇ ಅನೇಕ ಕವಿ ಪುಂಗವರು ಋಷಿಗಳು, ಹಾಗೂ ರಾಜ್ಯ ಶಾಸ್ತ್ರಜ್ಞರು ಇದರ ಬಗ್ಗೆ ವಿಪುಲವಾಗಿ ಚರ್ಚೆಮಾಡಿದ್ದಾರೆ, ಹಾಗೂ ೧೬ ವರ್ಷಗಳು ಕಳೆದರೂ ಸಹ ಆಗದೆ ಇದ್ದ ಕರ್ನಾಟಕ ಎನ್ನುವ ಹೆಸರು ಈ ದಿವಸ ಆಗಬೇಕೆಂದು ನಮ್ಮ ಮುಂದೆ ಬಂದಿರುವುದು ನಮ್ಮ ಪುಣ್ಯವೆಂದು ಹೇಳು ವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಹಾಗೆ ಕಾಲಚಕ್ರ ಉರುಳಿದ ಹಾಗೆ ಹಾಗೂ ಸನ್ನಿವೇಶಕ್ಕೆ ಅನುಗುಣವಾಗಿ ಅನ್ವಯವಾಗುವ ಹಾಗೆ ಈ ಒಂದು ಅನ್ವರ್ಥನಾಮ ಬಂದಿರುವುದು ನಮ್ಮ ಕನ್ನಡನಾಡಿನ ಪುಣ್ಯ ಮತ್ತು ಕನ್ನಡನಾಡಿಗೆ ಒಂದು ಮೆರುಗನ್ನು ಕೊಟ್ಟಿರತಕ್ಕದು ಎಂದರೆ ತಪ್ಪಾಗ ಲಾರದು. ಅದೇ ರೀತಿ ಅನೇಕ ಕವಿಗಳು, ಋಷಿಗಳು ಮತ್ತು ವಿದ್ಯಾರ್ಥಿಗಳು ನಮ್ಮ ಕನ್ನಡನಾಡು ಕರ್ನಾಟಕ ಎನ್ನುವ ಹೆಸರನ್ನು ಪಡೆಯಬೇಕು ಎಂದು ಇದರ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರನ್ನು ಇಡುವಾಗ ನಮ್ಮ ಚುನಾವಣಾ ಪ್ರಣಾಳಿಕೆ ಏನಿದೆ ಅದರಂತೆ ಬಡವರಿಗೆ ಎಲ್ಲ ರೀತಿಯಲ್ಲಿಯೂ ಸವಲತ್ತುಗಳು ದೊರೆಯುವ ಹಾಗೆ ವಿಶಾಲವಾದ ಹೃದಯ ವಿರಲಿ ಎಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಕರ್ನಾಟಕ ಆಗಬೇಕಾದರೆ ಅನೇಕ ರಾಜಕಾರಣಿಗಳು ಹಾಗೂ ದಿವಂಗತ ಗೋಪಾಲಗೌಡರು, ಮತ್ತು ಅಂದಾನಪ್ಪ ದೊಡ್ಡಮೇಟಿ ಅವರು, ಮಾನ್ಯ ಶ್ರೀ ಕೆ. ಹನುಮಂತಯ್ಯನವರು ಕರ್ನಾಟಕವಾಗಬೇಕೆಂದು ಸತತವಾಗಿ ಹೋರಾಡಿ ಕರ್ನಾಟಕ ರಾಜ್ಯವಾದದ್ದು ನಮ್ಮೆಲ್ಲರ ಪುಣ್ಯವೆಂದು ಹೇಳಬಹುದು. ಮಹಾ ಭಾರತದಲ್ಲಿ ಕರ್ನಾಟಕ ಶಬ್ದ ಬಂದಿದೆ. ಹಿರಿಯರಾದ ಶ್ರೀ ಸಿ. ರಾಜಗೋಪಾಲಾಚಾರಿ ಅವರು ಕರ್ನಾಟಕ ಶಬ್ದದ ಬಗ್ಗೆ ಕೆಲವು ಮಾತನ್ನು ಆಡಿದ್ದಾರೆ. ಕರ್ನಾಟಕ ಎನ್ನುವ ಶಬ್ದದ ಬಗ್ಗೆ ಅವರು ಏಕ ಹೀಗೆ ಹೇಳಿದ್ದಾರೆ ಎನ್ನುವುದು ಗೊತ್ತಾಗುವುದಿಲ್ಲ. ವಯೋವೃದ್ಧರಾದ ಅವರು ಇಂತಹ ಶುಭ ಲಗ್ನ ಸಮಯ ದಲ್ಲಿ, ಒಳ್ಳೆಯ ಹೆಸರನ್ನು ರಾಜ್ಯಕ್ಕೆ ಇಡುವಂಥ ಸಂದರ್ಭದಲ್ಲಿ ಆ ಮಾತನ್ನು ಆಡಿರುವುದನ್ನು ನೋಡಿ ನನಗೆ ಬಹಳ ವ್ಯಥೆಯಾಗುತ್ತದೆ. ಬಹುಶಃ ಅವರು ಆ ರೀತಿ ಹೇಳಬಾರದಾಗಿತ್ತು. ಇಡೀ ಜಗತ್ತಿನಲ್ಲೇ ನಮ್ಮ ಮೈಸೂರು ನಾಡು ಹಾಗೂ ಕನ್ನಡನಾಡು ಬಹಳ ಹೆಸರುವಾಸಿಯಾಗಿ ಪ್ರಪಂಚದಲ್ಲಿ ಒಂದು ವಿಶೇಷವಾದ ಸ್ಥಾನವನ್ನು ಗಳಿಸಿದೆ ಕರ್ನಾಟಕ ರಾಜ್ಯಕ್ಕೆ ಅನೇಕ ಭಾಗಗಳು ಇನ್ನೂ ಸೇರಬೇಕಾಗಿವೆ. ಇವೆಲ್ಲ ಸೇರಿದ ಮೇಲೆ ಕರ್ನಾಟಕವಾಗಿದ್ದರೆ ಚೆನ್ನಾಗಿತ್ತು, ಹೊಸೂರು, ಕಾಸರಗೋಡು ಮುಂತಾದ ಪ್ರದೇಶಗಳು ಬಹುಶಃ ನಮ್ಮ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ನಮ್ಮ ರಾಜ್ಯದೊಡನೆ ಸ್ವಲ್ಪವೇ ದಿವಸಗಳಲ್ಲಿ ನಮ್ಮ ಕರ್ನಾಟಕಕ್ಕೆ ಸೇರುವಂತಾಗಲೀ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗೆಯೇ ಈ ದಿವಸ ಮೂರೂವರೆ ಕೋಟಿ ಜನ ಕನ್ನಡಿಗರಿಗೆ ಬಹಳ ಸಂತೋಷದ ದಿವಸ; ಈವೊತ್ತಿನ ದಿವಸ ನಾವೆಲ್ಲರೂ ಒಂದೇ ಮನಸ್ಸಿನಿಂದ, ಒಂದೇ ನೀತಿಯಿಂದ ಒಂದೇ ತತ್ವದಿಂದ, ನಮ್ಮ ರಾಜ್ಯವನ್ನು ಒಂದುಗೂಡಿಸಲು ಒಂದು ನೀತಿಯನ್ನು ಪರಿಪಾಲನೆ ಮಾಡಬೇಕು ಎಂದು ಹೇಳಿ, ಈ ಸಂದರ್ಭದಲ್ಲಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ಕರ್ನಾಟಕ ಸುಗಮವಾಗಿ ಬೆಳಗಲಿ ಎಂದು ಹೇಳಿ, ಮುಖ್ಯಮಂತ್ರಿಗಳು ಮಂಡಿಸಿರತಕ್ಕ ಈ ನಿರ್ಣಯವನ್ನು ಬೆಂಬಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಆರ್. ಎಸ್. ಶ್ರೀನಿವಾಸಲು ನಾಯಿಡು (ಶಾಂತಿನಗರ).—ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ತುದಿರುವ ಈ ರಾಜ್ಯದ ಹೆಸರನ್ನು ಕರ್ನಾಟಕ ಎಂಬುದಾಗಿ ಬದಲಾಯಿಸ ಬೇಕು ಎನ್ನುವ ಈ ಅಭಿಪ್ರಾಯವನ್ನು ಸಂಪೂರ್ಣವಾಗಿ ಅನುಮೋದಿಸುತ್ತಾ, ನಾನು ನಾಲ್ಕು ಮಾತು ಗಳನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಕವಿಗಳು ಹೇಳಿದ್ದು ಕೇಳಿದ್ದೇನೆ, ರಾಜಕಾರಣಿಗಳು ಸಾರಿದ್ದನ್ನು ಕೇಳಿದ್ದೇನೆ. ಕರ್ನಾಟಕದ ಮೂರು ಕೋಟಿ ಜನ ಹರಿದು, ಹಂಚಿ ಹೋಗಿದ್ದವರು ಈಹೊತ್ತಿನ ದಿವಸ ಒಂದಾಗಿ, ಒಡಗೂಡಿ, ಬಾಳುವ ಕಾಲ ಬಂದಿದೆ ಎಂದು ನಾವು ಸಂತೋಷ ಪಡಬೇಕಾಗಿದೆ. ಈ ಒಂದು ಸಂದರ್ಭದಲ್ಲಿ ನನಗೆ ಒಂದು ಮಾತು ಜ್ಞಾಪಕಕ್ಕೆ ಬರುತ್ತದೆ. ಕಾಲ ಧರ್ಮವನ್ನು ಅನುಸರಿಸುತ್ತದೆ. ಅಥವಾ ಧರ್ಮ ಕಾಲವನ್ನು ಅನುಸರಿಸುತ್ತದೆಯೋ. ಹಿಂದೆ ಯಾವ ಒಂದು ವಾತಾವರಣ ಇತ್ತೋ ಅಂತಹ ವಾತಾವರಣ ಈವೊತ್ತು ಇಲ್ಲ. ಕರ್ನಾಟಕ ಏಕೀಕರಣವಾಗುವ ಕಾಲದಲ್ಲಿ ಮೈಸೂರಿನವರಿಗೆ ಯಾವ ಭಿನ್ನಾಭಿಪ್ರಾಯವೂ, ಇಲ್ಲ. ಆಗ ಇತ್ತು ಈಗ ಇಲ್ಲ, ಇದಕ್ಕೆ ಮುಖ್ಯ ಕಾರಣ, ಈಗ ಎಲ್ಲಾ ಜನರ ಭಾವೈಕ್ಯತೆ ಯಾಗಿದೆ. ಮೈಸೂರಿನವರು ಭಾವೈಕ್ಯತೆಗೆ ಪ್ರಾಧಾನ್ಯಕೊಟ್ಟು, ಹಿಂದೆ ಹೇಳಿದ್ದನ್ನು ಎತ್ತಿ ಹಿಡಿದುಕೊಂಡು ಕಾಲಕಳೆಯದೆ, ಮುಂದೆ ಏನು ಮಾಡಬೇಕು ಎನ್ನುವ ವಿಷಯದಲ್ಲಿ ಯೋಚನೆ ಮಾಡುವ ಕಾಲ ಸನ್ನಿಹಿತ ವಾಗಿದೆ. ಒಂದು ಕಾಲದಲ್ಲಿ ಮೈಸೂರು ''ಮಾಡಲ್ ಸ್ಟೇಟ್'' ಆಗಿತ್ತು, ಅದೇ ರೀತಿ ಕರ್ನಾಟಕವೂ

"ಮಾಡಲ್ ಸ್ಟೇಟ್" ಆಗಬೇಕು ಎಂದು ನನ್ನ ಹಿರಿಯ ಆಸೆ ಇದೆ. ಇದರ ಜೊತೆಗೆ ಕವಿಗಳು ವರ್ಣಿಸಿದ ಹಾಗೆ, ''ರವಿ ಕಾಣದ್ದನ್ನು, ಕವಿ ಕಾಣುತ್ತಾನೆ'' ಎನ್ನುವಂತೆ ನಮ್ಮ ಕರ್ನಾಟಕವನ್ನು ಕವಿಗಳು ಕಂಡಹಾಗೆ ಮಾಡಬೇಕು ಎನ್ನುವುದು ಪ್ರತಿಯೊಬ್ಬ ಕನ್ನಡಿಗನ ಮನಸ್ಸಿನಲ್ಲಿಯೂ ಬರಬೇಕು ಎಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುತ್ತೇನೆ. ಅಲ್ಲದೆ ಇದೇ ಸಂದರ್ಭದಲ್ಲಿ ನಾನು ಎರಡು ಸಲಹೆಗಳನ್ನು ಕೂಡ ಕೊಡುವುದಕ್ಕೆ ಇಷ್ಟಪಡುತ್ತೇನೆ. ಕರ್ನಾಟಕದ ಭಾವೈಕ್ಯತೆಯಾದ ಮೇಲೆ, ಒಳ್ಳೆಯ ವಾತಾವರಣ ಕಲ್ಪನೆಯಾಗಿದೆ. ಸಾರ್ವಜನಿಕರು, ಶಿಕ್ಷಕರು, ಮತ್ತು ವಿದ್ಯಾರ್ಥಿಗಳ ಭಾವೈಕ್ಯತೆಯಾಗಬೇಕು. ಆದ್ದರಿಂದ ಒಬ್ಬರನ್ನು ಒಬ್ಬರು ನಂಬಬೇಕು. ಈ ಒಂದು ಸಂದರ್ಭದಲ್ಲಿ ಕರ್ನಾಟಕದ ಮೂರು ಕೋಟಿ ಜನಕ್ಕೆ ಭಗವಂತನು ಸದ್ಬುದ್ಧಿ ಕೊಟ್ಟು ಎಲ್ಲರೂ ಐಕ್ಯತೆಯಿಂದ ಬಾಳಬೇಕು ಎಂಬುದು ನನ್ನ ದೊಡ್ಡ ಆಸೆ. ಕರ್ನಾಟಕ ಎಂದು ನಾಮಕರಣವಾದಂಥ ಸಮಯದಲ್ಲಿ, ವಿಧಾನಸೌಧದ ರೀತಿ ಇನ್ನೂ ಒಂದು ವೀರ ಸೌಧವನ್ನು ವೀರರ ಸ್ಮಾರಕಕ್ಕಾಗಿ ಕಟ್ಟಬೇಕು ಎಂಬ ಒಂದು ಸಲಹೆಯನ್ನು ತಮ್ಮ ಮುಂದಿಡಲು ಇಚ್ಛಿಸುತ್ತೇನೆ. ನನಗೆ ಹೆಚ್ಚು ಮಾತನಾಡಲು ಅವಕಾಶವಿಲ್ಲದೆ ಇರುವುದರಿಂದ, ನಮ್ಮ ಕರ್ನಾಟಕ ಚೆನ್ನಾಗಿ ಬೆಳೆಯುವಂತಾಗಲಿ ಎಂದು ಹಾರೈಸಿ, ''ಸಿರಿಗನ್ನಡಂಗಲ್ಗೆ, ತಾಯಿನಾಡು ಬಾಳ್ಗೆ''. ಎಂದು ಹೇಳಿ ನನ್ನ ವಂದನೆಗಳನ್ನು ಅಧ್ಯಕ್ಷರಿಗೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. "ಜೈ ಕರ್ನಾಟಕ ಮಾತೆ''.

† ಶ್ರೀಮತಿ ರಾ. ಕಾಂ. ಮಹಬಲೇಶ್ವರ ಭಟ್ಟ (ಅಂಕೋಲ).—ಸನ್ಮಾನ್ಯ ಅಧ್ಯಕ್ಷರೇ, ಇಂದು ನಮಗೆ ಹರುಷದ ಮೂರನೆಯ ದಿವಸವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಮನುಷ್ಯನಿಗೆ ಹರುಷವಾದಾಗ ಮಾತನಾಡಲು ಬಹಳ ಕಷ್ಟವಾಗುತ್ತದೆ. ಆದ್ದರಿಂದ ನನಗೆ ಬಹಳ ಹರ್ಷವಾಗಿದೆ ಯಾದರೂ ಎರಡು ಮಾತನ್ನು ಹೇಳುತ್ತೇನೆ. ಅದು ತಪ್ಪೋ, ಒಪ್ಪೊ ನಾನರಿಯೆ. ಇಂದು ನಮ್ಮ ರಾಜ್ಯದ ಹೆಸರು ಕರ್ನಾಟಕ ಎಂದು ನಮ್ಮ ಮುಖ್ಯಮಂತ್ರಿಗಳು ಘೋಷಣೆ ಮಾಡಿದಾಗ ನನಗೆ ಹೆಮ್ಮೆಯಾಯಿತು. ಏಕೆಂದರೆ, ಮೂರು ಕೋಟಿ ಜನಗಳು ತಾವು ಬಯಸಿದಂಥ ಹೆಸರು ಇಡಬೇಕು ಎಂದು ೧೬ ವರ್ಷಗಳಿಂದಲೂ ಹೇಳಿಕೊಂಡು ಬಂದಂಥ ಒಂದು ಮುಖ್ಯವಾದ ವಿಷಯ ಇದು. ಕರ್ನಾಟಕ ಎಂಬ ಮಧುರವಾದಂಥ ಒಂದು ಹೆಸರನ್ನು ಮುಖ್ಯಮಂತ್ರಿಗಳು ಘೋಷಿಸಿದಾಗ, ಅವರ ದಿಟ್ಟತನ, ಅವರು ಇಟ್ಟ ಹೆಜ್ಜೆಯನ್ನು ನೋಡಿ ಬಹಳ ಹರ್ಷವಾಯಿತು. ಕರ್ನಾಟಕ ಎಂಬುದು ಮಧುರವಾದ ಹೆಸರು.

[*Madam Speaker in the Chair*]

ಕರ್ನಾಟಕ, ಎನ್ನುವುದರೊಳಗೆ ಪದ ಭೇದವಿದೆ. ಕರ್ನಾಟಕದಲ್ಲಿ 'ಣ' ಇದ್ದುದು ಸಮಂಜಸವಲ್ಲ. ಏಕೆಂದರೆ, ತರುಣ, ತರುಣಿ, ಶೆಗಣಿ, ಇಂಥಾದ್ದು ಅರ್ಥವಾಗುತ್ತದೆ. ಆದ್ದರಿಂದ ಇದು ಅಷ್ಟು ಸಮರ್ಪಕ್ರವಾದುದು ಅಲ್ಲ. ಇದು ಜನರಿಗೆ ಕೇಳಲು ಮಧುರವಾದುದು ಅಲ್ಲ ಎಂದು ನನ್ನ ಅಭಿಪ್ರಾಯ. ಇನ್ನು ಕರ್ನಾಟಕ ಎನ್ನುವುದರಲ್ಲಿ ಮಧುರವಾದಂಥ ಅರ್ಥವಿದೆ. ''ನ'' ತನು, ಮನ, ಧನ ಎಂಬ ಪದಗಳ ಕೊನೆಯಲ್ಲಿ 'ನ' ಬರುತ್ತದೆ, ಇದು ಮೂರು ಕೋಟಿ ಜನರಿಗೆ ಒಂದು ಮಧುರವಾದಂಥ ಶಬ್ದ. ಆದ್ದರಿಂದ ನಮ್ಮ ನಾಯಕರು ಹೇಳಿದಂತೆ, ಒಮ್ಮತದಿಂದ, ಕರ್ನಾಟಕ ಅಂಥ ಹೆಸರು ಘೋಷಿಸುವುದಕ್ಕೆ ಬೆಂಬಲ ಕೊಟ್ಟಂಥ ಎಲ್ಲರಿಗೂ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ ತತ್ರಕಾರವಾಗಿ, ಕನ್ನಡ ನಾಡು ಇದರಲ್ಲಿ ಒಂದು ಭಾಷೆಯ ನಾಡು ಎಂದು ಅರ್ಥವಾಗುತ್ತದೆ. ೧ನೇ ನವಂಬರ್ ೧೯೫೬ ರಿಂದಲೂ ನಮ್ಮ ಜನರಲ್ಲಿ ಭಾವೈಕ್ಯತೆ ಇಲ್ಲದೆ ಇದ್ದುದರಿಂದ ಇದು ಆಗ ಆಗಲಿಲ್ಲ. ಈಗ ಜನರಲ್ಲಿ ಭಾವೈಕ್ಯತೆ ಉಂಟಾಗಿದೆ, ಆದ್ದರಿಂದಲೇ ಇದನ್ನು ಕರ್ನಾಟಕ ಎಂದು ಎಲ್ಲರೂ ಒಪ್ಪಿಕೊಂಡು ಘೋಷಿಸಿದ್ದಾರೆ. ಅದಕ್ಕೆ ತಮ್ಮೆಲ್ಲರ ಬೆಂಬಲವನ್ನು, ವಿರೋಧಪಕ್ಷದ ಸದಸ್ಯರೂ ಸಹ ನೀಡಿದ್ದಾರೆ ಆದ್ದರಿಂದ ಮೈಸೂರಿಗೆ ಕರ್ನಾಟಕ ಎಂದು ಹೇಳಬೇಕು. ಇನ್ನು ಹೆಚ್ಚಾಗಿ ಹೇಳಬೇಕಾದರೆ, ನಮ್ಮ ವಿಜ್ಞಾನ ಯುಗದಲ್ಲಿ ಒಂದು ವಿಶೇಷವಾದಂಥ ಇತಿಹಾಸವನ್ನು ನಿರ್ಮಿಸಿದ ದಿಟ್ಟ ವೀರರು ಎಂದರೆ, ಶ್ರೀ ದೇವರಾಜ ಅರಸ್ ಅವರು: ಎಂದು ಹೇಳಿದರೆ, ತಪ್ಪಾಗಲಾರದು. ಇದನ್ನು ನಾನು ನೀವು ಧೈರ್ಯವಾಗಿ ಹೇಳಬಹುದು. ಇನ್ನು ಭಾರತೀಯ ಸಂಸ್ಕೃತಿ ಯಲ್ಲಿ ಒಂದು ವಿಶೇಷವಾದಂಥ ಮಹತ್ವ ಇದೆ. ಅದು ಏನೆಂದರೆ, ನಮ್ಮಲ್ಲಿ ಒಳ್ಳೆಯ ಮಹಾತಾಯಿಯ ಹೊಟ್ಟೆಯಲ್ಲಿ ಹುಟ್ಟಿದಂಥ ಮಗುವಿಗೆ ನಾಮಕರಣ ಮಾಡಬೇಕಾಗಿದ್ದರೆ, ಊರ ಹಿರಿಯ ಜನರನ್ನು, ಅನೇಕ ಪಂಡಿತರನ್ನು ಎಲ್ಲರನ್ನು ಕರೆದು ಮಗು ಹುಟ್ಟಿದ ೧೧ನೇ ದಿವಸ ಮನೆಯ ಜನರಲ್ಲಿ ಆ ಹೆಸರು ಇಡಬೇಕು, ಈ ಹೆಸರು ಇಡಬೇಕು ಎಂದು ಧೀರ್ಘವಾದ ಚರ್ಚೆಯು ನಡೆಯುತ್ತದೆ. ಒಂದು ನಿರ್ಧಾರ ಮಾಡಬೇಕಾದರೆ ಕೆಲವು ದಿನ ಹೋಗಬೇಕಾಗುತ್ತದೆ ಅದೇ ರೀತಿಯಲ್ಲಿ ಈಗ ೧೬ ವರ್ಷಗಳು ಕಳೆದ ಅನಂತರ, ಹಿರಿಯರು ಹೇಳಿದಂತೆ ಕರ್ನಾಟಕ ಎನ್ನುವ ಹೆಸರು ಯುಗ ಯುಗದಿಂದ ಇದ್ದುದರಿಂದ, ಇದೇ ಹೆಸರು ಇಡಬೇಕು ಎಂದು ಕವಿಗಳು, ಪಂಡಿತರು, ಸಂಸ್ಕಾರವುಳ್ಳವರು ಹೇಳುವುದರಿಂದ, ಅದೇ ಹೆಸರನ್ನು ಇಡಲಿಕ್ಕೆ ಒಪ್ಪಿ ಸಿದ್ಧರಾಗಿ ಬಂದಿದ್ದಾರೆ. ಮಹಾತಾಯಿಯಾದಂಥ ಶ್ರೀಮತಿ ನಾಗರತ್ನಮ್ಮ

(ಶ್ರೀಮತಿ ರಾ. ಕಾಂ. ಮಹಬಲೇಶ್ವರ ಭಟ್ಟ)

ಪೀತಾಂಬರಧಾರಿಯಾಗಿ ಸಿಂಹಾಸನದಲ್ಲಿ ಕುಳಿತುಕೊಂಡು ಅವರ ಮಡಿಲಿನ ತೊಟ್ಟಿಲಿನಲ್ಲಿ ಜೋಗುಳ ಹಾಡಿ, ಜೈ ಕರ್ನಾಟಕ ಎಂದು ಹಾಡಿ ಹರಸಿದ್ದಾರೆ. ಅವರ ಅಭಿಪ್ರಾಯವನ್ನು ಅನುಮೋದಿಸಿ ಈ ಹಿನ್ನಲೆಯಲ್ಲಿ ಕರ್ನಾಟಕ ಮಾತೆ ನಮಗೆಲ್ಲರಿಗೂ ಆಯುಷ್ಯ, ಆರೋಗ್ಯ ಕೊಡಲಿ ಎಂದು ಆ ಮಾತೆಯಲ್ಲಿ ಪ್ರಾರ್ಥಿಸಿ ಕೊಂಡು, ಈ ದಿಟ್ಟ ಹೆಜ್ಜೆಯನ್ನು ಇಟ್ಟ ಮಂತ್ರಿವರ್ಯರಿಗೆ ನಾವೆಲ್ಲರೂ ಬೆಂಬಲಿಗರಾಗಿ ಇರೋಣ ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

‡ ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಅಧ್ಯಕ್ಷರೇ, ನಾನು ಸರ್ಕಾರದ ವತಿಯಿಂದ ಮಂಡಿಸಿ ದಂಥ ನಿರ್ಣಯಕ್ಕೆ ಎಲ್ಲಾ ಕಡೆಯಿಂದಲೂ, ಎಲ್ಲಾ ಪಕ್ಷಗಳಿಂದಲೂ ಸರ್ವತೋಮುಖವಾದ ಬೆಂಬಲ ಬಂದಿರತಕ್ಕದ್ದು ನನಗಂತೂ ಬಹಳ ಸಂತೋಷ ಉಂಟುಮಾಡಿದೆ. ನೆನ್ನೆ ನಾನು ಸಭೆಯಲ್ಲಿ ಇರುವುದಕ್ಕೆ ಸಾಧ್ಯವಾಗಿರಲಿಲ್ಲ ಮೊನ್ನೆ ದಿವಸ ನಡೆದಂಥ ಸಭೆಯ ಕಾರ್ಯಕಲಾಪಗಳಲ್ಲಿ ಭಾಗ ವಹಿಸಿದ್ದೆ. ನಮ್ಮ ಮಾನ್ಯ ಸಭೆಯ ಸದಸ್ಯರೆಲ್ಲರೂ ಮಾತನಾಡಿದ್ದನ್ನು ನಾನು ಕೇಳಿದ್ದೇನೆ. ಇಂದು ಕೂಡ ನಮ್ಮ ಅನೇಕ ರಾಜಕೀಯ ಪಕ್ಷದ ಮುಖಂಡರುಗಳು ಮಾತನಾಡಿದ್ದು ಲಾಲಿಸಿ ಕೇಳಿದ್ದೇನೆ. ನಾನು ಮೊದಲೇ ಈ ಸಭೆಯಲ್ಲಿ ಅರಿಕೆ ಮಾಡಿಕೊಂಡ ಹಾಗೆ ಏನಾದರೂ ಇಲ್ಲಿ ಸ್ವಲ್ಪ ಭಿನ್ನಾಭಿಪ್ರಾಯ ಇದ್ದರೂ. ಹೆಸರು ಬದಲಾವಣೆ ಆಗತಕ್ಕ ಕಾಲದಲ್ಲಿ ಮನಸ್ಸಿಗೆ ಸ್ವಲ್ಪ ನೋವು ಆದಂಥವರು ಕೂಡ ಅಂತಿಮವಾಗಿ ನಿರ್ಣ ಯಕ್ಕೆ ಬೆಂಬಲ ಕೊಟ್ಟಿದ್ದಾರೆ, ಮತ್ತು ಬದಲಾವಣೆಯನ್ನು ಸ್ವಾಗತಿಸಿದ್ದಾರೆ. ನಾವು ಕರ್ನಾಟಕ ಎಂಬ ಹೆಸರು ಇಡಬೇಕು ಎಂಬುದನ್ನು ಕೂಡ ಒಪ್ಪಿದ್ದಾರೆ. ಆದಕಾರಣ ೩ ದಿವಸಗಳಿಂದ ಮಾತನಾಡಿ ತಮ್ಮ ಹೃದಯದಿಂದ ಬಂದ ಬೆಂಬಲವನ್ನು ಕೊಟ್ಟಂಥ ಮಾನ್ಯ ಸದಸ್ಯರಿಗೂ, ಈ ಚರ್ಚೆಯಲ್ಲಿ ಭಾಗ ವಹಿಸದೆ ಮೌನದಿಂದ ಕುಳಿತು ಮಾತುಗಳನ್ನು ಕೇಳಿದವರಿಗೂ ಮತ್ತು ಮೌನದಿಂದಲೇ ಬೆಂಬಲ ಕೊಟ್ಟಂಥ ಎಲ್ಲಾ ಸದಸ್ಯರಿಗೂ ನನ್ನ ಧನ್ಯವಾದಗಳನ್ನು ಅರ್ಪಿಸುವುದಕ್ಕೆ ನಾನು ಅಪ್ಪಣೆ ಬೇಡುತ್ತೇನೆ. ಈ ಸಂದರ್ಭದಲ್ಲಿ ನಾನು ಈ ನಿರ್ಣಯವನ್ನು ಮಂಡಿಸುವುದಕ್ಕೆ ಮನಸ್ಸು ಮಾಡಿದ್ದಕ್ಕಾಗಿ ಅಥವಾ ತಂದಿದ್ದಕ್ಕಾಗಿ ನನ್ನ ಬಗ್ಗೆ ಕೆಲವರು ಒಳ್ಳೆಯ ಭಾಷಣವನ್ನು ಮಾಡಿದ್ದಾರೆ. ಮೆಚ್ಚಿಗೆಯನ್ನು ನನ್ನ ಮಿತ್ರರು, ಎದುರು ಪಕ್ಷದಲ್ಲಿ ಇರತಕ್ಕ ನಾಯಕರು ವ್ಯಕ್ತಪಡಿಸಿದ್ದಾರೆ. ಅವರಿಗೂ ನಾನು ಋಣಿಯಾಗಿದ್ದೇನೆ. ಈ ಸಂದರ್ಭದಲ್ಲಿ ಒಂದು ಮಾತು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ ನಮ್ಮ ಬಿಜಾಪುರ, ಜಮಖಂಡಿ ಕ್ಷೇತ್ರ ದಿಂದ ಬಂದಿರತಕ್ಕ ಸ್ನೇಹಿತರು ಹೇಳಿದ ಮಾತು. ಇಂತಹ ಕಾರ್ಯಗಳು ಆಗುವಾಗ ನಾವು ಒಂದೊಂದು ಕಾಲಕ್ಕೆ ನಿಮಿತ್ತವಾಗುತ್ತೇವೆ ಅಷ್ಟೇ ಎಂದು ನಾನು ತಿಳಿದುಕೊಂಡಿದ್ದೇನೆ. ಇದು ನನಗೆ ವೈಯುಕ್ತಿಕವಾಗಿ ಹೆಮ್ಮೆ ಎಂದು ಅಲ್ಲ. ನಾನು ಒಂದು ನಿಮಿತ್ತವಾಗಿದ್ದೇನೆ. ಅದಕ್ಕೆ ಈ ಸಂದರ್ಭ ಕಾರಣವಾಗಿದೆ. ಇದ ರಿಂದ ಬರತಕ್ಕ ಕೀರ್ತಿ ಮತ್ತು ಮೆಚ್ಚಿಗೆ ಇಡೀ ನಮ್ಮ ಸಭೆಗೆ ಸೇರಿದ್ದು ಎಂದು ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಅದರಲ್ಲಿ ನಾನೂ ಒಬ್ಬ ಇದ್ದೇನೆ ಅಷ್ಟೆ. ವೈಯಕ್ತಿಕವಾಗಿ ನನ್ನ ಒಂದು ಪ್ರತಿಷ್ಠೆ ಏನೂ ಇದರಲ್ಲಿ ಇಲ್ಲ. ನಾನು ಮೊದಲೇ ತಿಳಿಸಿದ ಹಾಗೆ ಜನರು ಏನು ಆಸೆ ಪಡುತ್ತಿದ್ದರು, ಅವರ ಭಾವನೆಗಳು ಏನು ಇವೆ ಅದರಂತೆ ನಡೆದಿದ್ದೇನೆಂಬುದು ನನ್ನ ನಂಬಿಕೆ ಶ್ರೀಮಾನ್ ಕೃಷ್ಣ ರವರು ಒಂದು ಮಾತನ್ನು ತಿಳಿಸಿದರು. ಭಾವನೆ ಇರಬಹುದು, ಅದನ್ನು ತಿಳಿದು ನಡೆಯುವುದಕ್ಕೆ ಸ್ವಲ್ಪ ಧೈರ್ಯ ಬೇಕು ಎಂದು. ಅದು ಸ್ವಲ್ಪಮಟ್ಟಿಗೆ ನಿಜ. ಅವರು ಹೇಳಿದ್ದು ಮೊದಲು ರಾಜಕೀಯದಲ್ಲಿ ಜನತೆಯ ಅಭಿಪ್ರಾಯವನ್ನು ತಿಳಿಯತಕ್ಕಂಥದ್ದರಲ್ಲಿ ಸ್ವಲ್ಪ ಜಾಣ್ಮೆ ಬೇಕು. ಪಲ್ಸ್ ಆಫ್ ದಿ ಪೀಪಲ್ ಏನಿದೆ ಅದನ್ನು ತಿಳಿದು ಅದರಂತೆ ನಡೆಯುವುದಕ್ಕೆ ಸ್ವಲ್ಪ ಧೈರ್ಯ ಬೇಕು. ಧೈರ್ಯಕ್ಕೆ ಹಿನ್ನಲೆ ತಿಳುವಳಿಕೆ. ತಿಳುವಳಿಕೆ ಇಲ್ಲದೆ ಧೈರ್ಯ ಬರುವುದಿಲ್ಲ. ಮತ್ತೆ ನಡೆದ ವಿಚಾರವನ್ನು ಸರಿಯಾಗಿ ತಿಳಿದುಕೊಳ್ಳಬೇಕಾದರೆ ನಿರ್ವಿಕಾರವಾದ ಮನಸ್ಸು ಬೇಕು. ಈ ವಿಷಯದಲ್ಲಿ ನಾನು ಒಂದು ನಿರ್ವಿಕಾರದೃಷ್ಟಿಯಿಂದ ನೋಡಿಕೊಂಡು ಬಂದಿದ್ದೇನೆ. ಆದುದರಿಂದ ಜನತೆ ಅಭಿಪ್ರಾಯ ಏನು ಇದೆ ಅದನ್ನು ನೋಡಿ ಹಾಗೆ ಮುನ್ನಡೆಯುತ್ತಿದ್ದೇನೆ ಎಂದು ನನ್ನ ತಿಳುವಳಿಕೆ ಪ್ರಕಾರ ಗೊತ್ತಾಗಿದ್ದು ಅದರಂತೆ ನಡೆಯುವುದಕ್ಕೆ ಧೈರ್ಯ ಮಾಡಿದೆ ಅಷ್ಟೇ. ಇವೊತ್ತಿನ ಪತ್ರಿಕೆಯಲ್ಲಿ ರಾಜಾಜಿಯವರ ಹೇಳಿಕೆ ಬಂದಿದೆ. ನಾನು ಡೆಕ್ಕನ್ ಹೆರಾಲ್ಡ್‌ನಲ್ಲಿ ಓದಿದ್ದೇನೆ. ಅವರು ಕರ್ನಾಟಕದ ಬಗ್ಗೆ ಈ ರೀತಿ ಹೇಳಿದ್ದಾರೆ.

Deccan Herald, ... Dated 27th July 1972.

RAJAJI UNABLE TO FIND ORIGIN OF 'KARNATAKA'

Madras, July 26.—Swatantra leader C. Rajagopalachari is unable to find out the origin of the word "Karnataka', the new name proposed for Mysore State.

"Karnataka is not the name of any region in India nor the denomination by which any language is known," he said in his article in the current issue of "Swarajya".

He said the addition of North and South Kanara did not justify the giving up of the old name—Mysore - which had a reference to the Goddess Chamundi overcoming the Mahishasura.

Karnatak music as distinguished from Hindustani music had also no reference to Mysore or North or South Kanara or Mangalore, Mr. Rajagopalachari said—UNI.

ನಾನು ಅವರ ಕಾಲದಲ್ಲಿ ಮಾಡಿದ್ದ ನಮ್ಮ ಮೈಸೂರು ಗೆಜೆಟೀರನ್ನು ಸಹಾ ಓದಿ ಅದರ ಹಿನ್ನೆಲೆ ಏನಿದೆ ನೋಡೋಣ ಮತ್ತು ನಮ್ಮ ಹಿರಿಯರು ಏನು ಹೇಳಿದ್ದಾರೆ ಅದನ್ನು ತಿಳಿಯಬೇಕು ಎಂದು ಇವನ್ನೆಲ್ಲಾ ಓದಿ ನೋಡಿದ್ದೇನೆ. ಇದನ್ನು ಪುನಃ ನೋಡೋಣ ಎಂದು ಇಲ್ಲಿ ಎಲ್ಲ ವಾಲ್ಯೂಂಗಳನ್ನೂ ತರಿಸಿ ನನ್ನ ಮುಂದೆ ಇಟ್ಟುಕೊಂಡಿದ್ದೇನೆ. ಶ್ರೀ ರಾಜಾಜಿಯವರು ಎಲ್ಲೂ ಇಲ್ಲ ಎನ್ನುವ ಮಾತನ್ನು ಏಕೆ ಹೇಳಿದ್ದಾರೋ ನನಗೆ ಗೊತ್ತಿಲ್ಲ. ನಮ್ಮ ಮುಂದೆ ಇರುವ ವಿಚಾರವಂತೆ ಕರ್ನಾಟಕ ಎನ್ನುವ ನಾಮಾಂಕಿತ ಹಿಂದೆ ಎಲ್ಲೂ ಇರಲೇ ಇಲ್ಲ ಎಂದಲ್ಲ. ಅಥವಾ ಮೈಸೂರು ಮಹಿಷಾಪುರಿ ಇದರಲ್ಲಿ ಹಾವೆ ಇರಲಿಲ್ಲ ಎಂದಲ್ಲ. ಇದರ ಬಗ್ಗೆ ನಾನು ಹೇಳುತ್ತಿರುವುದು ಎಲ್ಲವೂ ಒಂದು ಹೆಸರು ಇರಬೇಕು ಎಂದು ಅಪೇಕ್ಷೆ ಪಟ್ಟಾಗ ಆ ಹೆಸರನ್ನು ಏತಕ್ಕೆ ಇಡಬಾರದು? ಹಿಂದೆ ಇದ್ದ ಹೆಸರಿನಲ್ಲೇನೋ ಕೆಟ್ಟದ್ದಾಯಿತು, ಈ ಹೆಸರಿನಿಂದ ಒಳ್ಳೆಯದಾಗುತ್ತದೆ ಎನ್ನುವ ವಿಚಾರವಲ್ಲ. ಜನತೆ ಈ ಅಭಿಪ್ರಾಯಕ್ಕೆ ಬರುವುದಕ್ಕೆ ಕಾರಣ ಹೊರಗಿನಿಂದ ಬಂದು ಸೇರಿದ ಭಾಗಗಳಲ್ಲಿ ಇದೂ ಒಂದು ಭಾಗ ಆದುದರಿಂದ ಮೈಸೂರು ಎಂದು ಎಲ್ಲಾ ಭಾಗಗಳಿಗೂ ಅನ್ವಯಿಸುವಂತೆ ಇರುವುದು ಸರಿಯಾದುದಲ್ಲ ಇದನ್ನು ಸೂಕ್ತವಾಗಿ ಬದಲಾವಣೆ ಮಾಡುವುದು ಯೋಗ್ಯ ಎಂದು ಬಹುದಿನಗಳಿಂದಲೂ ವ್ಯಕ್ತಪಡಿಸಿಕೊಂಡು ಬಂದಿದ್ದಾರೆ. ನಾನು ಮೊದಲೇ ಹೇಳಿದ ಹಾಗೆ ಹಳೆಯ ಮೈಸೂರು ಎಂದು ಮಾಡಿರುವುದು ಜಾತಿಯ ಆಧಾರದ ಮೇಲೆ ಎಂದು ಕೆಲವರು ಹೇಳುವುದು ಸರಿಯಲ್ಲ. ಇದರ ಬಗ್ಗೆ ಸಾಹಿತಿಗಳೂ ಇದ್ದಾರೆ. ಸಾಹಿತಿಗಳು ಹಾಗೂ ನಾವೆಲ್ಲರೂ ಒಂದೇ ಜಾತಿಯವರೇ. ನಮ್ಮ ಸದಸ್ಯರಾದ ಮಾನ್ಯ ಶ್ರೀ ಕೃಷ್ಣನ್‌ರವರು ಹೇಳಿದ ಹಾಗೆ ಕಾರ್ಮಿಕರೆಲ್ಲಾ ಒಂದೇ ಜಾತಿಗೆ ಸೇರಿದವರಾಗಿದ್ದರು ಎಂದರೆ ಅವರೆಲ್ಲಾ ಒಂದೇ ವರ್ಗಕ್ಕೆ ಸೇರಿದವರು. ಇದನ್ನು ನಾನೂ ಕೂಡ ಒಪ್ಪಿಕೊಂಡು ಬಂದಿದ್ದೇನೆ. ಆದುದರಿಂದ ಎಲ್ಲರೂ ಸಾಮೂಹಿಕವಾಗಿ ಇಂತಹ ಒಂದು ಹೆಸರನ್ನು ಇಡಬೇಕೆಂದು ಒಪ್ಪಿ ಇಲ್ಲಿ ನಿರ್ಣಯವನ್ನು ಮಂಡಿಸಿರತಕ್ಕುದ್ದು. ಜಾತಿಯ ಆಧಾರವಾದ ಯಾವ ಹಿನ್ನೆಲೆಯೂ ಇವರಲ್ಲಿಲ್ಲ. ಆದರೆ ಎಲ್ಲರೂ ಹೇಳುತ್ತಾರೆ ಎಂದು ಹೇಳಿದರೆ ಪ್ರತಿಯೊಂದನ್ನೂ ಒಪ್ಪುವುದಕ್ಕೆ ಸಾಧ್ಯವಿಲ್ಲದೆ ಇರಬಹುದು.

ನಮ್ಮ ಮೈಸೂರು ದೇಶದ ಚರಿತ್ರೆಯನ್ನು ಹೊರ ದೇಶದವರೊಬ್ಬರು ಎಂದರೆ ಶ್ರೀ ವಿಲ್ಕ್ಸ್ ಎನ್ನುವವರು ಬರೆದಿದ್ದಾರೆ, ಇದರಲ್ಲೂ ಕೂಡ ಕರ್ನಾಟಕ ಎನ್ನುವ ಹೆಸರು ಹೇಗೆ ಇದೆ ಎನ್ನುವ ಮಾತೂ ಒಂದಿದೆ, ಮತ್ತೆ ಇದನ್ನೇ ಆಧಾರವಾಗಿಟ್ಟುಕೊಂಡು ಹಿಂದೆ ಶ್ರೀಮಾನ್ ಹಯವದನರಾಯರು ಮೈಸೂರು ಗೆಜೆಟೀರ್‌ನಲ್ಲೂ ಬರೆದಿದ್ದಾರೆ ಅವರು ಬರೆದಿರುವ ಎಂಟು ವಾಲ್ಯೂಂಗಳನ್ನೂ ನಾನು ನೋಡಿದ್ದೇನೆ ಇದರಲ್ಲಿ ಅನೇಕ ವಿಚಾರಗಳ ಬಗ್ಗೆ ಸ್ವಲ್ಪ ವಿವರಗಳಿವೆ. These books are worth possessing by the Hon. Members of this House and the Upper House. For all the 8 volumes they charge only Rs, 15.

ನಮ್ಮ ಸ್ನೇಹಿತರು ಒಬ್ಬರು ಹೇಳಿದ ಹಾಗೆ ಪ್ರತಿಯೊಬ್ಬರೂ ರಾಜಕೀಯದಲ್ಲಿರುವವರು ಆಯಾ ಭಾಗದ ಜನತೆಯ ಭಾಷೆ ಹಾಗೂ ಅದರ ಚಾರಿತ್ರಿಕ ಹಿನ್ನೆಲೆಯನ್ನು ತಿಳಿದುಕೊಂಡಿರಬೇಕು, ಇದು ಬಹು ಉಪಯುಕ್ತವಾಗುತ್ತದೆ, ಎಲ್ಲರೂ ಇದರ ಕಾಪಿಗಳನ್ನು ಪಡೆಯುವುದು ಸೂಕ್ತ ಎಂದು ನನ್ನ ಭಾವನೆ. ಮಾನ್ಯ ಸದಸ್ಯರಿಗೆ ಬೇಕಾದರೆ ಇವೆಂಟು ವಾಲ್ಯೂಂಗಳೂ ಬೆಲೆಗೆ ಸಿಗುತ್ತವೆ. ಇದು ಇಂಗ್ಲಿಷಿನಲ್ಲಿದೆ ಮತ್ತು ಇದರ ಬೆಲೆ ಎಲ್ಲಾ ವಾಲ್ಯೂಂಗಳೂ ಸೇರಿ ೧೫ ರೂಪಾಯಿ ಮಾತ್ರ, ಇದೇ ರೀತಿ ಶ್ರೀಮಾನ್ ಹಯವದನ ರಾಯರು ಹಿಸ್ಟರಿ ಆಫ್ ಮೈಸೂರು ಎಂದು ಮೈಸೂರು ಗೆಜೆಟೀರು ವಾಲ್ಯೂಂ ಒಂದು ಪುಟ ೨೫೪ ರಲ್ಲಿ ಹೀಗೆ ಹೇಳುತ್ತಾರೆ:—

(ಶ್ರೀ ಡಿ. ದೇವರಾಜ್ ಅರಸ್)

"*Karnalaka Derivation* : The derivation of Karnata and its quasi-adjectival form Karnataka, is uncertain. Dr. Gundert has proposed Kar-Nadu, "the black country," as the original form of Karnata, inallusion to the black cottom soil of the plateau of the Southern Dekhan. Trivikrama Bhatta, the author of Nalachampu (10th Century) and his commentator appear to have been familiar with the Kannada language. While interpreting the woid Nashta Charya, the commentator gives Kannumuchchale (hide and seek) as its anarese equivalent. Again, while giving the meaning of 'Paribhasha,' he takes it to mean Karnata and other languages. Trivikrama Bhatta himself uses the word Karnatachetti, servant girl of the Karnata country, showing thereby his acquaintance with the Kannada people and their country. Other scholars have suggested that Karnata is derived from Karu-Nadu. "the elevated country," with reference to the height of the plateau above the sea-level. Kannada is supposed by the Indian Grammarians to be a Tadbhava formed from Karnata, though it is more likely that the latter is a Sanskritised from of the original Kannada. Sir Walter Elliot was inclined to connect Karnata with Karna or Karni, as in Satakarni, the family name of the early rulers before and after the Christianera. The Rev. F. Kittel states that Kan means blackness. In the Meckenzie MSS the derivation of Karnataka is given as Karna ataka, "pleasing to the ears" of all men, and hence applied to "this honoured and renowned country." The same derivation also appears in the Visvagunadarsa, a work assigned to the 18th century. Mr. Rice wrote thus in the last edition of this Gazetteer : "if a heterogeneous compound be permissible-of which there are many examples, and for which there are special rules in the language Karnata might, perhaps, be Karnata, amusing or pleasing to the ear; the " sweet musical Canarese" of Colonel Meadows Taylor. ... ... "

The name Karnataka occurs as early as the 6th Century in Varahamihira's Brihatsamhita and its mention in Somadeva's KATHASARITSAGARA, probably due to its being mentioned in his source, *viz.*, the PAISACHI BRIHATKATHA of Gunadhya, carries it further back to the earliest centuries of the Christian era. It also occurs in the form KANNADAR in the Tamil poem named SILAPPA DHIKALAM, which is supposed to go back to the second or third century A. D. and in the form KARUNADAGAN in the Velvikudi plates (c. 770) of the Pandya King Parantaka. The Sanskrit poet Rajasekhara (c. 900) refers in his KAVYAMIMAMSA to the mannerisms of the Karnatakas in reading their books. In this form it occurs in Trivikramabhatt's NALACHAMPU, which cannot be later than the 10th century A. D., as it is quoted by Dhara in his SARASVATI KANTHABHARANA Alberuni (c. 1030) uses Karnataka as if a general

term for the South. For, in describing the limits within which a Brahman might reside, he says :—

"He is obliged to dwell between the river Sindh in the north and the river Charmanvati (the Chambal in the South," He is not allowed to cross either of these frontiers so as to enter the country of the Turks or of the Karnataka. Further, he must live between the ocean in the East and West."

ಹೀಗೆ ಕರ್ನಾಟಕ ಅನ್ನೋ ಹೆಸರಿಗೆ ಆಧಾರಗಳಿವೆ. ಆದರೆ ಶ್ರೀ ರಾಜಾಜಿ ಅವರು ಕರ್ನಾಟಕ ಎನ್ನುವ ಬಗ್ಗೆ ಆಧಾರ ಇಲ್ಲ ಎಂದು ಹೇಳಿದ್ದಾರೆ. ಅವರು ಇದನ್ನೆಲ್ಲಾ ನೋಡಿದ್ದರೆ ಆ ರೀತಿ ಅವರು ಹೇಳುತ್ತಿರಲಿಲ್ಲ ಎಂದು ನನ್ನ ಭಾವನೆ.

Again, in the HISTORY OF MYSORE Vol. I by Sri Hayavadana Rao it is stated :—

"The Kadambas, the Gangas, the Chalukyas the Cholas, the Hoysalas and the Vijayanagar Emperors, among others, successively governed the country or parts of it leaving lestiges of their rule. Geographically, the country during these epochs, formed, as it does now, part of the Karnatak (Kar-nadu, Karnata, Kannada) being apparently a division of, or coterminous with the extensive tract variously referred to in inscriptions and other sources as Kuntala-desa, Erumai-nadu, Mahishamandala etc."

So, there are historic writings and instances to show that this land was once referred to as Karnataka Desa, Karu-nadu and Kunthala Desa.

ಅದೇ ರೀತಿಯಾಗಿ ಒಂದು ಕಾಲಕ್ಕೆ ಡೆಕ್ಕನ್‌ಪ್ಲೇಟೋ ಭಾಗವನ್ನೆಲ್ಲಾ ಕರ್ನಾಟಕ ಎಂದು ಹೇಳಿಬಿಟ್ಟಿದ್ದರು. ತದನಂತರ ಘಟ್ಟದ ಕೆಳಗಿನ ಪ್ರದೇಶ ಏನಿದೆ, ಅಂದರೆ ಮಂಗಳೂರಿನಿಂದ ಹಿಡಿದು ಈಸ್ಟ್ರನ್ ಘಾಟಿನ ತಳಭಾಗದ ಪ್ರದೇಶವನ್ನು ಒಂದು ಕಾಲದಲ್ಲಿ ಕರ್ನಾಟಕ ಎಂದು ಹೇಳುವುದನ್ನು ಬಿಟ್ಟರು. ಮತ್ತು ಆ ಭಾಗಕ್ಕೆ ಬೇರೆ ಹೆಸರನ್ನು ಇಟ್ಟು. ಘಟ್ಟದ ಮೇಲು ಭಾಗದ ಪ್ರದೇಶವನ್ನು ಕರುನಾಡು, ಕರ್ನಾಟ ಎಂದು ಹೇಳಿದರು. ದ್ರಾವಿಡ ಭಾಷೆ ಎಂದು ಏನು ಹೇಳುತ್ತೇವೆ ಅದನ್ನು ಒಂದು ಕಡೆ ಹೇಳಿದ್ದಾರೆ. ಕನ್ನಡ ಮತ್ತು ತಮಿಳು ಎರಡನ್ನೂ ಸೇರಿಸಿ ದ್ರಾವಿಡ ಭಾಷೆ ಎಂದು ಹೇಳುತ್ತಾ ಇದ್ದರು ಅನ್ನುವ ಮಾತು ಬಂದಿವೆ. ಮುಂದೆ ತಮಿಳು ಬೇರೆಯಾಗಿ ಉಳಿಯಿತು. ಕನ್ನಡ ಬೇರೆಯಾಗಿ ಉಳಿಯಿತು ಎಂದು ಇಲ್ಲಿ ಒಂದು ಕತೆ ಬಂದಿದೆ. ಈ ಮಾತನ್ನು ಹೇಳುವಾಗ ಯಾವುದೂ ಹೆಚ್ಚು ಕಡಿಮೆಯಾಗಿಲ್ಲ, ತಮಿಳು ಭಾಷೆಗೂ ಕನ್ನಡ ಭಾಷೆ 'ೂ ಸಂಬಂಧ ಇತ್ತು ಎಂದು ತಿಳಿಯುಬರುತ್ತದೆ. ಆದ್ದರಿಂದ ಭಾಷೆಯ ಮೇಲೆ ಜಗಳ ಿಡುವುದು ಸರಿಯಲ್ಲ. ಮಾನ್ಯ ಆರ್ಮುಗಂ ಅವರು ಸಹ ನಮ್ಮ ಸಹೋದರರು. Mr. Armugam is also our brother.

ಒಬ್ಬರು ಸದಸ್ಯರು.—ದ್ರಾವಿಡ ಭಾಷೆ ತಾಯಿ ಭಾಷೆ :

ಶ್ರೀ ಡಿ. ದೇವರಾಜ ಅರಸ್.—ಈ ಭಾಷೆಗಳಿಗೆಲ್ಲಾ ಸಂಸ್ಕೃತ ಮೂಲ.

ಹೀಗೆ ಇದಕ್ಕೆ ಚರಿತ್ರೆ ಆಧಾರ ಇದೆ ಎಂಬುದನ್ನು ಮಾತ್ರ ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟ ಪಡುತ್ತೇನೆ. ಬಹುಶಃ ಹಿರಿಯರಾದಂಥ ಶ್ರೀಮಾನ್ ರಾಜಗೋಪಾಲಾಚಾರಿಯವರು ಇದನ್ನು ನೋಡಿದ ಮೇಲೆ ಒಪ್ಪುತ್ತಾರೆಂದು ನನ್ನ ಭಾವನೆ. ಮತ್ತು ಅವರು ಇದನ್ನೆಲ್ಲಾ ನೋಡಿದಳೆ ಅವರ ಅಭಿಪ್ರಾಯವನ್ನು

(ಶ್ರೀ ಡಿ. ದೇವರಾಜ್ ಅರಸ್)

ಪುನರ್ವಿಮರ್ಶಿಸಿ ಪ್ರಾಯಶಃ ನಮ್ಮ ಅಭಿಪ್ರಾಯವನ್ನು ಒಪ್ಪುತ್ತಾರೆಂದು ನನಗೆ ಅನ್ನಿಸುತ್ತದೆ. ನಾವು ಹೆಸರು ಕರೆದಿದ್ದಾಯಿತು. ನಮ್ಮ ನಾಡಿಗೆ ಕರ್ನಾಟಕ ಎಂದು ಹೆಸರಿಡುತ್ತಿರುವುದರಿಂದ, ಎಲ್ಲರ ಭಾವೈಕ್ಯತೆಗೆ ಇದು ನಾಂದಿಯಾಗಿದೆ. ಅದೇ ರೀತಿ ಎಲ್ಲ ಜನರ ಹಿತಸಾಧನೆಗೆ ಶ್ರಮಿಸಬೇಕು ಎನ್ನುವ ಮಾತನ್ನು ಕೆಲವು ಸ್ನೇಹಿತರು ಹೇಳಿದ್ದಾರೆ. ನಾನು ನೆನ್ನೆ ದಿವಸ ಸಭೆಯಲ್ಲಿ ಇರಲಿಲ್ಲವಾದ್ದರಿಂದ ಒಬ್ಬಿಬ್ಬರು ಮಾನ್ಯ ಸದಸ್ಯರು ಇದರ ಬಗ್ಗೆ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದನ್ನು ನಾನು ಪತ್ರಿಕೆಯಲ್ಲಿ ಓದಿದೆ. ಮುಂದಿನ ಕಾರ್ಯಕ್ರಮದಲ್ಲಿ ಎಲ್ಲರನ್ನೂ ಒಟ್ಟಾಗಿ ತೆಗೆದುಕೊಂಡು ಹೋಗುವ ಬಗ್ಗೆ ಸರ್ಕಾರದ ಜವಾಬ್ದಾರಿ ಹೆಚ್ಚು ಇದೆ ಎಂದು ಕೆಲವು ಸ್ನೇಹಿತರು ಹೇಳಿದ್ದಾರೆ. ಅದೇ ರೀತಿ ಶ್ರೀಮಾನ್ ಆಮರ್ುಗಂ ಅವರು ಈಗತಾನೆ ಒಂದು ಮಾತನ್ನು ಹೇಳಿದರು ಏನೆಂದರೆ ಬಹುಸಂಖ್ಯೆಯುಳ್ಳ ಮತಗಳವರು, ಜಾತಿಯವರು ತಮ್ಮ ಕಣ್ಣಿನ ಹಾಗೆ ಇರಬೇಕು. ಬೆನ್ನುಮೂಳೆಯ ಹಾಗೆ ಇರಬೇಕು ಎಂದು. ಆ ಮಾತಿಗೆ ನಾವೇನೂ ವಿರೋಧ ಮಾಡುವ ಪ್ರಶ್ನೆಯೇ ಇಲ್ಲ ಅದನ್ನು ಯಾರೇ ಹೇಳಲಿ ಅಥವಾ ಬಿಡಲಿ ಅದು ಹಾಗೆಯೇ ಇರಬೇಕು. ಆದರೆ ಆ ಅನುಮಾನ ಏತಕ್ಕೆ ಬರುತ್ತಿದೆ ಎಂಬುದು ನನಗೆ ಅರ್ಥವಾಗಲಿಲ್ಲ. ಯಾವುದೋ ಒಂದು ಮತವನ್ನು ಅಥವಾ ಜಾತಿಯನ್ನು ವಿರೋಧ ಮಾಡುತ್ತಿದ್ದಾರೆ, ಹಿಂದಕ್ಕೆ ಹಾಕುತ್ತಿದ್ದಾರೆ ಎಂದು ಏನು ಕೆಲವು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ ಆ ಮಾತನ್ನು ನಾನು ಎಷ್ಟು ಯೋಚನೆ ಮಾಡಿದರೂ ಅರ್ಥವಾಗಲಿಲ್ಲ ?

ಶ್ರೀ ಕೆ. ಪ್ರಭಾಕರ್.—ನೋವು ತಿಂದವರು ಆ ಮಾತನ್ನು ಹೇಳುತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ನೋವು ಇಲ್ಲದವರು ನೋವಿದೆ ಅಂತ ಹೇಳುತ್ತಿದ್ದರೆ ಏನು ಮಾಡುವುದು ; ಯಾರೇ ಸರ್ಕಾರ ನಡೆಸಲಿ, ಸರ್ಕಾರಕ್ಕೆ ಪ್ರತಿಯೊಬ್ಬರೂ ಸಮಾನರೆ ; ಕಾನೂನಿಗೆ ಪ್ರತಿಯೊಬ್ಬರೂ ಅಧೀನರೆ. ಆ ರೀತಿ ಇರಬೇಕಾದರೆ ಯಾರೋ ಕೆಲವರನ್ನು ತುಳಿಯುತ್ತಾರೆ ಎಂದು ಹೇಳುವುದಕ್ಕೆ ಕಾರಣವೇನು ? ನನ್ನ ತಿಳಿವಳಿಕೆಯಲ್ಲಿ ಯಾವುದೇ ಒಂದು ಜಾತಿಯವರನ್ನು ತುಳಿಯುವಂತಹ ಕೆಲಸ ಯಾರಿಂದಲೂ ಆಗುತ್ತಿಲ್ಲ. ಅದು ಕೇವಲ ಭ್ರಾಂತಿಯ ಮಾತು.

ಅದು ರಾಜಕೀಯ ಕುಚೇಷ್ಟೆಯ ಮಾತು. ಯಾವ ಜಾತಿಯೇ ಆಗಲಿ ನಾವು ಜಾತಿಮತಗಳಿಗೆ ಕಾನೂನು ರೀತ್ಯಾ, ಕಾನ್‌ಸ್ಟಿಟ್ಯೂಷನ್ ರೀತ್ಯಾ ಎಷ್ಟು ಬೆಲೆ ಕೊಡಬಹುದೋ ಅಷ್ಟು ಕೊಡುವುದಕ್ಕೆ ಸಾಧ್ಯ ಅವರವರ ದೇವಾಲಯಗಳ ಬಗ್ಗೆ, ಅವರು ಪೂಜೆಮಾಡುವುದಕ್ಕೆ ಅವರ ಶಾಸ್ತ್ರ, ಅವರ ಪುರಾಣ ಮತ್ತು ಮಂತ್ರವನ್ನು ಹೇಳಿಕೊಂಡು ಅವರು ಪೂಜೆಮಾಡುವುದಕ್ಕೆ ನಮ್ಮ ಅಡ್ಡಿ ಇಲ್ಲ. ಈಗ ಮೊನ್ನೆ ಮೈಸೂರಿನಲ್ಲಿಗತಕ್ಕ ಒಂದು ವಿದ್ಯಾರ್ಥಿ ನಿಲಯಕ್ಕೆ ಸಂಬಂಧಪಟ್ಟಹಾಗೆ ಅಲ್ಲಿನ ವಿದ್ಯಾರ್ಥಿಗಳು ಜುಟ್ಟು ಬಿಟ್ಟರೆ ಮಾತ್ರ ನಾವು ಊಟಹಾಕುತ್ತೇವೆ ಇಲ್ಲದೇ ಹೋದರೆ ನಾವು ಊಟ ಹಾಕುವುದಿಲ್ಲ ಎಂದು ಆ ವಿದ್ಯಾರ್ಥಿನಿಲಯದ ಮ್ಯಾನೇಜಮೆಂಟಿನವರು ಹೇಳಿದರು ಎಂದು ಹೇಳಿ ಒಂದು ವಿಷಯ ಮೇಲ್ಮನೆಯಲ್ಲಿ ಬಂದಿತ್ತು. ಅದಕ್ಕೆಲ್ಲಾ ನಾವು ಏನೂ ಹೇಳುವುದಕ್ಕಾಗುವುದಿಲ್ಲ. ಅದು ಅವರ ಅಭಿಪ್ರಾಯ. ಈಗ ಭೂಮಿಯನ್ನೂ ಹಂಚಿಕೆ ಮಾಡಬೇಕಾಗಿದೆ. ಇದರಲ್ಲಿ ಯಾವ ಜಾತಿಯವರನ್ನು ತುಳಿಯುವುದಕ್ಕೆ ಸಾಧ್ಯವಿದೆ ? ಇದರಲ್ಲಿ ಬಡವರು ಮತ್ತು ಬಲ್ಲಿದರು ಎರಡು ಜಾತಿಗಳವರೂ ಇದ್ದಾರೆ. ಜನರ ಮನಸ್ಸಿನಲ್ಲಿ ದುಗುಡ ಏನಿತ್ತು ? ಕಾನೂನು ರೀತ್ಯಾ ಸರ್ಕಾರದ ಸವಲತ್ತುಗಳು ಯಾವ ಜನಗಳಿಗೆ ಸಲ್ಲಬೇಕೋ ಅದು ಅವರಿಗೆ ಸಲ್ಲುತ್ತಾ ಇಲ್ಲ ಎನ್ನತಕ್ಕಂಥಾ ದೂರು ದೇಶದಲ್ಲಿತ್ತು. ಈ ದೂರಿಗೆ ಕಾರಣ ಏನು ಎಂದರೆ ಈ ಕಾನೂನನ್ನು ಜಾರಿಗೆ ಕೊಡಬೇಕಾಗಿದ್ದವರು ಜಾತಿಯ ಹೆಸರಿನಲ್ಲಿ ಮೋಸಮಾಡುತ್ತಿದ್ದರು ಎನ್ನತಕ್ಕಂಥಾ ದೂರು ದೇಶದಲ್ಲಿತ್ತು. ಅಂಥಾ ದೂರನ್ನು ನಾವು ಕೇಳುತ್ತಾ ಇದ್ದು, ಈಗ ಅದು ಸರಿಯಲ್ಲ ಅದು ಬೇಡ ಎಂದು ನಾವು ಹೇಳುತ್ತಿದ್ದೇವೆ ಯಾರು ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಈ ವಿಷಯದಲ್ಲಿ ಸ್ಥಾನಮಾನ ಗಳಿಸಿದ್ದರೋ ಅವರು ಇತರರಿಗೆ ಮೋಸ ಮಾಡುತ್ತಿದ್ದರು. ಆ ಜನಗಳಿಗೆ ಈಗ ಬಾಯಿ ಕಟ್ಟಿದಹಾಗೆ ಆಗಿದೆ. ಅದಕ್ಕೋಸ್ಕರ ಅವರು ಈ ಮಾತನ್ನು ಹೇಳುವುದಕ್ಕೆ ಹೊರಟಿದ್ದಾರೆ. ಇದಕ್ಕೆ ನಾನು ಚಿಂತೆ ಮಾಡುತ್ತಾ ಇಲ್ಲ. ಈ ಸಂದರ್ಭದಲ್ಲಿ ಜನತೆಯ ಮುಂದೆ ಒಂದು ವಿಷಯವನ್ನು ತಿಳಿಸುವುದು ಅಗತ್ಯ ಎಂದು ನಾನು ಅದನ್ನು ತಿಳಿಸುತ್ತಿದ್ದೇನೆ. ಇದನ್ನು ನಮ್ಮ ಪಕ್ಷದವರಾಗಲೀ ಅಥವಾ ವಿರೋಧ ಪಕ್ಷದವರಾಗಲೀ ಎಲ್ಲರೂ ಒಪ್ಪುವ ಮಾತು. ನಿಮ್ಮ ಮತ್ತು ನಿಮ್ಮ ದಾರಿಯ ಬಗ್ಗೆ ವ್ಯತ್ಯಾಸ ಇರಬಹುದು. ನಾವು ಹೋಗತಕ್ಕಂಥಾ ಮಾರ್ಗ ಒಂದೊಂದು ವೇಳೆ ಸರಿಯಿಲ್ಲದಿರಬಹುದು. ಆದರೆ ನಮ್ಮ ಕರ್ತವ್ಯ, ನಮ್ಮ ಮತ್ತು ನಿಮ್ಮ ಗುರಿ ಒಂದೇ ಎಂದು ನಾನು ಭಾವಿಸುತ್ತೇನೆ. ದೇಶದಲ್ಲಿರುವ ಜಾತಿ ಒಂದೇ. ಅದು ಯಾವುದೆಂದರೆ ಬಡವರ ಜಾತಿ. ಇದನ್ನು ಎಲ್ಲರೂ ಒಪ್ಪುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಸಮಾಜವಾದದ ದೃಷ್ಟಿ ಇದು ಸಮಾಜವಾದ ತತ್ವವನ್ನು ಕೆಲವರು ವ್ಯಾಖ್ಯಾನಮಾಡಿದರು. ಸಮಾಜವಾದದ ತತ್ವ ಎಷ್ಟು ಪುಸ್ತಕಗಳನ್ನು ಓದಿದರೂ ಅರ್ಥವಾಗುವುದಿಲ್ಲ. ಮೊದಲು ಬಡವರ ಬಗ್ಗೆ ಅನುಕಂಪ

ಇರುವವರಿಗೆ ಭಾವನೆ ಮತ್ತು ಹೃದಯ ಪರಿವರ್ತನೆಯಾಗಬೇಕು. ಅದನ್ನು ಅರ್ಥಮಾಡಿಕೊಳ್ಳದ ಹೊರತು ಜನಗಳಿಗೆ ಸಮಾಜವಾದ ಅರ್ಥವಾಗುವುದಿಲ್ಲ. ನಾವು ಇತರರನ್ನು ನಮ್ಮ ಹಾಗೆ ಅವರೂ ಮನುಷ್ಯರು ಎಂದು ನಾವು ಯಾವದೃಷ್ಟಿಯಿಂದ ಇತರರನ್ನು ನೋಡುತ್ತೇವೆ ಅದರ ಮೇಲೆ ಇದು ನಿಂತಿದೆ. ಯಾವ ಮನುಷ್ಯನಿಗೆ ಹೃದಯ ಇರುವುದಿಲ್ಲ, ಅನುಕಂಪ ಇರುವುದಿಲ್ಲ, ಅವನು ಎಷ್ಟು ಪುಸ್ತಕ ಓದಿ ಸಮಾಜವಾದ ತಿಳಿದರೂ ಅದರಿಂದ ಪ್ರಯೋಜನವಿಲ್ಲ. ಆದರೆ ನಾನು ಅವರ ಮೋಟಿವ್ ಏನಿದೆ ಅದನ್ನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ ಆದ್ದರಿಂದ ಯಾರೋ ಕೆಲವು ಜಾತಿಗಳನ್ನು ತುಳಿಯುತ್ತಾರೆ ಎಂದು ಹೇಳಿದಂತಹ ಮಾತು ಏನಿದೆ ಅದು ಇದುವರೆಗೆ ಯಾರು ಇತರರನ್ನು ಶೋಷಿಸುತ್ತಿದ್ದರೋ ಅವರಿಗೆ ಈಗ ಚಾಯಿಕಟ್ಟಿದ ಹಾಗೆ ಆಗಿದೆ. ಅದಕ್ಕೆ ಯಾರೂ ಚಿಂತೆ ಮಾಡಬೇಕಾದ್ದು ಇಲ್ಲ. ಸೋಷಲಿಜಂ ಮಾತನಾಡಿದ ಮೇಲೆ ಸೆಕ್ಯುಲರಿಜಂ ಜೊತೆಯಲ್ಲಿ ಇರಬೇಕು. ಈ ಎರಡೂ ಒಂದು ನಾಣ್ಯದ ಎರಡು ಮುಖಗಳು ಇದ್ದ ಹಾಗೆ. ಈ ಮನೋಭಾವ ಎಲ್ಲಿಯುವರೆಗೆ ಬೆಳೆಯುವುದಿಲ್ಲ, ಅಲ್ಲಿಯುವರೆಗೆ ಯಾರಿಂದಲೂ ಸಮಾಜವಾದವನ್ನು ತರುವುದಕ್ಕೆ ಸಾಧ್ಯವಿಲ್ಲ. ಜಾತ್ಯಾತೀತ ಭಾವನೆ ಬೆಳೆಯಬೇಕಾದರೆ ನಾವು ಎಲ್ಲರನ್ನೂ ಒಂದೇ ರೀತಿಯಿಂದ ನೋಡಬೇಕು. ಆ ರೀತಿ ಕೆಲಸಮಾಡುವುದಕ್ಕೆ ಒಂದು ವಾತಾವರಣವನ್ನು ನಾವು ಕಲ್ಪನೆ ಮಾಡಬೇಕು. ನಾವು ಎಲ್ಲರನ್ನೂ ಒಂದೇ ರೀತಿ ನೋಡಬೇಕು ಎಂದು ಒತ್ತಿಒತ್ತಿ ಹೇಳುತ್ತಿದ್ದೇನೆ. ಇದುವರೆಗೆ ಕೆಲವು ಹಿತಾಸಕ್ತಿಗಳು ಇದ್ದು ಕೆಲವು ರೀತಿಯಲ್ಲಿ ಕೆಲವೇ ಜನರು ಅನೇಕ ವಿಧದಲ್ಲಿ ತಮ್ಮ ಸ್ವಾರ್ಥವನ್ನು ಬೆಳೆಸುತ್ತಿದ್ದರು. ಅವರು ಬಡ ಜನರನ್ನು ಶೋಷಣೆಮಾಡಿ ಆ ಬಡಜನರ ಒಂದು ಮೂಢತ್ವವನ್ನು ದುರುಪಯೋಗ ಮಾಡಿಕೊಂಡು ತಮ್ಮ ಸ್ವಾರ್ಥವನ್ನು ಬೆಳೆಸಿಕೊಳ್ಳುತ್ತಿದ್ದರು. ಅದನ್ನು ತಪ್ಪಿಸದಿದ್ದರೆ. ಅದಕ್ಕೆ ಅಡ್ಡಿ ತರದಿದ್ದರೆ ನಾವು ಸರ್ಕಾರವನ್ನು ನಡೆಸಿ ಪ್ರಯೋಜನವೇನು ಎಂದು ನಾನು ತಿಳಿದುಕೊಂಡಿದ್ದೇನೆ. ಈ ದೃಷ್ಟಿಯಲ್ಲಿ ಈಗ ಭೂಸುಧಾರಣೆ ಬರುತ್ತದೆ. ಅದು ಬಂದಾಗ ಭೂಮಿತಿಯನ್ನು ವಿಧಿಸುವ ಬಗ್ಗೆ ಕೆಲವರು ನೀವು ಮಾಡುವುದು ಕಡಿಮೆ ಎಂದು ಹೇಳುವವರಿದ್ದಾರೆ, ಇದರ ಬಗ್ಗೆ ನೀವು ಬಹಳ ಬೇಗ ಬೇಗ ಹೆಜ್ಜೆ ಇಡುತ್ತಾ ಇಲ್ಲ ಎಂದು ಹೇಳಬಹುದು. ಇದರಲ್ಲಿ ೧೦ ಎಕರೆ, ೨೦ ಎಕರೆ, ೧೦೦ ಎಕರೆ ಹೀಗೆ ಜಮೀನನ್ನು ಕಳೆದುಕೊಳ್ಳುವವರು ನಾಳೆ ನಮ್ಮನ್ನು ಏನೋ ಮಾಡುವುದಕ್ಕೆ ಹೊರಟಿದ್ದಾರೆ ಎಂದು ಹೇಳುತ್ತಾರೆ. ಈಗ ಜಮೀನು ಇರತಕ್ಕವರಲ್ಲಿ ಒಂದು ಜಾತಿಯವರಿಲ್ಲ, ಎಲ್ಲಾ ಜಾತಿಯವರೂ ಇದ್ದಾರೆ. ಆದ್ದರಿಂದ ಎಲ್ಲಾ ಜಾತಿಯವರೂ ಭೂಮಿಯನ್ನು ಕಳೆದುಕೊಳ್ಳಬೇಕಾಗುತ್ತದೆ. ಈಗ ಕಂಟ್ರಾಕ್ಟ್ ಕ್ಯಾರೇಜಸ್ ಮೇಲೆ ೩೫ ಪರ್ಸೆಂಟ್ ಟ್ಯಾಕ್ ಇದ್ದದ್ದನ್ನು ೧೦೦ ಪರ್ಸೆಂಟ್ ಮಾಡಿದೆ. ಕಾಂಟ್ರಾಕ್ಟ್ ಕ್ಯಾರೇಜ್‌ಗಳನ್ನು ಎಲ್ಲಾ ಜಾತಿಯವರೂ ಇಟ್ಟುಕೊಂಡಿದ್ದಾರೆ. ನಿಜವಾಗಿಯೂ ಯಾವುದೇ ಒಂದು ಕಾಲದಲ್ಲಿ ಅಲ್ಪಸ್ವಲ್ಪ ಸಾಮಾಜಿಕ ನ್ಯಾಯ ದೊರೆಯದೆ ಇದ್ದಂತಹ ಜನ ಬೇಕಾದಷ್ಟು ಜನ ನಮ್ಮ ದೇಶದಲ್ಲಿದ್ದಾರೆ. ಅದಕ್ಕಾಗಿ ಈಗ ಹರಿಜನರಿಗೆ, ಪರಿಶಿಷ್ಟ ವರ್ಗದವರಿಗೆ ಸಂವಿಧಾನದಲ್ಲಿ ಕೆಲವು ರಕ್ಷಣೆಗಳನ್ನು ಕೊಟ್ಟುಕೊಂಡು ಬಂದಿದ್ದಾರೆ. ಈಗ ಅವರು ಏನು ಹೇಳುತ್ತಿದ್ದಾರೆ ಎಂದರೆ ನೀವು ಕಾನೂನಿನಲ್ಲಿ ರಕ್ಷಣೆಯನ್ನು ಕೊಟ್ಟಿದ್ದೀರಿ, ಆದರೆ ಅದು ಕಾರ್ಯದಲ್ಲಿ ಬರುತ್ತಿಲ್ಲ ಎಂದು ಅವರು ಸರ್ಕಾರದ ಮೇಲೆ ಆಕ್ಷೇಪಣೆಮಾಡುತ್ತಿದ್ದಾರೆ ಹರಿಜನರ ವಿಚಾರವಾಗಲೀ, ಗಿರಿಜನರ ವಿಚಾರವಾಗಲೀ, ಮತ್ತು ಇತರ ಹಿಂದುಳಿದ ಜನಾಂಗಗಳ ವಿಚಾರವಾಗಲೀ ಅವರ ಆಕ್ಷೇಪಣೆ ಏನೆಂದರೆ ನಮಗೆ ಒಂದಲ್ಲ ಒಂದು ರೀತಿಯಲ್ಲಿ ಬರಬೇಕಾದಂತಹ ಸೌಕರ್ಯ, ಕಾನೂನಿನಲ್ಲಿರತಕ್ಕ ಸೌಕರ್ಯ ದೊರೆಯುತ್ತಿಲ್ಲ ಎಂದು ಅವರು ಹೇಳುತ್ತಿದ್ದಾರೆ ಯುಗ ಯುಗಾಂತರಗಳಿಂದ ಸಾಮಾಜಿಕವಾಗಿ, ಆರ್ಥಿಕವಾಗಿ ನೊಂದು ಹಿಂದುಳಿದಿರತಕ್ಕ ಜನಗಳ ಜನಾಂಗಗಳ ಉದ್ಧಾರ ಆಗಬೇಕಾದ್ದು ಸ್ತುತ್ಯವಾದ ವಿಚಾರ. ಕೆಲಸವನ್ನು ಮಾಡುವುದಕ್ಕೆ ಹೊರಟಾಗ ಅದಕ್ಕೆ ಕೆಲವರ ಮನಸ್ಸು ತಡೆಯದೇ ಹೋದರೆ ನಾನೇನು ಮಾಡಲಿ? ಸರ್ಕಾರದ ಕರ್ತವ್ಯವನ್ನು ಮಾತ್ರ ನಾವು ಜನತೆಯ ಮುಂದೆ ಹೇಳುತ್ತಿದ್ದೇವೆ. ಅದರಂತೆ ನಡೆದುಕೊಂಡು ಹೋಗಬೇಕೆಂಬುದು ನಮ್ಮ ಇಚ್ಛೆ. ಇದಕ್ಕೆ ಏನೇ ಎಡರುತೊಡರುಗಳು ಬಂದರೂ ಅದಕ್ಕೆ ಅಂಜದೆ ನಾವು ನುಡಿದಂತೆ ನಡೆಯಬೇಕಾದ್ದು ನಮ್ಮ ಧರ್ಮ, ನಮ್ಮ ಕರ್ತವ್ಯ. ಅದನ್ನು ಮಾಡುತ್ತೇವೆ ಎಂದು ಹೇಳಿ ನಾನು ತಮಗೆ ಆಶ್ವಾಸನೆ ಕೊಡಬಲ್ಲೆ. ಮತ್ತೆ ಕೆಲವು ಭಾಗಗಳಲ್ಲಿ ಕೆಲವು ತೊಂದರೆಗಳು ಇವೆ. ನೀರಿನ ಅಭಾವ ಇದೆ, ಮಳೆ ಇಲ್ಲದೆ ತೊಂದರೆಯಾಗಿದೆ, ಇದರ ಕಡೆ ನೋಡಬೇಕು. ಎಲ್ಲಾ ವಿಷಯಗಳನ್ನೂ ನಾವು ನೋಡಬೇಕಾಗಿದೆ. ಯಾವ ಭಾಗದವರಿಗೆ ತೊಂದರೆಯಾಗಿದ್ದರೂ ಅದನ್ನು ಪರಿಹರಿಸುವುದು ಸರ್ಕಾರವನ್ನು ನಡೆಸತಕ್ಕಂಥವರ ಕರ್ತವ್ಯ. ಎಲ್ಲಿಯವರೆಗೆ ನಮಗೆ ಸರ್ಕಾರ ನಡೆಸುವ ಜವಾಬ್ದಾರಿ ಇರುತ್ತದೆಯೋ ಅಲ್ಲಿಯವರೆಗೆ ಆ ಭಾಗ, ಈ ಭಾಗ, ನಮ್ಮವರು, ನಮ್ಮ ಕಡೆಯವರು, ನಿಮ್ಮವರು ನಿಮ್ಮ ಕಡೆಯವರು ಎಂಬ ಯಾವ ಪಕ್ಷಪಾತವನ್ನೂ ದೃಷ್ಟಿಯನ್ನೂ ಇಟ್ಟುಕೊಳ್ಳದೆ ಎಲ್ಲಾ ಭಾಗಗಳೂ ನಮ್ಮ ರಾಜ್ಯ, ನಮ್ಮ ದೇಶ ನಮ್ಮ ಜನ ಎಂದು ಈ ಒಂದೇ ಒಂದು ಗುರಿಯನ್ನು ಇಟ್ಟು ಯಾವ ಕಾಲಕ್ಕೆ ಯಾರಿಗೆ ಸರ್ಕಾರದಿಂದ ಏನು ಆಗಬೇಕೋ ಅದನ್ನು ತ್ವರಿತವಾಗಿ ಮಾಡುವುದಕ್ಕೆ ನಾವು ಎಳ್ಳಷ್ಟೂ ಹಿಂಜರಿಯುವುದಿಲ್ಲ ಎನ್ನುವ ಆಶ್ವಾಸನೆಯನ್ನು ಕೂಡ ನಾನು ಕೊಡುತ್ತೇನೆ.

(ಶ್ರೀ ಡಿ. ದೇವರಾಜ್ ಅರಸ್)

ಕೊನೆಯದಾಗಿ ಒಂದು ಮಾತು ಏನೆಂದರೆ ಈ ನಿರ್ಣಯವನ್ನು ನನ್ನ ಒಂದು ಸ್ಥಾನದಿಂದ ತಂದಿರತಕ್ಕದ್ದು ಸಂತೋಷವೆಂದು ಕೆಲವು ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅದನ್ನು ಆಗಲೇ ಮಾನ್ಯ ಕೃಷ್ಣನ್‌ರವರು ತಿಳಿಸಿದ್ದಾರೆ. ಅದರ ಜೊತೆಗೆ, ಇವರು ಅರಸು ಮನೆತನದವರು ಆಗಿದ್ದರೂ ಇದನ್ನು ತಂದಿದ್ದಾರೆಂದು ಹೇಳಿದರು. ಇದರ ಬಗ್ಗೆ ನಾನು ಏನೂ ಹೆಚ್ಚು ಹೇಳಬೇಕಾದ ಅಗತ್ಯವಿಲ್ಲ. ಆದರೂ ಮತ್ತೊಮ್ಮೆ ಸ್ವಲ್ಪ ವಿಶದಪಡಿಸೋಣ ಎಂದು ಎರಡು ಮಾತುಗಳನ್ನು ಹೇಳುತ್ತೇನೆ. ನಾನು ಯಾವಾಗ ರಾಜಕೀಯದಲ್ಲಿ ಕಾಲಿಟ್ಟೆನೋ ಅವಾಗಿನಿಂದ ನಾನು ಅರಸು ಮನೆತನಕ್ಕೆ ಸೇರಿದವನು, ಜನತೆಯೇ ಬೇರೆ ನಾನು ಬೇರೆ ಎಂದು ತಿಳಿದುಕೊಂಡು ಬಂದವನಲ್ಲ. ಅದಕ್ಕೆ ಕಾರಣವೇನೆಂದರೆ, ನಾನು ಹುಟ್ಟಿದ್ದು ಹಳ್ಳಿಯಲ್ಲಿ, ಬೆಳೆದಿದ್ದು ಹಳ್ಳಿಯಲ್ಲಿ, ಮತ್ತು ಇದುವರೆಗೆ ಇದ್ದದ್ದೂ ಹಳ್ಳಿಯಲ್ಲಿ. ಆದರೆ ದೇಶದ ವಿಚಾರ ಬಂದಾಗ ದೇಶಾಭಿಮಾನ ಇರುವಂಥವರು, ಯಾವ ಜಾತಿ ಮತ ಬೇಧವಿಲ್ಲದೆ, ಯಾರ್ಯಾರಿಗೆ ಸ್ವಾತಂತ್ರ್ಯಾಭಿಮಾನ ಇದೆಯೋ, ಅವರೆಲ್ಲರೂ ದೇಶಕ್ಕಾಗಿ ಹೋರಾಟವನ್ನು ಮಾಡಿದ್ದಾರೆ. ಅಂತಹ ಹೋರಾಟ ಮಾಡಿದ ಲಕ್ಷೋಪಲಕ್ಷ ಜನರಲ್ಲಿ ನಾನೂ ಒಬ್ಬ. ಒಂದು ಮುಖ್ಯವಾದ ಅಂಶವೇನೆಂದರೆ, ನನಗೆ ನನ್ನ ಜಾತಿಯೆಂದು ಏನೂ ಹೆಚ್ಚಿನ ರೀತಿಯ ಪ್ರೀತಿಯೂ ಇಲ್ಲ, ಅಥವಾ ಬೇರೆ ಜಾತಿಯವರಲ್ಲಿ ಕಡಿಮೆ ರೀತಿಯ ಪ್ರೀತಿಯೂ ಇಲ್ಲ. ನಾವೆಲ್ಲರೂ ಒಂದೇ ಜಾತಿಯವರು ಎನ್ನತಕ್ಕಂತಹ ಒಂದು ಭಾವನೆಯಲ್ಲಿ ನಾನು ಬೆಳೆದಿರತಕ್ಕವನು; ಅದೇ ರೀತಿ ಈಗ ಕೂಡ ನಡೆಯುತ್ತಿದ್ದೇನೆ. ಮತ್ತು ಈ ಒಂದು ರಾಜತ್ವ ಅಥವಾ ಫ್ಯೂಡಲಿಸಂ ಎಂದು ನಾವು ಏನು ಕರೆಯುತ್ತಿದ್ದೇವೆ, ಇದನ್ನು ಇತರ ಯುವಕರಿಗೆ ಚರಿತ್ರೆಯಲ್ಲಿ ಓದಿದಾಗ ಏನೊಂದು ಮನಸ್ಸಿನಲ್ಲಿ ಪರಿಣಾಮವಾಗುತ್ತಿತ್ತೋ ಅದೇ ಪರಿಣಾಮ ನನ್ನ ಮೇಲೂ ಆಗುತ್ತಿತ್ತು. ಹಿಂದೆ ನಡೆದಿರತಕ್ಕಂತಹ ವಿದ್ಯಮಾನಗಳನ್ನು ನೋಡಿದಾಗ ಬಾಕಿ ಜನರಿಗೆ ಏನು ಅನುಭವವಾಗುತ್ತಿತ್ತೋ ಅದೇ ಅನುಭವ ನನಗೂ ಆಗುತ್ತಿತ್ತು. ಈ ರಾಜತ್ವಕ್ಕೆ ಅಥವಾ ಫ್ಯೂಡಲಿಸಂನ ಬಗ್ಗೆ ನನಗೆ ಆಗಿನಿಂದಲೇ ವಿರೋಧವಾದ ಮನೋಭಾವ ಬೆಳೆದು ಬಂದಿತ್ತು. ಏಕೆಂದರೆ ಅದರಲ್ಲಿ ಯಾವುದೂ ರೇಶನೇಲ್ ಇಲ್ಲ, ತರ್ಕಕ್ಕೆ ನಿಲ್ಲುವ ವಿಚಾರ ಇಲ್ಲ. ಯಾವಾಗ ನಮ್ಮಲ್ಲಿ ರಾಜಕೀಯ ತತ್ವಗಳ ಆಧಾರದ ಮೇಲೆ ಕೆಲವು ಇನ್‌ಸ್ಟಿಟ್ಯೂಶನುಗಳು ಬೆಳೆದುಬಂತೋ, ಆಗ, ಅಂತಹ ಸನ್ನಿವೇಶಗಳಲ್ಲಿ, ಅದು ಒಂದು ಕಾಲದಲ್ಲಿ ಒಳ್ಳೆಯದಾಗಿದ್ದರೂ, ಈ ಕಾಲದಲ್ಲಿ ಅದರಿಂದ ದೇಶಕ್ಕೆ ಮತ್ತು ದೇಶದ ಜನರಿಗೆ ಪ್ರಯೋಜನವಾಗುವುದಿಲ್ಲ ಎನ್ನುವ ಅಭಿಪ್ರಾಯ ಬಂದಿದೆ. ನಮ್ಮ ದೇಶದ ಈಗಿರುವ ಪರಿಸ್ಥಿತಿಗೆ ಬೇರೆ ರೀತಿಯ ತತ್ವಗಳೇ ಬರಬೇಕಾಗುತ್ತದೆ ನಾನು ಮೊದಲೇ ಹೇಳಿದ ಹಾಗೆ, ಯಾವುದಾದರೂ ಒಂದು ವ್ಯಕ್ತಿಗೆ ಅಥವಾ ಒಂದು ಸಂಸ್ಥೆಗೆ, ಅಥವಾ ಒಂದು ತತ್ವಕ್ಕೆ ಹುಟ್ಟು, ಇರುವಿಕೆ ಮತ್ತು ಸಾವು-ಇವು ಮೂರು ಇದ್ದೇ ಇರಬೇಕು. ಹಿಂದೆ ಮಹಾತ್ಮಾ ಗಾಂಧೀಜಿಯವರು ಈ ರಾಜರುಗಳ ಬಗ್ಗೆ ಹೇಳಿದಾಗ, ಅದು ಸರಿ ಎಂದು ನನಗೆ ತೋರಿ ನಾನೂ ಅದಕ್ಕೆ ವಿರುದ್ಧವಾಗಿ ಎದ್ದು ನಿಂತಿದ್ದೇನೆ. ಆಗ ಆಶ್ಚರ್ಯವೇನೆಂದರೆ, ನಾನು ಸಹ ಇದರ ಬಗ್ಗೆ ವಿರೋಧ ಮಾಡಿದಾಗ ಕೆಲವರಿಗೆ ಆಶ್ಚರ್ಯವಾದದ್ದು ಉಂಟು. ಆ ಮೇಲೆ ಕೆಲವರು ನನ್ನ ಹೆಸರು ಹೇಳಿ ಇಡೀ ಮೈಸೂರು ರಾಜ್ಯದಲ್ಲಿ ಭಾಷಣ ಮಾಡಿದ್ದೂ ಉಂಟು. ಆದ್ದರಿಂದ ೩೫ ವರ್ಷಗಳ ಹಿಂದೆ ಇದ್ದಂತಹ ಮನಸ್ಸು ಬದಲಾವಣೆಯಾಗಿದೆ ಎಂದು ಹೇಳುವುದಕ್ಕೆ ಯಾವ ಕಾರಣವೂ ಇಲ್ಲ. ಆಗ ಏನು ಮನಸ್ಸು ಇತ್ತೋ ಅದೇ ಮನಸ್ಸು ಈಗಲೂ ಇದೆ. ಇಷ್ಟು ಹೇಳಿ, ತಾವೆಲ್ಲರೂ ಇದನ್ನು ವಿರೋಧ ಮಾಡದೆ ಸ್ವಾಗತ ಮಾಡಿದ್ದಕ್ಕಾಗಿ ತಮ್ಮೆಲ್ಲರಿಗೂ ನಾನು ಅಭಿನಂದಿಸುತ್ತೇನೆ. ಇದಕ್ಕೆ ಸರ್ವಾನುಮತದ ಸ್ವಾಗತವನ್ನು ತಾವೆಲ್ಲರೂ ಮಾಡಿದ್ದೀರಿ. ಇದಕ್ಕೆ ಇನ್ನೊಂದು ಕಾರಣವನ್ನು ಹೇಳುವುದು ಅವಶ್ಯಕವೆಂದು ಕಾಣುತ್ತದೆ. ಇವತ್ತು ನಾವು ಈ ಮಹತ್ತರವಾದ ನಿರ್ಣಯವನ್ನು ತಮ್ಮ ಅಧ್ಯಕ್ಷತೆಯಲ್ಲಿ ಚರ್ಚೆಮಾಡಿ ಅಂಗೀಕರಿಸುತ್ತಿದ್ದೇವೆ. ಆ ಒಂದು ಸುಸಂಧರ್ಭ ನಮಗೆ ಸಿಕ್ಕಿದೆ. ಇದು ಬಹಳ ಹೆಮ್ಮೆ ಮತ್ತು ಸಂತೋಷಪಡತಕ್ಕಂತಹ ವಿಚಾರವೆಂದು ಹೇಳಿದರೆ ತಪ್ಪಾಗಲಾರದು. ತಮ್ಮ ಘನ ಅಧ್ಯಕ್ಷತೆಯಲ್ಲಿ ಈ ಒಂದು ಚರಿತ್ರಾರ್ಹವಾದ ಘಟನೆ ನಡೆದಿರುವುದು ನಮ್ಮ ಪುಣ್ಯವೆಂದು ಭಾವಿಸುತ್ತೇನೆ. ತಾವು ಎಲ್ಲಾ ಪಕ್ಷದ ಸದಸ್ಯರಿಗೂ ಸಮಾಧಾನವಾಗಿ ಮಾತನಾಡುವುದಕ್ಕೆ ಅವಕಾಶಕೊಟ್ಟು ಅವರೆಲ್ಲರೂ ಸಂತೋಷದಿಂದ ಬೆಂಬಲ ಕೊಡುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದೀರಿ. ಇಂತಹ ಸಂದರ್ಭದಲ್ಲಿ ತಾವು ಅಧ್ಯಕ್ಷರಾಗಿರುವುದು ಒಂದು ಶುಭ ಸಂಕೇತವೆಂದು ತಿಳಿದು ನಾನು ತಮ್ಮನ್ನು ಮತ್ತೊಮ್ಮೆ ಅಭಿನಂದಿಸಿ ಈ ನಿರ್ಣಯಕ್ಕೆ ತಮ್ಮೆಲ್ಲರ ಬೆಂಬಲವನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಎಲ್ಲರೂ ಕರತಾಡನ ಮಾಡಿ ಸಂತೋಷವನ್ನು ವ್ಯಕ್ತಪಡಿಸಿದರು)

ಅಧ್ಯಕ್ಷರು .—ನಾನು ಈ ನಿರ್ಣಯವನ್ನು ಸಭೆಯ ಒಪ್ಪಿಗೆಗೆ ಹಾಕುತ್ತೇನೆ. ಅದು ಹೀಗಿದೆ :—

''ಭಾರತದ ಸಂವಿಧಾನದಲ್ಲಿ ನಮೂದಿಸಿದ ಈ ರಾಜ್ಯದ ಹೆಸರನ್ನು 'ಕರ್ನಾಟಕ' ಎಂಬುದಾಗಿ ಬದಲಾಯಿಸಬೇಕೆಂದು ಈ ಸಭೆಯವರು ತಮ್ಮ ಖಚಿತ ಅಭಿಪ್ರಾಯವನ್ನು ಘೋಷಿಸಿ ಈ ಬಗ್ಗೆ ಅಗತ್ಯವಾದ ಸಂವಿಧಾನದ ತಿದ್ದುಪಡಿಗಳನ್ನು ರಾಜ್ಯಸರ್ಕಾರದವರು ಪಡೆದುಕೊಳ್ಳಲು ಕ್ರಮ ಕೈಕೊಳ್ಳಬೇಕೆಂದು ಈ ಸಭೆಯವರು ಶಿಫಾರಸು ಮಾಡುತ್ತಾರೆ''

(ಎಲ್ಲಾ ಸದಸ್ಯರು ಜಯಕಾರ ಮಾಡಿದರು)

ಅಧ್ಯಕ್ಷರು.—ನಿರ್ಣಯದ ವಿರೋಧ ಯಾರು ಇಲ್ಲವಾದ್ದರಿಂದ ಈ ನಿರ್ಣಯವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

The Resolution was adopted

ಶ್ರೀ ವಾಟಾಳ್ ನಾಗರಾಜ್.—ಈ ಶುಭ ಸಂತೋಷದ ಸಮಯದಲ್ಲಿ ಸಂತೋಷಸೂಚಕವಾಗಿ ನಾನು ಈ ಮಲ್ಲಿಗೆ ಹೂಗಳನ್ನು ಎಲ್ಲರ ಮೇಲೆಯೂ ಚೆಲ್ಲುತ್ತೇನೆ.

(ವಾಟಾಳ್ ನಾಗರಾಜರು ಮತ್ತು ಎಸ್. ಬಂಗಾರಪ್ಪನವರು ಮಲ್ಲಿಗೆ ಹೂವನ್ನು ಚೆಲ್ಲಿದರು)

ಶ್ರೀ ಡಿ. ದೇವರಾಜ ಅರಸ್.—ನಾನು ಈಗ ''ಕರ್ನಾಟಕಕ್ಕೆ'' ಎಂದು ಹೇಳುತ್ತೇನೆ. ತಾವೆಲ್ಲರೂ ಒಕ್ಕೊರಲಿನಿಂದ ''ಜಯವಾಗಲಿ'' ಎಂದು ಹೇಳಬೇಕು.

ಶ್ರೀ ಡಿ. ದೇವರಾಜ ಅರಸ್.—''ಕರ್ನಾಟಕಕ್ಕೆ''

ಎಲ್ಲ ಸದಸ್ಯರು.—''ಜಯವಾಗಲಿ''

ಶ್ರೀ ಡಿ. ದೇವರಾಜ ಅರಸ್.—''ಕರ್ನಾಟಕಕ್ಕೆ''

ಎಲ್ಲ ಸದಸ್ಯರು.—''ಜಯವಾಗಲಿ''

ಶ್ರೀ ಡಿ. ದೇವರಾಜ ಅರಸ್.—''ಕರ್ನಾಟಕಕ್ಕೆ''

ಎಲ್ಲ ಸದಸ್ಯರು.—''ಜಯವಾಗಲಿ''

(ಎಲ್ಲಾ ಸದಸ್ಯರು ''ಕರ್ನಾಟಕಕ್ಕೆ ಜಯವಾಗಲಿ'' ಎಂದು ಘೋಷಣೆಯನ್ನು ಮತ್ತು ಕರತಾಡನವನ್ನು ಮಾಡಿದರು)

ಅಧ್ಯಕ್ಷರು.—ಈಗ ಸಭೆಯು ಮುಕ್ತಾಯಗೊಂಡು ನಾಳೆ ಮಧ್ಯಾಹ್ನ ೧-೦೦ ಗಂಟೆಗೆ ಪುನಃ ಸೇರುವುದು.

The House adjourned at Forty five Minutes past Six of the Clock to meet again at one of the Clock on Friday the 28th July 1972.

WD 18205-GPB—550—30-4-73